# ಅಪರಂಜಿ

ತಿಳಿನಗೆಯ ಕಾರಂಜಿ

ಫೆಬ್ರವರಿ 2022




ಅದೇನು ಕಷ್ಟ?

ನಿಮ್ಮ ಜೊತೆ ಇಷ್ಟು ವರ್ಷ ಬದುಕಿಲ್ಲವೇ?

ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 39**

**ಸಂಚಿಕೆ - 5**

**ಫೆಬ್ರವರಿ - 2022**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಘಾಸಿಪಟ್ಟು ಕೂತೆ ನಾನು | ನಾಗೂಶ್ರೀ ಸೂರಿ | 5 |
| ಸ್ಟೇಷನ್ ಕಡೆ ನಡೀರಿ | ನಾಗೂಶ್ರೀ ಸೂರಿ | 6 |
| ಹೀಗೂ ಉಂಟೆ | ವಾಟ್ಸಪ್ ಕೃಪೆ | 9 |
| ಅರ್ಥ ಸಾಧನ | ರಮೇಶಚಂದ್ರ | 10 |
| ವೃತ್ತಿ ಬದುಕಿನ ಹಾಸ್ಯ ರಸಾಯನ!! | ಜಿ.ಎಸ್.ಟಿ. ಪ್ರಭು | 14 |
| ಸಂಗೀತ ಆಹಾ... ಆಹಾ.. | ನಳಿನಿ ಟಿ. ಭೀಮಪ್ಪ | 17 |
| ನಮ್ಮ ಪ್ರವಾಸಕ್ಕೆ ಜಯವಾಗಲಿ | ಸುಚಿತ್ರಾ ಹೆಗಡೆ | 19 |
| ಅಭಿಮನ್ಯು | ಕೆ.ಎಸ್. ಸೋಮೇಶ್ವರ | 24 |
| ಕರಾಮತಿ | ಅರವಿಂದ ಜಿ. ಜೋಷಿ | 26 |
| ಎಮ್ಮೆ ಕಟ್ಟಿ ನೋಡು | ಸಿ.ಆರ್. ಸತ್ಯ | 28 |
| ರಂಗ ರುಕ್ಮಿಣಿ... ಮಾವಿನ ಪ್ರಸಂಗ | ಸಿ.ಎ. ವಿಲಾಸ ನಾ.ಹುದ್ದಾರ | 30 |
| ತುಂತುರು | ದನಂಅ | 32 |
| ಏನಾಯ್ತು ನಿಮಗೇನಾಯ್ತು | ಹೆಚ್. ಗೋಪಾಲಕೃಷ್ಣ | 34 |
| ಮದುವೆ–ಆಸ್ಕರ್ ವೈಲ್ಡ್ ಕಣ್ಣಿನಲ್ಲಿ | ಬೇಲೂರು ರಾಮಮೂರ್ತಿ | 38 |
| ನಾನೊಬ್ಬನೇ ಹಾಗೇ, ಹೀಗೆ ಅಲ್ಲ | ವಿ. ವಿಜಯೇಂದ್ರ ರಾವ್ | 40 |

ಮುಖಪುಟ : **ಅಮೃತ್ ವಿ.**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



## ಅಪರಂಜಿ ಕಿಡಿ

**●ಪ್ರಕಾಶ್**

ಒಮಿಕ್ರೋನ್ ನೈಸರ್ಗಿಕ ಲಸಿಕೆಯಲ್ಲ – ಸುದ್ದಿ

**ಅಂಗದ್ರೇ ನ್ ಸಾ ?!**

***

ವಿಮಾನ ಇಂಧನ ಬೆಲೆ ಏರಿಕೆ – ಪತ್ರಿಕೆ

**ಭೂಚರರಾದ ನಮಗಂತೂ ಭಯವಿಲ್ಲ !**

***

ಸ್ವಚ್ಛ ಭಾರತ ಯೋಜನೆ : 108 ಕೋಟಿ ದುರ್ಬಳಕೆ – ಪತ್ರಿಕೆ

**'ಸ್ವಚ್ಛ' ಅಂದರೆ ಏನು ಅಂತ ಅರ್ಥವಾಯಿತು !!**

***

ಪೀಣ್ಯ ಅಭಿವೃದ್ಧಿ ; ಬಿಡದ ಗ್ರಹಣ – ಪತ್ರಿಕೆ

**ಹಿಂದೆ ಸಾಲ ––ಗ್ರಾಮ ಅಂತ ಕರೆಯುತ್ತಿದ್ದರು ಪಾಪ !**

***

ನಗುವಿಗೇಕೆ ರೇಷನ್ ? ಕಾರ್ಯಕ್ರಮ – ಸುದ್ದಿ

**ಅಪರಂಜಿ ನಸುನಕ್ಕಳಂತೆ !!**

***

ದೇವಾಲಯಗಳ ಸ್ವಾಯತ್ತತೆಗೆ ತೊಂದರೆ ಎಲ್ಲಿದೆ? – ಪತ್ರಿಕೆ

**ಭಗವಂತನೇ ಬಲ್ಲ !!**

***

ಮೇಕೆ ದಾಟು ; ಸುಳ್ಳು ಸುದ್ದಿ ಹರಡ ಬೇಡಿ – ಹೇಳಿಕೆ

**ಸತ್ಯ – ಅಸತ್ಯ ಕಂಡವರಾರು ?!**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಅಪರಂಜಿಯ ಪ್ರಾರಂಭದ ದಿನಗಳಲ್ಲಿ ಪತ್ರಿಕೆಗೆ ಹೊಸ ಬರಹಗಾರರನ್ನು ಗುರುತಿಸಿ ಅವರ ಕೈಯಿಂದ ಲೇಖನಗಳನ್ನು ಬರೆಸುವುದು ನನ್ನ ಪ್ರಯಾರಿಟಿ ಕೆಲಸಗಳಲ್ಲಿ ಒಂದಾಗಿತ್ತು. ಹಲವು ಹಿರಿಯ ಲೇಖಕರು ಕೊರವಂಜಿಯ ದಿನಗಳಿಂದ ನಮಗೆ ಬಳುವಳಿಯಾಗಿ ಬಂದಿದ್ದವರು. ಇವರುಗಳಲ್ಲಿ ಅ.ರಾ.ಸೇ, ದಾಶರಥಿ ದೀಕ್ಷಿತ್, ಕೇಫ, ರಾಮಿ ಇವರುಗಳು ಮುಖ್ಯರು. ಆ ದಿನಗಳಲ್ಲಿ ನಮ್ಮ ಬಳಗವನ್ನು ಸೇರಿದ ಹೊಸ ಬರಹಗಾರರಲ್ಲಿ ಎಂ.ಎಸ್.ಕೆ ಪ್ರಭು, ಬಿ.ಎಸ್ ಚಂದ್ರಶೇಖರ್, ಶಾಂತಾ ರಘು, ನೆನಪಿಗೆ ಬರುತ್ತಾರೆ. ನನ್ನ ಅಕ್ಕಂದಿರಾದ ಕಮಲಾ ರಾಮಸ್ವಾಮಿ ಮತ್ತು ಲೀಲಾ ಮಿರ್ಲೆ ಇಬ್ಬರೂ ಪತ್ರಿಕೆಗೆ ಪ್ರಾರಂಭದಿಂದ ಒತ್ತಾಸೆಯಾಗಿ ನಿಂತರು. ಇಷ್ಟಿದ್ದರೂ ಹೊಸಬರಹಗಾರರನ್ನು ಗುರುತಿಸುವ ನನ್ನ ಪ್ರಯತ್ನ ನಿರಂತರವಾಗಿ ನಡೆದೇ ಇತ್ತು. ಅಪರಂಜಿಯ ಅದೃಷ್ಟವೋ ಏನೋ, ಈ ಹುಡುಕಾಟದ ಮೊದಲ ಫಲಶ್ರುತಿಯೇ ಶ್ರೀನಿವಾಸ ವೈದ್ಯ. ವೈದ್ಯರ ಬರವಣಿಗೆ ಅಪರಂಜಿಯ ಓದುಗರಿಗೆಲ್ಲಾ ಪರಿಚಯವಿರುವಂತಹದೇ. ತೊಂಬತ್ತರ ದಶಕದ ಪ್ರಾರಂಭದಲ್ಲಿ ಅಪರಂಜಿಗೆ ಇನ್ನೊಬ್ಬ ಪ್ರತಿಭಾವಂತ ಲೇಖಕರು ಬರೆಯಲು ಪ್ರಾರಂಭಿಸಿದರು. "ನಾಗೂಶ್ರೀ ಸೂರಿ" ಎಂಬ ಕಾವ್ಯನಾಮದಡಿ ಬರೆಯುತ್ತಿದ್ದ ಈತನ ಪೂರ್ಣ ನಾಮಧೇಯ ಗೂಳೂರು ಸೂರ್ಯನಾರಾಯಣ ರಾವ್. ಈತ ನನ್ನ ಬಾಲ್ಯದ ಗೆಳೆಯ. ನಮಗೆಲ್ಲಾ ಅವನು ಸೂರಿ.

ಸೂರಿ ನನಗೆ ಇಂಜಿನಿಯರಿಂಗ್ ಸಹಪಾಠಿ. ಓದು ಮುಗಿಸಿದ ನಂತರ ನಾವಿಬ್ಬರೂ ಎಚ್.ಎಂ.ಟಿ ಸೇರಿದೆವು. ಅವನು ಮೇಂಟೆನೆನ್ಸ್ ವಿಭಾಗಕ್ಕೆ ಸೇರಿದರೆ ನಾನು ಡಿಸೈನ್ ವಿಭಾಗಕ್ಕೆ ಆಯ್ಕೆಯಾದೆ. ಎಂಬತ್ತರ ದಶಕದ ಪ್ರಾರಂಭದಲ್ಲಿ ಅಪರಂಜಿ ಪತ್ರಿಕೆಯ ಹೊಣೆಯನ್ನು ಹೊರುವ ವೇಳೆಗಾಗಲೇ ನಾನು ಎಚ್.ಎಂ.ಟಿ ಬಿಟ್ಟು ನನ್ನದೇ ಉದ್ಯಮ ನಡೆಸುತ್ತಿದ್ದೆ. ಸೂರಿ ಸಹಾ ಎಚ್.ಎಂ.ಟಿ ಕೆಲಸಕ್ಕೆ ರಾಜೀನಾಮೆ ನೀಡಿ ಬೇರೊಂದು ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದ. ಹಲವು ಪ್ರಾರಂಭದ ಅಪರಂಜಿ ಸಂಚಿಕೆಗಳನ್ನು ನೋಡಿ ಸೂರಿಗೂ ಬರೆಯುವ ಉತ್ಸಾಹ ಬಂತು. ನನಗೆ ಅದರಲ್ಲೇನೂ ಆಶ್ಚರ್ಯ ಕಾಣಲಿಲ್ಲವೆನ್ನಿ. ಸೂರಿಯದು ಮೊದಲಿನಿಂದಲೂ ಬಹು ಹಾಸ್ಯಮಯ ಪ್ರಕೃತಿ. ವ್ಯಂಗ್ಯ ಚಿತ್ರ, ಅಣಕು ಕವನ , ನಗೆ ಬರಹ ಇವೆಲ್ಲದರಲ್ಲೂ ಸೂರಿಗೆ ಪ್ರತಿಭೆ ಇತ್ತು. ಅಪರಂಜಿಗೆ ಸೂರಿ ಬರೆಯಲು ಪ್ರಾರಂಭಿಸಿದ ಮೇಲೆ ನಮ್ಮಿಬ್ಬರ ಸಂಪರ್ಕ ಇನ್ನೂ ಹತ್ತಿರವಾಯಿತು. ಒಮ್ಮೆ ನಾವು ನಡೆಸುತ್ತಿದ್ದ ಹಾಸ್ಯೋತ್ಸವದಲ್ಲಿ ಸೂರಿ ತನ್ನ ಅಣಕು ಕವನ "ಇದಿರು ಮನೆಯ ಶಾರದೆ " ಯನ್ನು ವಾಚಿಸಿ ನೋಡುಗರ ಮೆಚ್ಚುಗೆ ಗಳಿಸಿದ್ದ.

ಸೂರಿ ಸ್ನೇಹಜೀವಿ. ಅವನ ಅಂತಃಕರಣ ಬಹು ನವಿರು. ಕಾರ್ಪೊರೇಟ್

ಸಂಸ್ಥೆಗಳ ಕಚ್ಚಾಟದ ಪರಿಸರ ಅವನಿಗೆ ಒಗ್ಗಲಿಲ್ಲ. ಹಾಗಾಗಿ ವೃತ್ತಿ ಜೀವನ ಅವನಿಗೆ ನಿರಾಶಾದಾಯಕವಾಗಿತ್ತು. ತನ್ನ ಬರಹಗಳ ಮೂಲಕ ತೃಪ್ತಿಯನ್ನು ಕಾಣುವ ಪ್ರಯತ್ನವನ್ನ ಅವನು ನಡೆಸಿದ್ದ. ಒಂದು ಸಂಜೆ ಅವನೊಂದಿಗೆ ಕುಳಿತು ಹರಟುತ್ತಿದ್ದಾಗ, ಒಮ್ಮೆಲೇ " ಶಿವು, ದೇವರಿಗೂ ಶೋಚನೀಯ ಪರಿಸ್ಥಿತಿ ಬರುತ್ತೇನೋ?" ಅಂತ ಅಮಾಯಕನಂತೆ ಕೇಳಿದ. ಅರೆ, ಇನ್ನೂ ಮೊದಲನೇ ರೌಂಡು. ಈಗಲೇ ಇವ ಹೀಗೇಕೆ ಮಾತಾಡುತ್ತಿದ್ದಾನೆ ಅನ್ನಿಸಿದರೂ, ಗೆಳೆತನಕ್ಕೆ ಕಟ್ಟು ಬಿದ್ದು ಪ್ರಾಮಾಣಿಕ ಉತ್ತರ ಕೊಡೋಣ, ಕುಹಕ ಬೇಡ ಅನಿಸಿತು. "ಖಂಡಿತ ಇಲ್ಲ ಸೂರಿ. ದೇವರು ಸತ್ ಚಿತ್ ಆನಂದ ಸ್ವರೂಪಿ. ಅವನಿಗೆ ಶೋಚನೀಯ ಪರಿಸ್ಥಿತಿ ಹೇಗೆ ಬರುಕ್ಕೆ ಸಾಧ್ಯ?" ಅಂತ ಉತ್ತರಿಸಿದೆ. "ನಿನಗೇ ತಿಳಿದಿರೋ ಹಾಗೆ ನನ್ನ ಪರಿಸ್ಥಿತಿ ಶೋಚನೀಯವಲ್ಲದಿದ್ದರೂ ಅದಕ್ಕೆ ಬಹು ದೂರವೇನೂ ಇಲ್ಲ. ಆದರೆ ನಮ್ಮ ಸ್ವಾಮೀಜಿ ನೀನೇ ದೇವರು, ಆ ಜ್ಞಾನ ನಿನಗೆ ಅಂತರ್ಗತವಾಗಿಲ್ಲ ಅಷ್ಟೇ. ಅಂತ ಮೊನ್ನೆ ಪ್ರವಚನದಲ್ಲಿ ಹೇಳಿದ್ರು. ಅಟ್ ಲೀಸ್ಟ್ ನಿನ್ನಲ್ಲೇ ದೇವರು ಇದ್ದಾನೆ ಅಂತಲಾದ್ರೂ ಹೇಳಿದ್ರೆ  ಏನೋ, ಒಂದು ಮೂಲೇಲಿ ಅವ ಕುಳಿತು ನನ್ನ ಪಡಿಪಾಟಲನ್ನ ನೋಡ್ತಾ ಇದಾನೇನೋ ಅಂದ್ಕೋತಾ ಇದ್ದೆ  ನನಗೆ ಯಾವತ್ತೂ ನಾನೇ ದೇವರು ಅಂತ ಅನ್ನಿಸೇ ಇಲ್ಲವಲ್ಲೋ" ಅಂತ ಹೇಳಿ ಪ್ಲೇಟಿನಲ್ಲಿದ್ದ ಪಕೋಡಕ್ಕೆ ಕೈ ಹಾಕಿದ.

ಸೂರಿಗೆ ಇಂತಹ ಗಹನವಾದ ಚಿಂತನೆಗಳು ಅಂದ್ರೆ ಬಹು ಇಷ್ಟ. ಹೇಗಾದ್ರೂ ಮಾಡಿ ವೈಜ್ಞಾನಿಕವಾಗಿಯೇ ದೇವರನ್ನ ತಿಳೀಬೇಕು ಅಂತ ಅವನ ಹಂಬಲ. ಹಾಕಿಂಗ್, ವೈನ್‌ಬರ್ಗ್ ಇವರನ್ನೆಲ್ಲಾ ಓದಿಕೊಂಡು ಕ್ವಾಂಟಮ್ ಫೀಲ್ಡ್ ಅಂದ್ರೆ ಹಿರಣ್ಯಗರ್ಭಾನೇ ಅಂತ ಕಂಡಕಂಡೋರನ್ನೆಲ್ಲಾ ಕೇಳಿ ಅವ್ರು ಇವನನ್ನ ಕಂಡರೆ ಅನುಮಾನಿಸೋ ಹಾಗೆ ಮಾಡಿಕೊಂಡು ಬಿಟ್ಟಿದ್ದ.

ಸಿಕ್ಕಿದಾಗಲೆಲ್ಲಾ ಅವನು, "ಶಿವು, ಅದು ಹೇಗೆ ನೀನು ಭಗವದ್ಗೀತೇನ ಪೂರ್ತಿ ಓದಿ ಮುಗಿಸ್ದೆ? ನನಗೆ ಮೂರು ಪುಟ ಓದೋ ಹೊತ್ತಿಗೆ ಮುನ್ನೂರು ಸಂಶಯಗಳು ಹುಟ್ಟಿರುತ್ವೆ. ಮುಂದುವರಿಯುಕ್ಕೇ ಆಗುಲ್ಲ" ಅಂತ ಪೇಚಾಡಿಕೊಳ್ತಾ ಇದ್ದದ್ದು ನನಗಿನ್ನೂ ನೆನಪಿನಲ್ಲಿದೆ.

ಬೆಂಗಳೂರಿನಲ್ಲಿ ಮೆಟ್ರೋ ಶುರುವಾದಾಗ ನನ್ನನ್ನ ಮೆಟ್ರೋದಲ್ಲಿ ಒಂದು ಸಲ ಸುತ್ತಾಡಿಸು ಅಂತ ಸೂರಿ ನನಗೆ ದುಂಬಾಲುಬಿದ್ದಿದ್ದ. ಸರಿ ಅಂತ ಹೇಳಿ ನಾನು ಅವನನ್ನ ಕರೆದುಕೊಂಡು ಕ್ರಿಕೆಟ್ ಸ್ಟೇಡಿಯಂಗೆ ಹೋಗಿ ಅಲ್ಲಿ ಕಾರನ್ನ ನಿಲ್ಲಿಸಿ ಎಂ.ಜಿ. ರೋಡ್ ಸ್ಟೇಷನ್ನಿನಿಂದ ಬಯ್ಯಪ್ಪನ ಹಳ್ಳಿವರೆಗೂ ಮೆಟ್ರೋದಲ್ಲಿ ಪಯಣಿಸಿ ಅಲ್ಲಿಂದ ಹಿಂದಕ್ಕೆ ಬಂದಿದ್ದೆವು. ಈ ಜಾಲಿರೈಡ್‌ನಿಂದ ಸೂರಿಗಾದ ಆನಂದ ಅಷ್ಟಿಷ್ಟಲ್ಲ. ಆಮೇಲೆ ಕ್ಲಬ್‌ಹೌಸಿನಲ್ಲಿ ಊಟ ಮುಗಿಸಿ ಸೂರಿಯನ್ನ ಬೀಳ್ಕೊಟ್ಟಿದ್ದೆ. ಅದೇ ನಮ್ಮ ಕೊನೆಯ ಭೇಟಿಯಾಗುವುದೆಂದು ಅಂದು ನನಗೆ ತಿಳಿದಿರಲಿಲ್ಲ. ಅದರ ಮುಂದಿನ ವಾರ ಅವನು ಪತ್ನೀಸಮೇತ ಮಂತ್ರಾಲಯಕ್ಕೆ ಯಾತ್ರೆ ಹೋಗಿದ್ದು, ಅಲ್ಲಿಂದ ಟ್ರೈನಿನಲ್ಲಿ ಹಿಂತಿರುಗುತ್ತಿದ್ದಾಗ  ಟ್ರೈನಿನಲ್ಲೇ ಅಸು ನೀಗಿದ್ದು ಅನಂತರ ತಿಳಿಯಿತು.

ಸೂರಿ ಅಪರಂಜಿಗೆ ಬರೆಯಲು ಪ್ರಾರಂಭಿಸಿದ್ದು 1991ರಲ್ಲಿ. ಅವನ ಕೊನೆಯ ಬರಹ (ಒಂದು ಕವನ) 2007ರಲ್ಲಿ ಅಚ್ಚಾಯಿತು. ಇಂದಿನ ಓದುಗರಿಗೆ ಸೂರಿಯ

ಬರಹಗಳ ಸೊಗಡನ್ನು ಪರಿಚಯಿಸುವ ಉದ್ದೇಶದಿಂದ ಅವರ ಮೊದಲ ಲೇಖನ ಹಾಗೂ ಕೊನೆಯ ಕವನಗಳನ್ನು ಈ ಸಂಚಿಕೆಯಲ್ಲಿ ಅಳವಡಿಸಿರುವೆ. ಸೂರಿಗೆ ಈಗಲಾದರೂ ಅವನ ಕ್ವಾಂಟಮ್ ಫೀಲ್ಡ್ ಪ್ರಶ್ನೆಗೆ ಉತ್ತರ ದೊರಕಿರಲೆಂದು ಆಶಿಸುವೆ.

■

---

*ಅಣಕವಾಡು*

# ಫಾಸಿಪಟ್ಟು ಕೂತೆ ನಾನು

**| ನಾಗೂಶ್ರೀ ಸೂರಿ**

ಫಾಸಿಪಟ್ಟು ಕೂತೆ ನಾನು ಹೆಚ್ಚು ಕಾಸಿಗೆ
ನೀವು ಕೊಂಚ ಹೇಳಿ ನೋಡಿ ನಮ್ಮ ಬಾಸಿಗೆ

ಅನ್ನ ಸಾರು ತಿನ್ನುತಿದ್ರೆ ಮನೆಯಲಿ
ಇರುತೆ ಕೊಂಚ ಕಾಸು ಮಂತು ಕೊನೆಯಲಿ
ಹೊರಗೆ ಹೋಗಿ ಒಂದು ಬಾರಿ ತಿಂದು ಬಂದರೆ
ಅರ್ಧಜೇಬು ಖಾಲಿಯಾಗಿ ಪಡುವೆ ತೊಂದರೆ

ಫಾಸಿಪಟ್ಟು ಕೂತೆ ನಾನು ....

ಮಾವ ಕೊಟ್ಟ ಸೂಟು ಈಗ ಮಾಸಿದೆ,
ಬೇರೆ ಬೇಕು ಆದ್ರೆ ಎಲ್ಲಿ ಕಾಸಿದೆ?
ಹೊಲಿಬಹುದು ಅರ್ಧ ಪ್ಯಾಂಟು ಒಂದು ಕಾಲಿಗೆ
ಇನ್ನು ಅರ್ಧ ಕಾಯಬೇಕು ಬರುವ ಸಾಲಿಗೆ

ಫಾಸಿಪಟ್ಟು ಕೂತೆ ನಾನು ....

*ಅರವತ್ತರ ದಶಕದ ಬೇಕರಾರು ಕರ್ ಕೆ ಹಮೆ ಯೂ ನ ಜಾಯಿಯೆ...*
*ಹಾಡಿನ ಅಣಕವಾಡು*

# ಸ್ಟೇಷನ್ ಕಡೆ ನಡೀರಿ

**। ನಾಗೂಶ್ರೀ ಸೂರಿ**

ನಾನು ಮುಂಚೆ ಅಸೆಂಬ್ಲಿ ಫಿಟ್ಟರೂ ಅಂತ ಇದ್ದಾಗಲೇ ಎಷ್ಟೋ ಚೆನ್ನಾಗಿತ್ತು. ಸಾಯಂಕಾಲ ನಾಲ್ಕೂವರೆಗೆ ಸೈರನ್ ಆಗತಾ ಇದ್ದ ಹಾಗೇನೆ ಕಾರ್ಡ್ ಪಂಚ್ ಮಾಡಿ ಆಚೆ ಬರತಾ ಇದ್ದೆ. ಐದು ಘಂಟೆ ಆಗೋಕಿಲ್ಲ, ಬಸ್ಸು ಮನೇ ಮುಂದೇನೇ ಡ್ರಾಪ್ ಮಾಡಿ ಹೋಗತಾ ಇತ್ತು.

ಈ ಸೂಪರ್ ವೈಸರ್ ಅಂತ ಹಾಳಾದ್ದು ಯಾವಾಗ ಪ್ರಮೋಷನ್ ಬಂತು, ನೋಡಿ, ಅದಕ್ಕೆಲ್ಲಾ ಬಿತ್ತು, ಭಾರೀ ಕಲ್ಲು. ಒಂದು ದಿನ ಮನೇಗೆ ಟೈಮಿಗೆ ಸರಿಯಾಗಿ ಹೋಗೋಕ್ಕೆ ಆಗತಾ ಇಲ್ಲ. ಆ ಕಡೆ ಸೈರನ್ ಆಗತಾ ಇರಬೇಕು, ಅಷ್ಟು ಹೊತ್ತಿಗೆ ಸರಿಯಾಗಿ ಈ ಕಡೆ ವತ್ತರಿಸಿಕೊಂಡು ಬಂದಿರತ್ತೆ ಯಾವದಾದರೂ ಒಂದು ಪ್ರಾಬ್ಲಮ್ಮು – ಅಲೈನ್‌ಮೆಂಟು ಬರತಾ ಇಲ್ಲ ಅಂತಲೋನೋ, ಇಲ್ಲ ಬೇರಿಂಗ್ ಓವರ್ ಹೀಟು ಆಗತಾ ಇದೆ ಅಂತಲೋನೋ, ಇಲ್ಲಾ ಮತ್ತೊಂದು ಅಂತಲೋ. ಸರಿ. ಅದಕ್ಕೇನಾದರೂ ಇಲಾಜು ಹುಡುಕಿ ಅಷ್ಟೋ, ಇಷ್ಟೋ, ಅಂತ ಮಾಡೋ ಹೊತ್ತಿಗೆ ಏಳು ಘಂಟೆ ಆಗಿ ಹೋಗಿರತ್ತೆ. ಮನೇಗೆ ಬರೋದಿಕ್ಕೆ, ಓವರ್ ಟೈಮ್, ವ್ಯಾನು ಹೊರಡೋದು ಏಳೂವರೆ ಮೇಲೇನೆ. ಅದು ಊರೆಲ್ಲಾ ಸುತ್ತಿಕೊಂಡು, ನಮ್ಮ ಏರಿಯಾಗೆ ಬರೋ ಹೊತ್ತಿಗೆ, ಎಂಟೂಕಾಲು ಇಲ್ಲಾ ಎಂಟೂವರೇನೆ ಆಗಿರತ್ತೆ. ಅದೂ ಏನು? ಮನೇ ಹತ್ರ ಕೂಡಾ ಡ್ರಾಪ್ ಇಲ್ಲ. ಆ ಕಾಂಪ್ಲೆಕ್ಸ್ ಹತ್ತಿರ ಕೆಡವಿ ಹೋಕ್ತಾರೆ. ಅಲ್ಲಿಂದ ಆ ಅಂಗಡಿ ಸಾಲುಗಳನ್ನ ದಾಟಿ ಕೊಂಡು ಒಂದು ಅರ್ಧ ಘಂಟೆ ನಡೀಬೇಕು.

ಅಲ್ಲಿಂದ ಷಾರ್ಟ್‌ಕಟ್ ಯಾವುದೂ ಇಲ್ಲ ಅಂತ ಏನೂ ಇಲ್ಲ. ಕಾಂಪ್ಲೆಕ್ಸ್ ಅತ್ತಲಾ ಕಡೆ ಇರೋ ಗಲ್ಲೀ ದಾರೀಲಿ ಹೋದೆ ಅಂದರೆ ಹತ್ತೇ ನಿಮಿಷ ಸಾಕು. ಆದರೆ ಹಾಗೆ ಹೋಗೋಕೆ ನನಗೇ ಒಂದು ರೀತೀಲಿ ಇಷ್ಟ ಇಲ್ಲ. ದಾರಿ ಉದ್ದಕ್ಕೂ ಸಾರಾಯಿ ಅಂಗಡಿಗಳು. ಕುಡುಕರ ಕಾಟ ಅದೂ ಸಾಲದು ಅಂದರೆ ಜೂಜು ಕಟ್ಟೆಗಳು – ಮತ್ತೆ ಹೇಳ್ತಾರಲ್ಲ 'ಹೌಸ್ ಆಫ್ ಇಲ್ ರೆಪ್ಯೂಟ್' ಅಂತ, ಅವು ಬೇಕಾದಷ್ಟು ಇವೆ. ಒಂದು ಹತ್ತು ನಿಮಿಷ ಉಳಿಸ್ತೇನೆ ಅಂತ ಕತ್ತಲಾದ ಮೇಲೆ ಒಂದು ನಾಲಕ್ಕು ದಿನ ಆ ರಸ್ತೇಲಿ ಓಡಾಡಿದೆನೋ, ಆಯ್ತು, ನನ್ನ ಹೆಸರು ಫಾಕ್ಟರೀನಲ್ಲೆಲ್ಲಾ ಚೆಂದಿಯಾಗಿ ಬಿಡತ್ತೆ, ಅಷ್ಟೇ – ಅದೇನೋ ಹೇಳ್ತಾರಲ್ಲ, ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದ ಅಂತ, ಆ ರೀತಿ.

ಮೊನ್ನೆ ಫ್ಯಾಕ್ಟರಿಯಲ್ಲಿ ತುಂಬಾ ಕೆಲಸ. ವ್ಯಾನ್ ಹತ್ತಿಕೊಳ್ಳೋ ಹೊತ್ತಿಗೆ ಒಳ್ಳೆ ಬ್ಲೋ ಬಿಟ್ಟ ಹಾಗಾಗಿತ್ತು. ಸದ್ಯ, ಮನೆಗೆ ಹೋಗಿ ಬಿದ್ದುಕೊಂಡರೆ ಸಾಕು, ಅಂತ ನಾನು ಅಂದುಕೊಂಡರೆ ಯಶವಂತಪುರ ದಾಟೋ ಹೊತ್ತಿಗೆ ಅದೇನೋ ಡೀಸೆಲ್ ತೊಂದರೆ ಅಂತ ಆಗಿ ಎಂಜಿನ್ನು ನಿಂತುಹೋಯಿತು. ಹೆಚ್ಚೂ ಕಡಿಮೆ ಒಂದು, ಒಂದೂವರೆ ಕಿಲೋ ಮೀಟರ್ ದಬ್ಬಿಕೊಂಡು ಪೆಟ್ರೋಲ್ ಬಂಕ್ ಹತ್ತಿರ ಬರೋ ಹೊತ್ತಿಗೆ ಹೆಣ ಎತ್ತಿ ಹೋಗಿತ್ತು. ಲೀಟರ್‌ಗೆ ಹನ್ನೆರಡು ಅಂತ ಒಂದಿಷ್ಟು ಡೀಸೆಲ್ ಹುಯ್ಯಿಸಿಕೊಂಡು ನಮ್ಮ ಏರಿಯಾಕ್ಕೆ ಬರೋ ಹೊತ್ತಿಗೆ ಒಂಭತ್ತು ಘಂಟೇನೇ ಆಗಿ ಹೋಗಿತ್ತು. ತುಂಬಾ ಹೊತ್ತಾಗಿ ಹೋಯಿತು. ಸ್ವಲ್ಪ ಮನೇ ಹತ್ರ ಡ್ರಾಪ್ ಕೊಟ್ಟರೆ

ಚೆನ್ನಾಗಿರತಾ ಇತ್ತು ಅಂತ ಎಷ್ಟು ಗಿಂಜಿದ್ರೂ ಡ್ರೈವರ್ ಕಿವೀ ಮೇಲೆ ಹಾಕಿಕೊಂಡರೆ ತಾನೆ? ಮಾಮೂಲು ಥರಾ ಕಾಂಪ್ಲೆಕ್ಸ್ ಹತ್ತಿರಾನೆ ಬಿಟ್ಟು ಹೋದ.

ಈಗೇನು ಮಾಡೋದು? ದಿನಾ ಮಾಡೋ ಥರಾ ಅಂಗಡಿಗಳನ್ನ ಹಾದು ಹೋಗೋದು ಅಂದರೆ ಕೈಯಲ್ಲಿ ಆಗದು. ಆಗದು ಆದರೆ ಶಾರ್ಟ್ ಕಟ್ ಅಂತ ಹಿಡಿಯೋಣ ಅಂದ್ರೆ ಯಾರಾದರೂ ನೋಡಿದ್ರೆ, ಅನ್ನೋ ಹೆದರಿಕೆ. ಸರಿ, ಯಾರನ್ನ ಮೆಚ್ಚಿಸಿ ಏನಾಗಬೇಕಾಗಿದೆ? ನನಗೆ ಸುಸ್ತಾಗಿದೆ, ನಾನು ಮನೆಗೆ ಬೇಗ ಹೋಗಬೆಕು, ಅಷ್ಟೆ, ಅಂದುಕೊಂಡು ಆ ಗಲ್ಲೀ ದಾರೀನೆ ಹಿಡಿದೆ.

ಹೆಚ್ಚು ಕಡಿಮೆ ಹಾಫ್-ವೇ ಅಂತ ಬಂದಿದೀನಿ ಇದ್ದಕ್ಕಿದ್ದ ಹಾಗೆ ಲೈಟು ಹೊರಟು ಹೋಯಿತು. ಎಲ್ಲಿ ನೋಡು, ಕತ್ತಲೋ ಕತ್ತಲು. ಆವಾಗ ನೋಡಬೇಕು. ಆ ಏರಿಯಾದ ನಿಜವಾದ ಸ್ವರೂಪಾನ, ಸಿನಿಮಾ ಟಾಕೀಸ್ ನಲ್ಲಿ ದೀಪ ಹೋದ್ರೆ ಮಾಡೊಲ್ಲವೇ, ಆ ರೀತಿ ಎಲ್ಲಿ ಅಂದರೆ ಅಲ್ಲಿ ಶಿಳ್ಳು ಹೊಡೆದದ್ದೇ ಹೊಡೆದದ್ದು. ಅದೇನು ನಗೋ ಆಟ, ಅದೇನು ಕೇಕೆ ಹಾಕೋದು, ಅಂತೀರ. ಇದರ ಮಧ್ಯೆ "ಹಿಡಕೊಳ್ಳಿ, ಹಿಡಕೊಳ್ಳಿ, ಕಾಸು ಕೊಡದೇ ಓಡಿ ಹೋಗತಾ ಇದಾನೆ" ಅನ್ನೋ ಕೂಗುಗಳು ಬೇರೆ. ಅದು ಏನು ಹೆಂಡದಂಗಡಿಯಿಂದಲೇ ಬಂತೋ ಅಥವಾ ಜೂಜುಕಟ್ಟೆಯಿಂದಲೇ ಬಂತೋ, ಇಲ್ಲಾ ಇನ್ನೊಂದು ಕಡೆಯಿಂದಲೇ ಬಂತೋ, ದೇವರೇ ಬಲ್ಲ. ನನಗೋ ತುಂಬಾ ಅಸಹ್ಯಾನೆ ಆಯಿತು. ಧತ್, ಒಂದು ಒಂದು ಹತ್ತು ನಿಮಿಷ ಉಳಿಸ್ತೀನಿ ಅಂತ ಹೋಗಿ ಈ ನರಕದ ಮಧ್ಯೆ ಸಿಕ್ಕಿಕೊಂಡೆನಲ್ಲ, ಅಂತ.

ಆದರೆ ಈಗ ಏನು ಮಾಡೋದು? ಮುಂದೆ ಹೋಗತೀನಿ ಅಂದರೂ ಅಷ್ಟೇ ಟೈಮು, ವಾಪಸ್ ಕಾಂಪ್ಲೆಕ್ಸ್ ಹತ್ತಿರ ಹೋಗತೀನಿ ಅಂದರೂ ಅಷ್ಟೇ ಟೈಮು ಆಗತ್ತೆ. ಹಾಗಿರಬೇಕಾದ್ರೆ ಇನ್ನಂದು ಎಂಟು ನಿಮಿಷ ಮುಂದಕ್ಕೇ ಹೋಗೋದು ವಾಸಿ, ಮನೇನೆ ಸಿಕ್ಕಿ ಬಿಡತ್ತೆ ಅಂದುಕೊಂಡು ಹೊರಟೆ.... .... ಆದರೆ ಯಾಕೋ ಒಂದು ರೀತಿ ಹಲ್ಲ್ಯುಸಿನೇಶನ್ ಇರಬೇಕು ಅಂತೀನಿ... ಯಾರೋ ಹಿಂದೆ ನನ್ನನ್ನೇ ಫಾಲೋ ಮಾಡಿಕೊಂಡು ಬರತಾ ಇದ್ದ ಹಾಗೆ ಇತ್ತು.

ಒಂದು ಹತ್ತು ಹೆಜ್ಜೆ ಹೋಗೊಕ್ಕೆ ಇಲ್ಲ, ಯಾರೋ ಹಿಂದುಗಡೆಯಿಂದ ಹೆಗಲ ಮೇಲೆ ಕೈ ಹಾಕಿದ ಹಾಗಾಯಿತು... ನಾಲಕ್ಕು ತದಕಿಬಿಟ್ಟು ತಪ್ಪಿಸಿ ಕೊಂಡು ಓಡಿ ಬಿಡೋದು ಅಂದುಕೊಂಡು ತಿರುಗಿ ನೋಡ್ತೀನಿ, ಅದು ನಾನು ಅಂದುಕೊಂಡಿದ್ದ ಹಾಗೆ ಆ ಮೊಹಲ್ಲಾದ ಯಾವ ದಾದಾನೂ ಕೂಡ ಅಲ್ಲ.... ಅದೊಬ್ಬ, ಪೋಲೀಸ್ ಪ್ಯಾದೆ. ... ಒಳ್ಳೆ ನರಪೇತಲ ನಾರಾಯಣ ರಾವ್ ಅಂತಾರಲ್ಲ, ಆ ಥರದೋನು.

"ನಡೀರಿ, ಸ್ಟೇಷನ್ ಕಡೇಗೆ... " ಥತ್, ಎಂಥಾ ಕೆಲಸ ಆಗಿಹೋಯಿತು? ನಾನು ಏನು ಆಗಬಾರದು ಅಂತ ಅಂದುಕೋತಾ ಇದ್ದೆನೋ ಅದೇ ಆಯಿತಲ್ಲ!... ಯಾವನೋ ಕುಡುಕನ್ನೋ, ದಗಲಬಾಜೀನ್ನೋ, ಇಲ್ಲ ಮತ್ತೊಬ್ಬನ್ನೋ ಹುಡುಕಿಕೊಂಡು ಅಲ್ಲಿ ಬಂದಿದ್ದು ಅಂತ ಕಾಣತ್ತೆ. ಕತ್ತಲಲ್ಲಿ ಗೊತ್ತಾದೇನೆ ಆ ಥರದೋನು ನಾನೇ ಅಂತ ಹಿಡಕೊಂಡಿದ್ದಾನೆ. ಆಯಿತು, ಹೇಳಿದ್ರೆ ಬಿಟ್ಟು ಬಿಡತಾನೆ. ಅದಕ್ಕೆ ಯಾಕೆ ಹೆದರಿಕೋ ಬೇಕು?

"ಸಾರ್, ಈಗ ತಾನೇ ಫ್ಯಾಕ್ಟರಿ ಮುಗಿಸಿಕೊಂಡು, ಬಸ್ಸು ಇಳಿದು ಬರತಾ ಇದ್ದೀನಿ... ಇದಕ್ಕೆ ಮುಂಚೆ ನಾನು ಈ ದಾರೀಲಿ ಬಂದೋನೇ ಅಲ್ಲ... ಎಲ್ಲೋ ಏನೋ ಮಿಸ್ಟೇಕ್ ಆಗಿರಬೇಕು, ಅಷ್ಟೆ ಸಾರ್."

ಅದೆಲ್ಲ ಆಮೇಲೆ ಹೇಳೋರಂತೆ... ಈಗ ಸ್ಟೇಷನ್ ಕಡೆ ನಡೀರಿ ಅಂದರೆ ನಡೀಬೇಕು ಅರ್ಥವಾಯಿತೇ?"

ಅವನಿಗೆ ಅಲ್ಲೇ ನಾಲಕ್ಕು ಬಾರಿಸಿಬಿಟ್ಟು ಓಡಿ ಬಿಟ್ಟರೆ ಆಗೊಲ್ಲವೇ ಅಂತ ಅನಿಸಿತು... ಆದರೆ, ಪೋಲೀಸಿನವನು ಯೂನಿಫಾರಂನಲ್ಲಿ ಇದ್ದಾನೆ. ಅವನನ್ನೇನಾದ್ರೂ ಮುಟ್ಟಿದೆ ಅಂದರೆ ನಾಳೆ ಸ್ಟೇಷನ್ ನಲ್ಲಿ ಏರೋಪ್ಲೇನೂ, ಹೈದರಾಬಾದ್ ಗೋಲೀ ಅಂತ ಆದರೆ ನಾನು ತಾನೇ ಅನುಭವಿಸೋನು? ... ಆಯಿತು ಸ್ಟೇಷನ್ ನಲ್ಲಿ ಇನ್ಸ್ ಪೆಕ್ಟರ್ ಹತ್ತಿರ ನಾನು ಇಂಥವನು, ಈ ಕಂಪೆನೀಲಿ ಸೂಪರ್ ವೈಸರು ಅಂತ ಹೇಳಿ ಐಡೆಂಟಿಫಿಕೇಶನ್ ಬಾಡ್ಜ್ ತೋರಿಸಿದ್ರೆ ಬಿಟ್ಟು ಬಿಡೋಲ್ಲವೇ? ... ಹುಂ ಯಾವ ಮಗ್ಗುಲಲ್ಲಿ ಎದ್ದಿದ್ದೆನೋ, ಇವತ್ತು ಬೆಳಿಗ್ಗೆ! ಏನೋ ಮನೇಗೆ ಹೋಗಿ ಬಿದ್ದುಕೋಬಹುದು ಅಂತ ಅಂದುಕೊಂಡಿದ್ದೆ, ಅದಕ್ಕೂ ಬಂತು ಊನ.

ಹಾಗೇ ಒಂದು ಕಿಲೋ ಮೀಟರ್ ನಡೆದುಕೊಂಡು ಬರೋ ಹೊತ್ತಿಗೆ ಸ್ಟೇಷನ್ನು ಕಾಣಿಸ್ತು. ಅಲ್ಲೀವರೆಗೂ ನನ್ನಷ್ಟಕ್ಕೆ ನಾನು ಏನೇನೋ ಧೈರ್ಯ ಹೇಳಿಕೋತಾ ಬಂದಿದ್ದೆ, ನನಗೇನೂ ಆಗೊಲ್ಲ ಸರಿಯಾಗಿ ಸಮಜಾಯಿಷಿ ಹೇಳಿದ್ರೆ ಬಿಟ್ಟು ಬಿಡತಾರೆ ಅಂತೆಲ್ಲ.... ಆದರೆ ಸ್ಟೇಷನ್ ಹತ್ತಿರ ಬಂದ ಹಾಗೆಲ್ಲ ಯಾಕೋ ಪುಕ ಪುಕಾ ಅನ್ನೋಕೆ ಶುರೂ ಆಯಿತು... ಎಷ್ಟಾದರೂ ಪೋಲೀಸ್ ಸಹವಾಸ, ಹೀಗೇನೆ ಅಂತ ಹ್ಯಾಗೆ ಹೇಳೋಕ್ಕೆ ಸಾಧ್ಯ?

ಅಷ್ಟು ಹೊತ್ತಿಗೆ ಕರೆಂಟು ಬಂದು ದೀಪಗಳು ಹತ್ತಿಕೊಂಡವು. ನನ್ನನ್ನು ಹಿಡಕೊಂಡು ಬರ್ತಾ ಇದ್ದಾನಲ್ಲ ಆ ಪೋಲೀಸಿನವನು, ಅವನ ಮುಖಾನ ಸ್ವಲ್ಪ ನೋಡೋಣ, ಏನಾದ್ರೂ ಐದಕ್ಕೋ, ಹತ್ತಕ್ಕೋ ಅಡ್ಜಸ್ಟ್ ಆಗತ್ತೇನೋ ಅಂತ, ತಿರಗಿದ್ರೆ.... ಅವನೇನು ಮಾಡತಾ ಇದಾನೆ?

"ಸದ್ಯ ... ದೀಪ ಬಂತಲ್ಲಪ್ಪ" ಅಂದುಕೋತಾ ಸ್ಟೇಷನ್ ಮೆಟ್ಟಲು ಹತ್ತುತಾ ಇದ್ದಾನೆ, ನಾನು ಇದೀನಿ ಜತೇಲಿ ಅನ್ನೋದನ್ನೇ ಮರೆತವನ ಥರ.

"ಸಾರ್! ನಾನು ಈಗ ಏನು ಮಾಡಬೇಕೂ ಅಂತೀರ, ಸಾರ್" ಮನೇಗೆ ಹೋಗಿ ಅಂತ ಹೇಳಬಹುದೇನೋ ಅನ್ನೋ ಆಸೆಯಿಂದ ಕೇಳಿದೆ.

"ಓ! ನೀವೂ ಜತೆಗೆ ಇದ್ದಿರಲ್ಲವಾ ಸಾರ್. ಎಂಥಾ ಕೆಲಸ! ಮರೆತೇ ಬಿಟ್ಟಿದೆ ನೋಡಿ..."

ಎಲಾ ಇವನ! ಮರೆತೇ ಬಿಟ್ಟಿದ್ದನಂತೆ, ಗೂಬೆ. 'ನಾನು ಪಡ್ತಾ ಇರೋ ಪಾಡು ಇವನಿಗೆ ಗೊತ್ತಿದ್ರೆ ತಾನೆ? ... ಹುಂ ಎಷ್ಟಾದರೂ ಪೋಲೀಸಿನವನು ಪೋಲೀಸಿನವನೇ.

"ಸಾರ್.... ಇನ್ನು ನೀವು ಮನೆಗೆ ಹೋಗಬಹುದು ಸಾರ್... ತುಂಬಾ ಉಪಕಾರ ಆಯಿತು."

ಮನೆಗೆ ಹೋಗಬಹುದು? ತುಂಬಾ ಉಪಕಾರ ಆಯಿತು? ಏನು ಇದರ ಅರ್ಥ?

ನನ್ನ ಪಝಲ್‌ಮೆಂಟ್ ನೋಡಿ ಅವನೇ ನಗತಾ ಹೇಳಿದ –

"ನೈಟ್ ಡ್ಯೂಟೀಗೆ ಅಂತ ಸ್ಟೇಷನ್ನಿಗೆ ಬರೋಕೆ ಆ ರೌಡೀ ಏರಿಯಾ ಮೇಲೆ ಬಂದರೆ ಹತ್ತಿರ ಆಗತ್ತೆ... ಆದರೆ ಈವತ್ತು ದೀಪ ಹೋದಾಗ ತುಂಬಾನೆ ಭಯ ಆಯ್ತು. ಯಾರು ಏನು ಮಾಡತಾರೋ ಅಂತ... ಪುಣ್ಯಕ್ಕೆ ನಿಮ್ಮಂಥ ಜಂಟಲ್‌ಮನ್ ಸಿಕ್ಕಿದ್ದು ಎಷ್ಟೋ ಹಾಯಿ ಅನ್ನಿಸ್ತು... ಗುಡ್ ನೈಟ್ ಸರ್" ■

# ಹೀಗೂ ಉಂಟೇ ? ( ಕೃಪೆ ವಾಟ್ಸಪ್ )

ಅಯೋಧ್ಯೆಯ ರಾಜ ಶ್ರೀರಾಮ ಒಂದು ದಿನ ತನ್ನ ಅರಮನೆಯ ಅಂಗಳದಲ್ಲಿ ಓಡಾಡುತ್ತಿದ್ದನಂತೆ. ಆಗ ಅವನಿಗೆ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದ ಹನುಮಂತ ಕಾಣಿಸಿದನಂತೆ. ಅವನನ್ನು ನೋಡಿ 'ಅರೆ, ನೀನು ಇನ್ನೂ ಯಾಕೆ ಇಲ್ಲಿಯೇ ಇದ್ದೀಯಾ? ವಾಪಸು ಕಿಷ್ಕಿಂಧೆಗೆ ಹೋಗಿಲ್ಲವೇ?' ಎಂದು ಕೇಳಿದನಂತೆ. ಅದಕ್ಕೆ ಹನುಮಂತ 'ಇಲ್ಲಾ ಸ್ವಾಮಿ, ನಾನು ಸಂಜೀವಿನಿ ತಂದುಕೊಟ್ಟ ಟಿಎ ಡಿಎ ಬಿಲ್ ಇನ್ನೂ ಸೆಟ್ಲ್ ಆಗಿಲ್ಲ' ಎಂದನಂತೆ. ಶ್ರೀರಾಮ ಮಂತ್ರಿಯನ್ನು ಕರೆದು, ತಕ್ಷಣವೇ ಹನುಮಂತನ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ.

ನಂತರ ಸುಮಾರು 3–4 ತಿಂಗಳು ಕಳೆದ ನಂತರವೂ ಹನುಮಂತ ಅರಮನೆ ಆವರಣದಲ್ಲಿ ತಿರುಗಾಡುವುದು ನಿಲ್ಲಲಿಲ್ಲ. ಮತ್ತೆ ಅವನನ್ನು ಕಂಡ ರಾಮ 'ಯಾಕೆ ಇನ್ನೂ ಇಲ್ಲೇ ಇದ್ದೀಯಾ?' ಎಂದು ಕೇಳಿದಾಗ ಹನುಮಂತ 'ಇಲ್ಲ, ಇನ್ನೂ ನನ್ನ ಬಿಲ್ ಬಂದಿಲ್ಲ' ಎಂದನಂತೆ. ಈಗ ರಾಮನ ಸಿಟ್ಟು ಇನ್ನೂ ಹೆಚ್ಚಾಯಿತು. ಮತ್ತೆ ಮಂತ್ರಿಯನ್ನು ವಿಚಾರಿಸಿದ. ಅದಕ್ಕೆ ಮಂತ್ರಿ 'ಇಲ್ಲಾ ಸ್ವಾಮಿ, ಕೇಸ್ ವರ್ಕರ್ ಕೆಲವು ತಕರಾರು ಎತ್ತಿದ್ದಾನೆ ಎಂದನಂತೆ. 'ಏನ್ ತಕರಾರು ಅವಂದು' ಕೇಳಿದ ರಾಮ.

'ಕೇಸ್ ವರ್ಕರ್ ಮೂರು ಪ್ರಶ್ನೆ ಹಾಕಿ ಬಿಲ್ ಪೆಂಡಿಂಗ್ ಇಟ್ಟಿದ್ದಾನೆ. ಮೊದಲನೆ ಪ್ರಶ್ನೆ, ಸಂಜೀವಿನಿ ತರುವಂತೆ ಹನುಮಂತನಿಗೆ ಸೂಚಿಸಿದವನು ರಾಮ, ಆದರೆ ರಾಮ ಆಗ ಅಯೋಧ್ಯೆಯ ರಾಜ ಆಗಿರಲಿಲ್ಲ. ರಾಜನಲ್ಲದ ಯಾರೋ ವ್ಯಕ್ತಿ ಹೇಳಿದ ಕೆಲಸವನ್ನು ಮಾಡಿದರೆ ಅದಕ್ಕೆ ಬಿಲ್ ಕೊಡಲು ನಿಯಮದಲ್ಲಿ ಅವಕಾಶ ಇಲ್ಲ. ಅಲ್ಲದೆ ಹನುಮಂತ 'ಡಿ' ದರ್ಜೆ ನೌಕರ. 'ಡಿ' ದರ್ಜೆ ನೌಕರರಿಗೆ ವಾಯುಮಾರ್ಗದಲ್ಲಿ ಹೋಗಲು ಎಲಿಜಿಬಿಲಿಟಿ ಇಲ್ಲ. ಇದಲ್ಲದೆ ಹನುಮಂತನಿಗೆ ಸಂಜೀವಿನಿ ಮಾತ್ರ ತರಲು ಹೇಳಿದ್ದು. ಆದರೆ ಅವನು ಇಡೀ ಸಂಜೀವಿನಿ ಪರ್ವತವನ್ನೇ ತಂದಿದ್ದಾನೆ. ಇದು ಅನವಶ್ಯಕ ಖರ್ಚು. ಆದ್ದರಿಂದ ಬಿಲ್ ಪಾಸ್ ಮಾಡಲು ಸಾಧ್ಯವಿಲ್ಲ ಎನ್ನುತ್ತಿದ್ದಾನೆ' ಎಂದ ಮಂತ್ರಿ. ಇದನ್ನು ಕೇಳಿದ ರಾಮ ತಲೆ ಮೇಲೆ ಕೈಹೊತ್ತು 'ಏನಾದ್ರೂ ಮಾಡಿ ತಕ್ಷಣವೇ ಹನುಮಂತನ ಬಿಲ್ ಪಾಸ್ ಮಾಡಿಸಿ' ಎಂದು ಸೂಚಿಸಿದನಂತೆ.

ನಂತರ ಮಂತ್ರಿ ಹನುಮಂತನಿಗೆ 'ನಿನ್ನ ಬಿಲ್ ಪಾಸಾಗಬೇಕು ಎಂದರೆ ಕೇಸ್ ವರ್ಕರ್ ಭೇಟಿ ಮಾಡಿ ಅವನನ್ನು ನೋಡಿಕೊ' ಎಂದು ಸಲಹೆ ಮಾಡಿದನಂತೆ. ಅದರಂತೆ ಹನುಮಂತ ಕೇಸ್ ವರ್ಕರ್ ಭೇಟಿ ಮಾಡಿ 'ಬಿಲ್ ಪಾಸಾದರೆ ಅದರ ಪರ್ಸೆಂಟೇಜ್ ಇಂತಿಷ್ಟು ಕೊಡುತ್ತೇನೆ' ಎಂದಾಗ ಕೇಸ್ ವರ್ಕರ್ 'ಸಂಜೆಯೇ ಬಂದು ಬಿಲ್ ತೆಗೆದುಕೊಂಡು ಹೋಗು' ಎಂದನಂತೆ. 'ಅರೇ ನೀವು ಅದೇನೋ ತಕರಾರು ಹಾಕಿದ್ದೀರಂತಲ್ಲ' ಎಂದು ಕೇಳಿದಾಗ ಕೇಸ್ ವರ್ಕರ್ 'ಅದೆಲ್ಲಾ ಏನೂ ಇಲ್ಲ. ನಿನಗೆ ಸಂಜೀವಿನಿ ತರಲು ಹೇಳಿದಾಗ ರಾಮ ಅಯೋಧ್ಯೆಯ ರಾಜನಾಗಿರಲಿಲ್ಲ ಎನ್ನುವುದು. ತಾನೇ ಆಗ ಅಯೋಧ್ಯೆಗೆ ರಾಜರೇ ಇರಲಿಲ್ಲ. ರಾಮನ ಪಾದುಕೆ ಸಿಂಹಾಸನದ ಮೇಲಿತ್ತು. ಅದಕ್ಕಾಗಿ ರಾಮನೇ ರಾಜ ಎಂದು ಪರಿಗಣಿಸಿ ರಾಮ ಹೇಳಿದ್ದನ್ನು ಮಾಡಬಹುದು. ಇನ್ನು ನೀನು 'ಡಿ' ದರ್ಜೆ ನೌಕರ. ನಿನಗೆ ವಾಯುಮಾರ್ಗದಲ್ಲಿ ಹೋಗುವುದಕ್ಕೆ ಅನುಮತಿ ಇಲ್ಲ ಎನ್ನುವುದು. ತುರ್ತು ಸಂದರ್ಭದಲ್ಲಿ ಯಾರನ್ನು ಬೇಕಾದರೂ ವಾಯುಮಾರ್ಗದಲ್ಲಿ ಕಳಿಸಬಹುದು. ಮೂರನೆಯದ್ದು, ನೀನು ಸಂಜೀವಿನಿ ಪರ್ವತವನ್ನೇ ಯಾಕೆ ತಂದೆ ಎನ್ನುವುದು ತಾನೇ. ನೀನೇನು ಸಸ್ಯಶಾಸ್ತ್ರಜ್ಞ ಅಲ್ಲವಲ್ಲ, ನಿನಗೆ ಸಂಜೀವಿನಿ ಸಸ್ಯ ಯಾವುದು ಎನ್ನುವುದು ಗೊತ್ತಿಲ್ಲ. ಆದರೆ ಲಕ್ಷ್ಮಣನ ಜೀವ ಮುಖ್ಯ ಎಂದು ನೀನು ಸಂಜೀವಿನಿ ಪರ್ವತವನ್ನೇ ತಂದೆ. ಅದಕ್ಕಾಗಿ ನಿನ್ನ ಬಿಲ್ ಪಾಸ್ ಮಾಡಬಹುದು' ಎಂದನು. ■

# ಅರ್ಥಸಾಧನ

**| ರಮೇಶಚಂದ್ರ**

'ಕೋಪವೆಂಬುದನರ್ಥ ಸಾಧನ...ಕೋಪವೇ ಭವ ಬಂಧಕೆ ಕಾರಣ' ಎಂಬ ಕವಿವಾಣಿ... ನೆನಪಿಗೆ ಬಂತು. ಜೊತೆಯಲ್ಲಿಯೇ ಕವಿಯ ಮೇಲೆ ಕೋಪವೂ ಬಂದಿತು. ಅನರ್ಥ ಸಾಧನ ಎಂಬ ಸ್ಟೇಟ್‌ಮೆಂಟ್ ಕೊಟ್ಟು ಕವಿಯ ಮೇಲೆ ಒಂದು ಪಿ.ಐ.ಎಲ್. ಅರ್ಜಿ ಗುಜರಾಯಿಸಲೇ ಎಂದು ಯೋಚಿಸಿದೆ. ಎವಿಡೆನ್ಸುಗಳು ಸಾಲದು ಎನ್ನಿಸಿ ತೆಪ್ಪಗಾದೆ.

ಅಷ್ಟಕ್ಕೂ ಈ ಕೋಪ ಎಂಬುದು ಯಾಕೆ ಬರುತ್ತೆ ಆಫೀಸ್‌ನಲ್ಲಿ ಅಸಿಸ್ಟೆಂಟುಗಳು ಕೊಟ್ಟ ಕೆಲಸ ನಿಭಾಯಿಸದೆಲೇ ಠಳಾಯಿಸುತ್ತ ಇದ್ದರೆ, ಶಿಷ್ಯೆಯರೋ-ಶಿಷ್ಯರೋ-ಶೋಡಷಿಯರು ಗುರೂ- ಕೊಟ್ಟ ಹೋ ವರ್ಕ್ ಮಾಡದೇ ಶಾಲೆಗೆ ಬಂದು... ಲೈನ್ ಹೊಡೆಯುತ್ತಾ ಕಿಸಿಯುತ್ತಾ ಇದ್ದರೆ, ಹತ್ತು ಬಾರಿ ಹೇಳಿ ಹೋಗಿದ್ದರೂ ದೇವರ ಮನೆ ಪಾತ್ರೆ ಪಗಡ ತೊಳೆಯದೆ ಕಿಟಿಪಾರ್ಟಿಗೆ ತೊಲಗಿ ಹೋಗಿದ್ದ ಸೊಸೆಯ ಮೇಲೆ, ಬೆಕ್ಕು ಅರೆ ತಿಂದು ಬಿಟ್ಟಿದ್ದ ಗಡವಾ ಹೆಗ್ಗಣದ ಹೆಣವನ್ನು ಮೆಲ್ಲಗೆ ನಿಮ್ಮ ಮನೆ ಮುಂದೆ ಸರಿಸಿದ ನೆರೆಮನೆ ನಾಜೂಕು ನಾಗಮಣಿ ಮೇಲೆ ಮೂರು ಮೂರು ಮೊಬೈಲ್ ನಂಬರ್ ಕೊಟ್ಟಿದ್ದರೂ ಹೇಳದೇ ಕೇಳದೇ ಚಕ್ಕರ್ ಕೊಟ್ಟ ಮುಸುರೆ ಮುನಿಯಮ್ಮನ ಮೇಲೆ, ಹತ್ತು ಬಾರಿ ಹೇಳಿ ಹೋಗಿದ್ದರೂ ಒಂದು ಶರಟಿನ ಗುಂಡಿ ಹೊಲಿಯದೆ ಬಿಂಗೋ ಆಡಲು ಕುಣಿಯುತ್ತಾ ನಿಕಲಾಯಿಸಿಬಿಟ್ಟಿದ್ದ ಧ- ಧರ್ಮ ಪತ್ನಿಯ ಮೇಲೆ ಕೊನೆಯದು ಅಂದುಕೊಳ್ಳಿ ಯುಗಾದಿಗೋ, ಸಂಕ್ರಾಂತಿಗೋ ಅಪರೂಪಕ್ಕೆ ಪ್ರಕಟವಾದ ಲೇಖನದ ಬಗ್ಗೆ ಕಟು, ವಿಮರ್ಶೆ ಮಾಡಿದ ಟೀಕಾಚಾರ್ಯರ ಮೇಲೆ ಕೋಪಮಾಡಿಕೊಳ್ಳದೇ ಇರುವುದು ನಮ್ಮಂತಹ ನರಮಾನವರಿಗೆ ಸಾಧ್ಯವೇ ಸ್ವಾಮೀ.

ನರಮಾನವರು ಮಾತ್ರವಲ್ಲ ಈ ಕೋಪದ ವದನಕ್ಕೆ ಆ ಚತುರ್ಮುಖ ಬ್ರಹ್ಮನ ಹಾಗೆ ವಿವಿಧ ಮುಖಗಳೂ, ಆಕಾರಗಳೂ, ರೂಪು ರೇಷೆಗಳೂ ಉಂಟು. ಈ ಕೋಪಿಷ್ಠರ ಪಡೆಗೆ ಒಂದು ಇತಿಹಾಸವೇ ಇದೆ ಸರ್. ಪುರಾಣ ಪುಣ್ಯ ಕತೆ, ಇತಿಹಾಸ, ಚರಿತ್ರೆ ಹಾಗೂ ಪ್ರಸಕ್ತ ಕಾಲದಲ್ಲಿ ಕೋಪಕ್ಕೆ ಫೇಮಸ್ ಆದ ಪುರುಷರ ಟ್ವೆಂಟಿ ಬೈ ಟ್ವೆಂಟಿ ಟೀಮೇ ಇದೆ. ಮೊದಲನೇ ಪುಣ್ಯಾತ್ಮರೇ ಶ್ರೀಮಾನ್ ಭೃಗುಮಹರ್ಷಿಗಳು... ಇರಲಾರದೆ ಇರುವೆ ಬಿಟ್ಟು ಕೊಂಡ ಹಾಗೆ... ಈವಯ್ಯ... ತ್ರಿಲೋಕಕ್ಕೆ ಸಂಚಾರ ಹೊರಡುತ್ತಾನೆ... ಬ್ರಹ್ಮಲೋಕಕ್ಕೆ ಹೋದ ಸರಸ್ವತಮ್ಮ ತನ್ಮಯಳಾಗಿ ವೀಣೆ ಭಾಜಿಸುತ್ತಾ ಇದ್ದಳೆ. ಬ್ರಹ್ಮದೇವ ಆನಂದದಿಂದ ಆಸ್ವಾದಿಸುತ್ತಿದ್ದಾನೆ. ಈತ ಹೇಳಿ ಕೇಳಿ 'ಮುನಿ' 'ಸದಾ ಮುನಿಯುವ ಮುನೀಂದ್ರ' ಕಾದ.. ಕಾದ.. ಅವರು ಕ್ಯಾರೇ ಅನ್ನಲಿಲ್ಲ. ಮುನಿಯ ಕೋಪ ಬ್ರಹ್ಮ ರಂದ್ರಕ್ಕೇ ಏರಿತು. 'ಹೇ ದುರಂಹಕಾರಿ ಬ್ರಹ್ಮ ನನ್ನನ್ನು ನೆಗ್‌ಲೆಕ್ಟ್ ಮಾಡುವಷ್ಟು ಸೊಕ್ಕೇ.. ಇನ್ನು ಮುಂದೆ ನನಗೆ ದೇವಾಲಯ ಪೂಜೆಗಳೇ ಇಲ್ಲದೇ ಹೋಗಲಿ' ಎಂದು ಹಿಡಿ ಶಾಪ ನೀಡಿ, ಕೈಲಾಸಕ್ಕೆ ಹೊರಟ ಅಲ್ಲಿಯೂ ಅದೇ ಸೀನು. ಪಾರ್ವತೀ ಪರಮೇಶ್ವರರು ವೀಕ್‌ಎಂಡ್ ಮೂಡ್‌ನಲ್ಲಿ ವಿಹರಿಸುತ್ತಾ ಇದ್ದಾರೆ. ಇಲ್ಲಿಯೂ ಮುನಿಗೆ ಅವಮಾನ 'ಹೇ ಅಹಂಕಾರಿ ಈಶ್ವರ ನಿನಗೆ ಇನ್ನು ಮುಂದೆ ಪ್ರತಿಮಾ ಪೂಜೆಯೇ ಇಲ್ಲ. ಬರೀ ಲಿಂಗಕ್ಕೆ ಅರ್ಚನೆ-ಅನುಭವಿಸು' ಎಂದು ಉರಿಉರಿಯುತ್ತಾ ವೈಕುಂಠಕ್ಕೆ ಹೋದರೆ ಅಲ್ಲಿಯೂ ಅವನ

ಭರವಸೆ ಹುಸಿಯಾಗಿ ಹೋಯ್ತು. ಶ್ರೀಮನ್ನಾರಾಯಣ ಶೇಷಶಾಯಿಯಾಗಿ ಪವಡಿಸಿದ್ದಾನೆ. ವದನದಲ್ಲಿ ತುಂಟಮಂದಹಾಸ. ಶ್ರೀಲಕ್ಷ್ಮಿ ಅಪರೂಪಕ್ಕೆ ಒಳ್ಳೆಯ ಮೂಡಿನಲ್ಲಿದ್ದು ಪಾದೋಪಚಾರಗೈಯುತ್ತಾ ದಂಪತಿಗಳು ಸುಖಿಸುತ್ತಾ ಇದ್ದಾರೆ. ಬಂದ– ಬಂದ ಭೃಗು ಮುನಿ ಬಂದ ನಿಂದ ತನಗಿಲ್ಲದ ಸುಖ ಅನುಭವಿಸಿ, ತನ್ನನ್ನು ಕಡೆಗಾಣಿಸುತ್ತಿದ್ದಾರೆ ಎಂದು ಕ್ರೋಧ ನೆತ್ತಿಗೇರಿತು. ಆವೇಶದಿಂದ ಆರ್ಭಟಿಸಿ, ಸೀದಾ ಹೋಗಿ ಕಮಲನಾಭನ ಕೌಸ್ತುಭ ಶೋಭಿತ ಶ್ರೀವಕ್ಷಸ್ಥಳಕ್ಕೆ ಝಾಡಿಸಿ ಒದ್ದೇ ಬಿಟ್ಟ. ಆಗತಾನೆ ಎದ್ದ ಹಾಗೆ ನಟಿಸಿ ವಿಷ್ಣು ಭೃಗುವಿನ ಪಾದವನ್ನು ಉಪಚರಿಸುವ ನೆವದಲ್ಲಿ ಅವನ ಅಂಗಾಲಿನಲ್ಲಿದ್ದ ಕಣ್ಣನ್ನು... ಕುತ್ತಿಬಿಟ್ಟ. ನಗುತ್ತಲೇ ಕೆಲಸ ಮುಗಿಸಿಬಿಟ್ಟ.

ಸರಿ... ವಿಷ್ಣುವೇನೋ ಭೃಗುಮುನಿಯ ಕಣ್ಣು ಕುತ್ತಿ ಕಾರ್ಯ ಸಾಧಿಸಿಬಿಟ್ಟ ಮಹಾಲಕ್ಷ್ಮಿಗೆ ಏನು ರೀ ಗ್ರಹಚಾರಾ, ಬೀದಿಲಿ ಹೋಗೋ ದಾಸಯ್ಯನ ಕಯ್ಯಲ್ಲಿ ಅಲ್ಲಲ್ಲ ಕಾಲಲ್ಲಿ ಒದೆಸಿಕೊಳ್ಳೋದಕ್ಕೆ. ಲಕ್ಷ್ಮೀದೇವಿಗೆ ಕೋಪ ನೆತ್ತಿಗೇರಿ... ವಿಷ್ಣುವಿನ ವಕ್ಷಸ್ಥಳ ಸಿಂಹಾಸನಬಿಟ್ಟು ಕೊಲ್ಲಾಪುರಕ್ಕೆ ಪರ್ಮನೆಂಟಾಗಿ ಹೋಗಿಯೇ ಬಿಟ್ಟಳು.

ಅರೆ ಇದೇನ್ರಿ ಈ ಋಷಿ ಮನುಷ್ಯರ ದೇಹ– ಟಗರಿನ ತಲೆ ಅಂತ ಆಶ್ಚರ್ಯ ಚಕಿತರಾಗ್ತಿರಾ.. ಅಯ್ಯೋ.. ಅದೂ ಕೋಪದ ತಾಪದ ಫಲವೇ. ಅವರು ಶ್ರೀಮಾನ್ ದಕ್ಷಬ್ರಹ್ಮ. ಸಾಕ್ಷಾತ್ ದೇವಿ ದಾಕ್ಷಾಯಿಣಿಯ ಪಿತಾಶ್ರೀ ಒಂದು ಸಲ ಮಹದೇಶ್ವರ ತಪಸ್ಸಿಗೆ ಕೂತಿರ್ತಾರೆ. ಆಗ ಈ ಮಹಾನುಭಾವ ದಯಮಾಡಿಸ್ತಾರೆ. ಎಲ್ಲರೂ ಎದ್ದು ನಿಂತು ಗೌರವಿಸಿ ಪ್ರಣಾಮ ಸಲ್ಲಿಸ್ತಾರೆ. ಆದರೆ ಧ್ಯಾನಾಸಕ್ತರಾಗಿದ್ದ ಪರಮಶಿವ ಎದ್ದೇಳಲಿಲ್ಲ. ಅಳಿಯ ಆದ್ರೆ ಏನು ಸ್ವಾಮಿ. ಮರ್ಯಾದೆ ಮರ್ಯಾದೇನೆ. ಕೋಪ ಉಕ್ಕೇರಿತು. ಸೇಡು ತೀರಿಸಿಕೊಳ್ಳಬೇಕಲ್ಲ. ವಿಶ್ವಜಿದ್ಯಜ್ಞ ಏರ್ಪಡಿಸಿ ಬೇಕಂತ ಅಳಿಯನ್ನ ಕರಿಯದೆ ಅವಮಾನಪಡಿಸುತ್ತಾನೆ. ಎಷ್ಟೇ ಆಗಲಿ ಹೆಂಗಸರ ಬುದ್ಧಿ ಹಠಮಾಡಿ ದಾಕ್ಷಾಯಿಣಿ ಯಜ್ಞಕ್ಕೆ ಹೋಗಿ ಅವಮಾನಿತಳಾಗಿ, ಯಜ್ಞಕುಂಡದಲ್ಲಿಯೇ ಬಿದ್ದು ಪ್ರಾಣಾರ್ಪಣೆ ಮಾಡಿಬಿಡುತ್ತಾಳೆ. ಕ್ರೋಧಾವೇಶದಿಂದ ಈಶ್ವರ ಲಯನೃತ್ಯಮಾಡಿ ಜಟೇನ ನೆಲಕ್ಕೆಪ್ಪಳಿಸಿ, ವೀರಭದ್ರಸ್ವಾಮಿ ಅವತಾರ ಮಾಡಿ ದಕ್ಷಬ್ರಹ್ಮನ ರುಂಡ ಚಂಡಾಡಿಬಿಡ್ತಾನೆ. ಆಯ್ತು ದುಷ್ಟ ಸಂಹಾರ ಆಯ್ತು. ಯಜ್ಞ ನಿಲ್ಲಬಾರದಲ್ಲಾ ಗುರುವೇ. ಅದಕ್ಕೆ ತಲೇನೇ ಇಲ್ಲದ ದಕ್ಷನಿಗೆ ಟಗರಿನ ತಲೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿ ಯಜ್ಞ ಮುಗಿಸಿದರು.

ಈ ಚತುರ್ಮುಖ ಬ್ರಹ್ಮ– ಪಾಪ ಎಂದೂ ಯಾರ ಮೇಲೂ ಕೋಪಗೊಂಡ ದಾಖಲೆ ಇಲ್ಲ.. ಹೇಳಿ.. ಕೇಳಿ ಹಲ್ಲು ಬಿದ್ದ ಹಣ್ಣು ಹಣ್ಣು ಮುದುಕ ಸರಸ್ವತಮ್ಮನಿಗೆ ಪೂಸಿ ಮಾಡಿ ಮೆದುವಾದ ತಿಂಡಿ ತಿನಿಸು ಮಾಡಿಸಿಕೊಂಡು ತಿನ್ನಕ್ಕೇ ಟೈಂ ಸಾಲದು... ಇನ್ನು ಕೋಪಿಸಿ ಕೊಳ್ಳಕ್ಕೆ ಪುರುಸೊತ್ತು ಎಲ್ಲಿ ಸಿಗುತ್ತೆ ರೀ.

ಈ ಗುಂಪಿನ ಇನ್ನೊಬ್ಬ ಪುಣ್ಯಾತ್ಮ... ದೂರ್ವಾಸ ಮಹಾಮುನಿ. ದೇವರಾಜ ದೇವೇಂದ್ರ ತನ್ನ ಅಧಿಕಾರ ಸ್ವೀಕಾರದ ವಾರ್ಷಿಕೋತ್ಸವ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸಿಕೊಳ್ತಾ ಇದಾನೆ. ಇಡೀ ಅಮರಾವತಿ ಮದುವೆ ಹೆಣ್ಣಿನ ಹಾಗೆ ಲಕಲಕಿಸ್ತಾ ಮಿಂಚ್ತಾ ಇದೆ. ದೇವೇಂದ್ರ ಗಜೇಂದ್ರ–ಐರಾವತದ ಮೇಲೆ ಆಸೀನನಾಗಿ ಅಂಬಾರಿ ಮೆರವಣಿಗೇಲಿ ಬರ್‍ತಾ ಇದಾನೆ. ಬಂದನಪ್ಪ ಈ ದೂರ್ವಾಸ ಮುನಿ. ಕಬಾಬ್‌ಗೆ ಒಳ್ಗೆ ಹಡ್ಡೀ ಬಂದ ಹಾಗೆ– ಪಾನಕಂ ಲೋ ಪರಕಪುಲ್ಲ. ಘೋಷಣೆ ಮಾಡ್ತಾನೆ. "ಹೇ ಇಂದ್ರಾ ನಿನಗೆ ನನ್ನ ಆಶೀರ್ವಾದ. ನಿನ್ನ ಹಾಗೂ

ನಿನ್ನ ಪರಿವಾರದ ವಿಜಯಕ್ಕಾಗಿ ಈ ಮಣಿಕರ್ಣಿಕಾ ಮಾಲೆಯನ್ನು ಪ್ರಸಾದಿಸ್ತಾ ಇದ್ದೇನೆ– ಸ್ವೀಕರಿಸು" ಅಂತ. ಈ ವೇಳೆಗಾಗಲೇ ಇಂದ್ರನ ಕೊರಳು ಮಾಲೆಗಳಿಂದ ಜಗ್ಗಿ ಹೋಗಿದೆ. ಈ ಹೂಮಾಲೆ ತೊಗೊಳ್ಳೋಕೆ ಆನೆ ಅಂಬಾರಿಯಿಂದ ಇಳಿದು ಬರಬೇಕಾ. ಆನೆ ಮೇಲೆ ಹೋಗೋರಿಗೆ ಅಡಿಕೆ ದಾನ ಕೊಟ್ಟರಂತೆ. ಪಾಪ– ಇಂದ್ರ ಏನು ಮಾಡ್ತಾನೆ. ಬಿಸಿ ತುಪ್ಪ ನುಂಗೋ ಹಾಗೂ ಇಲ್ಲ ಉಗುಳೋ ಹಾಗೂ ಇಲ್ಲ. ಸರಿ ಮಾವುತ ಮಾತಲಿಗೆ ಆಹಾರ ಈಸ್ಕೊಂಡು ಆನೆಗೆ ಅಲಂಕಾರವಾಗಿ ಹಾಕು ಅಂದ. ಅವನು ಆರ್ಡರ್ ಒಬೇ ಮಾಡಿದ. ಆಹಾರದಲ್ಲಿ ಅದ್ಯಾವ ಹುಳ ಹುಪ್ಪಟೇ ಇದ್ದು ಆನೆ ಸೊಂಡಿಲಿನ ಒಳಗೆ ಹೋಯ್ತೋ ಆನೆಗೆ ಕಿರಿಕಿರಿ ಆಗಿ ಹಾರಾನ ಸೆಳೆದು ತುಳಿದು ಎಸೀತು. ದೂರ್ವಾಸರ ಸಿಟ್ಟು ನೆತ್ತಿಗೇ ಏರಿತು. ನಿನ್ನ ಇಂದ್ರ ಪದವಿ ನೆಗೆದು ಬೀಳಲಿ. ನಿನ್ನವರೆಲ್ಲ ಹೇಡಿಗಳಾಗಿ ಹೋಗ್ಲಿ ಅಂತ ಹಿಡಿಶಾಪ ಕೊಟ್ಬೇಬಿಟ್ಟ. ಆನೆಯ ತಪ್ಪಿಗೆ... ಅರಸನಿಗೆ ಶಿಕ್ಷೆ. ಇದಾವ ನ್ಯಾಯ.

ಮುಂದಿನ ದೃಶ್ಯದ ನಾಯಕರು ಶ್ರೀಮಾನ್ ಜಮದಗ್ನಿ ಋಷಿಗಳು. ಅಗ್ನಿಪುತ್ರ– ಸದಾ ಸದಾ ಗರಂ ಗರಂ ಮೂಗಿನ ಮೇಲೆ ಕೋಪ. ಎಲ್ಲೂ ಇಲ್ಲದ ಒಂದು ಟಾಸ್ಕ್ ರೇಣುಕಾ ದೇವಿಗೆ– ದಿನಾಲೂ ಮರಳಲ್ಲಿ ಬಿಂದಿಗೆ ಮಾಡಿ ನದಿಯಿಂದ ಅದರಲ್ಲಿ ನೀರು ತುಂಬಿ ಪೂಜೆಗೆ ಒಯ್ಯಬೇಕು. ಹಾಳಾದವ ಅವನ್ಯಾರೋ ಚಿತ್ರರಥ ಗಂಧರ್ವ ಪತ್ನಿಯರು, ಉಪಪತ್ನಿಯರ ಸಮೇತ ಜಲಕ್ರೀಡೆಗೆ... ಆ ನದೀ ಪಾತ್ರಕ್ಕೆ ಬರಬೇಕೇ ಅವರ ಚೇಷ್ಟೆಗಳನ್ನು ನೋಡಿ ರೇಣುಕೆಯ ಮನಸ್ಸು ಹಾಯ್.. ಚಂಚಲವಾಯ್ತು. ಬಿಂದಿಗೆ ಬಿರಿದು ನೂರು ಚೂರಾಯ್ತು. ಆಶ್ರಮಕ್ಕೆ ಖಾಲಿ ಕೈಯ್ಯಲ್ಲಿ ನಡುಗಿ ಬೆದರಿ ಹೋದಳು. ಜ್ಞಾನ ದೃಷ್ಟಿಯಿಂದ ಎಲ್ಲಾ ಅರಿತಿದ್ದ ಜಮದಗ್ನಿ ಮಗ ರಾಮ ಪರಶುರಾಮನನ್ನು ಕರೆದು ತಾಯಿಯ ತಲೆ ಕಡಿ ಎಂದ. ಪರಶುರಾಮ ಜಾಣ. ಮರು ಮಾತಾಡದೆ ತಾಯಿಯ ತಲೆ ಕೊಚ್ಚಿದ. ಪ್ರಸನ್ನನಾದ ತಂದೆಯ ವರ ಪಡೆದ ಅಮ್ಮನನ್ನು ಬದುಕಿಸಿಕೊಂಡ. ಗಂಟೂ ಉಳಿಯಿತು... ನಂಟೂ ಉಳಿಯಿತು.

ಭಾರತೀಯರ ಪರಮ ಪಾವನೆ... ಗಂಗೆ ಸ್ವರ್ಗದಿಂದ ಇಳೆಗೆ ಇಳಿದು ಬರುವುದಕ್ಕೂ ಈ ಕೋಪವೇ ಕಾರಣಾ.. ದೇವರೂ ಸಗರ ಚಕ್ರವರ್ತಿಯ ಅಶ್ವಮೇಧದ ಕುದುರೆಯನ್ನು ಇಂದ್ರ ಲಪಟಾಯಿಸಿ ಕಪಿಲ ಮುನಿಗಳ ಆಶ್ರಮದಲ್ಲಿ ಕಟ್ಟಿ ಬಿಡುತ್ತಾನೆ. ನಿಜ ಅರಿಯದ ಆ ಸಹಸ್ರ ಸಗರಪುತ್ರರು ನಿರಪರಾಧಿ ಕಪಿಲ ಮುನಿಯನ್ನು ನಿಂದಿಸಿ ಅವರ ಕೋಪಾಗ್ನಿಗೆ ಸಿಲುಕಿ ದಗ್ಧರಾಗಿ ಹೊಗಳುತ್ತಾರೆ. ಮುಂದೆ ಭಗೀರಥ ಕಠಿಣ ಪ್ರಯತ್ನದಿಂದ ಗಂಗೇನ ಹರಿಸಿ ಪಿತೃಗಳಿಗೆ ಮೋಕ್ಷ ಕರುಣಿಸುತ್ತಾನೆ.

ಇನ್ನೂ ಮಹಾಭಾರತದಲ್ಲಿ ಅಗ್ನಿಪುತ್ರಿ ದ್ರೌಪದಿ... ವಸ್ತ್ರಾಪಹರಣ ಸಂದರ್ಭದಲ್ಲಿ ದುರುಳ ದುಃಶ್ಯಾಸನನ ಅಟ್ಟಹಾಸದಿಂದ ಬಚ್ಚಿಹೋದ. ಸಿರಿಮುಡಿಯನ್ನು ಅವನ ರಕ್ತದಿಂದಲೇ ತೊಳೆದು ಕಟ್ಟುತ್ತೇನೆ ಎಂದು ರೋಷಾವೇಷದಿಂದ ಪ್ರತಿಜ್ಞೆಮಾಡಿ ಕುರುಕ್ಷೇತ್ರ ಯುದ್ಧದಲ್ಲಿ ಆ ಪ್ರತಿಜ್ಞೆ ಪೂರೈಸಿಕೊಳ್ಳುತ್ತಾಳೆ.

ಇನ್ನು ಚರಿತ್ರೆಯ ಪುಟಗಳನ್ನ ತಿರುವಿ ಹಾಕಿ ಕೋಪದ ಸೀನ್‌ಗಳನ್ನು ಸರ್ಚ್ ಮಾಡಿದರೆ... ಚಂದ್ರಗುಪ್ತ ಮೌರ್ಯ ಚಾಣಕ್ಯ ಕಂಡುಬರ್ತಾರೆ. ಹಸಿದ ಹಾರವ ಚಾಣಕ್ಯನನ್ನು ಚಂದ್ರಗುಪ್ತ ಆದರಿಸಿ ಭೋಜನಕ್ಕೆ ಕೂರಿಸ್ತಾನೆ... ಅಹಂಕಾರಿ ನವನಂದರು ಬಂದು ಚಾಣಕ್ಯನನ್ನ ದರ ದರ ಎಳೆದು ಭೋಜನ ಶಾಲೆಯಿಂದ ಹೊರಗೆ ದೂಡುತ್ತಾರೆ.

ಈ ಸಂಘರ್ಷದಲ್ಲಿ ಚಾಣಕ್ಯನ ಶಿಖೆ ಬಿಚ್ಚಿ ಹೋಗುತ್ತದೆ. ಅಂದೇ ಕೋಪ ಆವೇಶದಿಂದ ಈ ದುರಂಹಕಾರಿ ನವನಂದರ ಸಂಹಾರ ಮಾಡಿದ ನಂತರವೇ ಈ ಶಿಖೆ ಕಟ್ಟುತ್ತೇನೆ ಎಂದು ಪ್ರತಿಜ್ಞ ಮಾಡಿ ಅವರ ಸಂಹಾರವಾದ ಅನಂತರವೇ ಅಗ್ನಿಶಿಖೆ ಕಟ್ಟುತ್ತಾರೆ.

ನಮ್ಮ ಕನ್ನಡನಾಡಿನಲ್ಲೂ ಇಂತಹ ಒಂದು ಅಹಂಕಾರದ ವರ್ತನೆಯಿಂದ ಕೆರಳಿದ ಸಾತ್ವಿಕ ಕ್ರೋಧ ಒಂದು ಸಾಮ್ರಾಜ್ಯ ಸ್ಥಾಪಪನೆಗೇ ನಾಂದಿ ಹಾಡುತ್ತದೆ. ವಿನಾ ಕಾರಣ ಬಡಪಾಯಿ ಮಯೂರಶರ್ಮನನ್ನು ಕುದುರೆ ಸೆಳೆಬೆತ್ತದಿಂದ ಪದೇ ಪದೇ ತಾಡಿಸಿದ ವಿಷ್ಣುಗೋಪನ ಅಹಂಕಾರ ಮಯೂರವರ್ಮನ ಆವಿರ್ಭಕ್ಕೆ ಕಾರಣವಾಗಿ ಮುಂದೇ ಇಡೀ ಪಲ್ಲವ ಸಾಮ್ರಾಜ್ಯ ಮಣ್ಣು ಮುಕ್ಕಲು ಮಯೂರನ ಕ್ರೋಧ ಎಡೆಮಾಡಿಕೊಡುತ್ತದೆ. ಇಂತಹ ಒಂದು ಸುಂದರ ಕಾದಂಬರಿ ಬರೆದ ಪೂಜ್ಯ ದೇವುಡು ನರಸಿಂಹ ಶಾಸ್ತ್ರಿಯವರ ಹಾಗೂ ಮಯೂರನಾಗಿ ವಿಜೃಂಭಿಸಿದ ಡಾ|| ರಾಜ್‌ಕುಮಾರ್ ಅವರ ಹೆಸರು ಸುವರ್ಣಾಕ್ಷರಗಳಲ್ಲಿ ದಾಖಲೆಯಾಗಿಬಿಟ್ಟಿದೆ.

ಮನೆಯೇ ಮಂತ್ರಾಲಯ ಅಲ್ಲವೇ ಸ್ವಾಮೀ. ಈ ಕೋಪದ ಝಲಕ್‌ಗಳನ್ನು ಮನೆಯಂಗಳದಲ್ಲಿ ಕ್ಷಮಿಸಿ ಮನೆಯೊಳಗೆ ಅನುಭವಿಸದೇ ಇದ್ದರೆ, ಅದೆಂತಹ ಸಂಸಾರ ಅಲ್ಲವೆ... ಹಾಗಾಗಿ ಈಗ ಅರ್ಥಸಾಧನೆಯ ಟಿ.ಆರ್.ಪಿ. ಪಾಯಿಂಟ್‌ಗೆ ಬರುತ್ತಾ ಇದ್ದೇನೆ. ಇಲ್ಲಿ ಮಾತ್ರ ಖಂಡಿತವಾಗಿ ಪಕ್ಷಪಾತ ಆಗಿದೆ. ನಿಜಸ್ವಾಮೀ ಗಂಡ–ಹೆಂಡತಿ ಇಬ್ಬರಿಗೂ ಸಮಯ ಸಂದರ್ಭಗಳಲ್ಲಿ ಕೋಪ ತಾಪ ಬರುವುದು. ಕಾಮನ್ ಫ್ಯಾಕ್ಟರ್ರು. ಆದರೆ ಅದರ ಆಫ್ಟರ್ ಎಫೆಕ್ಟ್ ಮಾತ್ರ ಗಂಡ– ಯಾನೆ– ಗಂಡಸಿನ ಮೇಲೇನೆ. ಇದು ಯಾವ ಬಗೆ ನ್ಯಾಯ... ಪಂಡಿತರೇ ಹೇಳಬೇಕು. ಹೆಂಡತಿಯರ ಮೌನ. ಮೊದಲ ಮೆಟ್ಟಿಲು ನಿರುತ್ತರ ಎರಡನೆಯದು ನಿರಭಿಮಾನವು. ಮೂರನೆಯದು ಬೀಗದ ಕೈ ನೆರೆಯಲ್ಲಿ ಕೊಟ್ಟು ಅಂತರ್ಧಾನ. ನಾಲ್ಕನೆಯದು ಪಾಪ ಗಂಡನೆಂಬ ಪ್ರಾಣಿ ಶರಣಾಗದೆ ಏನು ಮಾಡುತ್ತಾನೆ. ಹೆಚ್ಚಿಗೆ ಹಾರಾಡಿದರೆ ನಾಲ್ಕು ನಾಲ್ಕು ಮೆಣಸಿನಕಾಯಿ ಹೆಚ್ಚಿಗೆ ಹಾಕಿದರೆ ಆಯಿತು. ಅಣ್ಣಾವರು ಇಮ್ಮಿಡಿಯಟ್ ಸಂಧಾನಕ್ಕೆ ಇಳಿದುಬಿಡುತ್ತಾರೆ. ಈ ಮಾತು ಸುಳ್ಳಲ್ಲ ಎನ್ನುವುದಕ್ಕೆ ಆ ಪುಣ್ಯಾತಗಿತ್ತಿ ಸತ್ಯಭಾಮೆಯೇ ಸಾಕ್ಷಿ. ಇದಕ್ಕೆ ಎವಿಡೆನ್ಸು ಅಣ್ಣಾವರು ಡಾ|| ರಾಜ್ ಹಾಡಿರುವ "ಸತ್ಯಭಾಮೆ ಸತ್ಯಭಾಮೆ ಕೋಪವೇನೇ ನನ್ನಲಿ" ಜ್ಞಾಪಿಸಿಕೊಳ್ಳಿ. ಆ ಪರಮಾತ್ಮನನ್ನೇ ಆ ಚದುರೆ ಹೇಗೆ ಕಿರುಬೆರಳಲ್ಲಿ ಕುಣಿಸುತ್ತಾಳೆ.

ಪರಿಸ್ಥಿತಿಗಳ ಪ್ರಕಾರ, ಹೇಗೇ ಇರಲಿ... ಸಂದರ್ಭ ಸನ್ನಿವೇಶಗಳನ್ನು ತಮಗೆ ಲಾಭದಾಯಕವಾಗುವ ರೀತಿಯಲ್ಲಿ ತಿರುಗಿಸಿಕೊಳ್ಳುವ ಚಾಕಚಕ್ಯತೆ ಕಲೆಗಾರಿಕೆಯನ್ನು ಆ ಭಗವಂತ 'ಮಹಿಳಾಮಣಿ'ಗಳಿಗೆ ಧಾರಾಳವಾಗಿ ದಯಪಾಲಿಸಿ ಬಿಟ್ಟಿದ್ದಾನೆ. ಹಾಗಾಗಿ... ತಾವೇ ಕೋಪಗೊಂಡರೂ ಯಜಮಾನರೇ ಕೋಪಗೊಳ್ಳಲೀ ಕೊನೆಗೆ ಅದನ್ನು ತಮಗೇ "ಲಾಭದಾಯಕವಾಗಿ" ಪರಿವರ್ತಿಸಿಕೊಳ್ಳುವುದರಿಂದ ಈ ಕೋಪವೆಂಬುದನರ್ಥ ಸಾಧನ ಎಂಬ ಸ್ಟೇಟ್‌ಮೆಂಟನ್ನು ಕೋಪ ಎಂಬುದು ಅರ್ಥಸಾಧನ ಬೆನಿಫಿಷಿಯಲ್ ಫ್ಯಾಕ್ಟರ್ ಎಂದು ತೀರ್ಮಾನ ಮಾಡಿದರೆ ಅಣ್ಣಂದಿರು ಕೈ ಎತ್ತಿ ಮತ ಚಲಾಯಿಸುತ್ತಾರೆ ಹಾಗೂ ಅಕ್ಕಂದಿರು ಯಾನೆ ಆಂಟಿಯರು ಹೊರಗೆ ಒಪ್ಪದೇ– ಒಳಗೆ ಒಪ್ಪಿ ಮುಸಿ ಮುಸಿ ನಗುತ್ತಾರೆ ಎಂದು ದೃಢವಾಗಿ ನಂಬಿದ್ದೇನೆ.

ನನ್ನ ಮಾತಿಗೆ ಪುಷ್ಟಿ ಕೊಡಲು ಖ್ಯಾತ ಸಣ್ಣ ಕಥೆಗಾರರಾದ 'ಆನಂದ' ಶ್ರೀ ಅಜ್ಜಂಪುರ ಸೀತಾರಾಂ ರಚಿಸಿರುವ 'ರಾಧೆಯ ಕ್ಷಮೆ' ಸಣ್ಣ ಕಥೆ ಓದಬಹುದೆಂದು ವಿನಯದಿಂದ ಸೂಚಿಸುತ್ತೇನೆ. ■

# ವೃತ್ತಿ ಬದುಕಿನ ಹಾಸ್ಯ ರಸಾಯನ!!

**| ಜಿ.ಎಸ್.ಟಿ.ಪ್ರಭು**

ನಾನು 1989 ರ ಕೊನೆಯಲ್ಲಿ ಕರ್ನಾಟಕದ ಕಾರವಾರ ಜಿಲ್ಲೆಯ ಕದ್ರಾ ಎಂಬಲ್ಲಿಗೆ ಆಂಧ್ರಪ್ರದೇಶದ ಗೋದಾವರಿ ಶಾಖೆಯಿಂದ ವರ್ಗವಾಗಿ ಬಂದದ್ದನ್ನು ಈ ಹಿಂದೆಯೇ ಹೇಳಿದ್ದೇನೆ. ಹಾಗೆಯೇ ಕದ್ರಾ ಅಣೆಕಟ್ಟು ಬಗ್ಗೆ ಸಹ ಕಿರುಪರಿಚಯ ಮಾಡಿಕೊಟ್ಟಿದ್ದೇನೆ. ಈಗ ನೇರವಾಗಿ ಇನ್ನೊಂದು ಹಾಸ್ಯ ಸನ್ನಿವೇಶದ ಕಡೆಗೆ ದೃಷ್ಟಿ ಹಾಕೋಣ.

ನಮ್ಮ ಶಾಖಾಮುಖ್ಯಸ್ಥರು ಅತ್ಯಂತ ಪ್ರಾಮಾಣಿಕ ಮತ್ತು ನೇರ ನಡೆನುಡಿಯ ವ್ಯಕ್ತಿ. ಕೆಳವರ್ಗದ ನೌಕರರಿಂದ ಮೇಲ್ವರ್ಗದ ಅಧಿಕಾರಿಗಳನ್ನು ಅತ್ಯಂತ ಪ್ರೀತಿಯಿಂದ ಮತ್ತು ಗೌರವವಾಗಿ ನಡೆಸಿಕೊಳ್ಳುತ್ತಿದ್ದ ವ್ಯಕ್ತಿ. ಅವರಿಗೆ ಹೊರಗಿನ ವ್ಯಕ್ತಿಗಳೊಂದಿಗೆ ಸಂಪರ್ಕ ಕಮ್ಮಿ. ಸ್ವಲ್ಪ ಸಂಕೋಚದ ವ್ಯಕ್ತಿತ್ವ. ಕೇವಲ ಅಣೆಕಟ್ಟು ಯೋಜನಾ ಇಲಾಖಾ ಅಧಿಕಾರಿಗಳೊಂದಿಗೆ ಮಾತ್ರ ಮಾತು ಕಥೆ ಅಷ್ಟೇ. ಪೊಲೀಸು ಇಲಾಖೆಗೂ ಮತ್ತು ಅವರಿಗೂ ಗಾವುದ ಮೈಲು ದೂರ. ಅದು ಹೆದರಿಕೆಯಿಂದಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸಿಬಿಡುತ್ತೇನೆ. ಬದಲಿಗೆ ಅದನ್ನೆಲ್ಲ ಮಾಡಲಿಕ್ಕಾಗಿ ಕೆಲ ವ್ಯಕ್ತಿಗಳಿರುತ್ತಾರೆ ಈ ತರಹದ ಯೋಜನೆಗಳಲ್ಲಿ, ಆದ್ದರಿಂದ ಇಂತಹ ವಿಷಯಗಳಲ್ಲಿ ಅವರು ಕೈಹಾಕುವುದಿಲ್ಲ.

ಕದ್ರಾದಲ್ಲಿ ಒಂದು ಪೊಲೀಸ್ ಸ್ಟೇಶನ್ ಇತ್ತು. ವೃತ್ತ ನಿರೀಕ್ಷಕರು (CPI) ಮುಖ್ಯಸ್ಥರಾಗಿದ್ದ ಸ್ಟೇಶನ್. ಅವರು ದಕ್ಷ ಅಧಿಕಾರಿ. ಯಾರಿಗೂ ವಿನಾಕಾರಣ ತೊಂದರೆ ಕೊಟ್ಟಿದ್ದನ್ನು ನಾನು ಕಂಡಿರಲಿಲ್ಲ ಮತ್ತು ಕೇಳಿಯೂ ಇರಲಿಲ್ಲ. ಯೋಜನಾ ಪ್ರದೇಶವಾದ್ದರಿಂದ ಸರ್ಕಾರ ಸ್ಟೇಶನ್ ಅನ್ನು ಉನ್ನತ ದರ್ಜೆಗೆ ಏರಿಸಿತ್ತು. ಆಗಾಗ ಕಾರವಾರದ ಉಪರಕ್ಷಣಾಧಿಕಾರಿಗಳು (Dy.SP) ಮತ್ತು ರಕ್ಷಣಾಧಿಕಾರಿಗಳು (SP) ತಪಾಸಣೆಗಾಗಿ ಭೇಟಿ ನೀಡುತ್ತಿದ್ದರು. ಹಾಗೆ ಒಮ್ಮೆ ಭೇಟಿ ಕೊಟ್ಟವರು ಉಪರಕ್ಷಣಾಧಿಕಾರಿಗಳು, ಅಣೆಕಟ್ಟು ಕಾರ್ಯ ನಡೆಯುತ್ತಿರುವುದನ್ನು ನೋಡಬೇಕೆಂದು ಹೇಳಿದ್ದಾರೆ. ಅವರ ಇಚ್ಛೆಯಂತೆ ವೃತ್ತ ನಿರೀಕ್ಷಕರು ನಮ್ಮ ಜಾಗಕ್ಕೆ ಕರೆದುಕೊಂಡು ಬಂದಿದ್ದಾರೆ. ಅಂದು ನಾನು ಕಂಪೆನಿ ಕೆಲಸದ ನಿಮಿತ್ತ ಹೊರಗಡೆ ಹೋಗಿದ್ದೆ. ನಮ್ಮ ಶಾಖಾ ಮುಖ್ಯಸ್ಥರು ಇವರುಗಳು ಬಂದಿದ್ದನ್ನು ನೋಡಿದ್ದಾರೆ ಮತ್ತು ಅವರ್ಯಾರನ್ನು ಮಾತನಾಡಿಸದೆ ಆಫೀಸಿಗೆ ಬಂದುಬಿಟ್ಟಿದ್ದಾರೆ. ಅಲ್ಲಿ ಇದ್ದವರು ಯಾರೂ ಸಹ ಹೆದರಿಕೆಯಿಂದ ಮಾತನಾಡಿಸಿಲ್ಲ. ಅದಕ್ಕೆ ಕಾರಣವೂ ಇದೆ. ಹೆಚ್ಚಾಗಿ ಎಲ್ಲ ಯೋಜನಾ ಪ್ರದೇಶದಲ್ಲಿ ನಾವು ಹಿಂದಿ ಮಾತನಾಡುತ್ತೇವೆ. ಅದೇನು ಅಪ್ಪಟ ವ್ಯಾಕರಣಭರಿತ ಹಿಂದಿಯಲ್ಲ. ಆದರೆ ನಮ್ಮ ಮನದ ಇಂಗಿತವನ್ನು ಬೇರೆಯವರಿಗೆ ಮನನ ಮಾಡಿಸಿ ಬೇರೆಯವರು ಹೇಳಿದ್ದನ್ನು ಅರ್ಥಮಾಡಿಕೊಳ್ಳುವಷ್ಟು ಪ್ರಾವೀಣ್ಯತೆ ಹೊಂದಿರುತ್ತೇವೆ. ಹಲವು ಸಂದರ್ಭಗಳಲ್ಲಿ ನಾವು ಭಾಷೆಗೆ ಹೊಂದಿಕೊಳ್ಳುವ ಬದಲು ಭಾಷೆಯೇ ನಮಗೆ ಹೊಂದುಕೊಂಡುಬಿಡುತ್ತದೆ!. ಈಗ ನಾವು ಕರ್ನಾಟಕದವರು ಮಲ್ಲುಗಳ ಕನ್ನಡ, ಅಣ್ಣಾತೆಯ ಕನ್ನಡ ಮತ್ತು ಅಕ್ಕಡ ಇಕ್ಕಡ ಕನ್ನಡವನ್ನು ಒಪ್ಪಿ ಅಪ್ಪಿಕೊಂಡಿಲ್ಲವೆ!!? ಹಾಗೆ. ನಮಗ್ಯಾವುದೂ ಕಷ್ಟವಲ್ಲ. ಹಾಗೆಯೇ ನಿರ್ಮಾಣರಂಗದ ಕಾರ್ಮಿಕರ ಸ್ಥಿತಿ. ಅವರು ಏನೋ ಕೇಳಿ ಇವರು ಏನೋ

ಹೇಳಿ ಅಭಾಸವಾಗಬಾರದೆಂದು ನಮ್ಮ ಶ್ರಮಿಕರ ಲೆಕ್ಕಾಚಾರ. ಈ ನಮ್ಮವರ ನಡೆ ವೃತ್ತ ನಿರೀಕ್ಷಕರ ಪಿತ್ತ ನೆತ್ತಿಗೆ ಹತ್ತುವಂತೆ ಮಾಡಿಬಿಟ್ಟಿದೆ. ತಮ್ಮ ಜೊತೆಗೆ ತಮ್ಮ ಮೇಲಧಿಕಾರಿಗಳನ್ನು ಸಹ ಅವಮಾನಿಸಿದ್ದಾರೆ ಎಂದು ಕುದ್ದುಹೋಗಿದ್ದರು. ಏನೋ ಸಬೂಬು ಹೇಳಿ ಮೇಲಧಿಕಾರಿಯವರನ್ನು ಎಲ್ಲ ಕೆಲಸಗಳನ್ನೂ ತೋರಿಸಿ ಬೀಳ್ಕೊಟ್ಟಿದ್ದಾರೆ. ಆದರೆ ಮನಸ್ಸಿನಲ್ಲಿ ಅಗ್ನಿಪರ್ವತ ಸ್ಫೋಟಿಸಿದೆ. ಮೇಲಾಗಿ ಅವರು ಸ್ಥಳೀಯರು ಅಂದರೆ ಕಾರವಾರದವರು. ಒಂದರ್ಥದಲ್ಲಿ ಮಣ್ಣಿನಮಗ!. ತಮ್ಮ ನೆಲದಲ್ಲಿಯೇ ಅವಮಾನ ಸಹಿಸಿಯಾರೆ? ಆತ್ಮಗೌರವ ಇರುವ ವ್ಯಕ್ತಿಗಳು ಇಂತಹ ಅವಮಾನಗಳನ್ನು ಸಹಿಸಿಕೊಳ್ಳುವುದಿಲ್ಲ. ಅದರಲ್ಲೂ ಹೇಳಿಕೇಳಿ ಪೊಲೀಸ್ ಇಲಾಖೆ. ಶಿಸ್ತಿಗೆ ಮತ್ತು ದಕ್ಷತೆಗೆ ಹೆಸರಾಗಿರುವುದು ನಮ್ಮ ಕರ್ನಾಟಕ ಪೊಲೀಸ್ ಇಲಾಖೆ. ಸರಿ ಮನಸ್ಸಿನಲ್ಲೇ ಯೋಚಿಸುತ್ತಿದ್ದರು ಇದಕ್ಕೆ ಪ್ರತೀಕಾರ ಹೇಗೆ ತೀರಿಸಕೊಳ್ಳಬೇಕೆಂದು. ನನ್ನ ಗಮನಕ್ಕೆ ಈ ವಿಷಯವನ್ನು ಯಾರೂ ತರಲಿಲ್ಲ. ಒಂದು ನಾಲ್ಕೈದು ದಿನಗಳು ಕಳಯುತ್ತಿದ್ದಂತೆ ನಮ್ಮ ಕಂಪೆನಿಯ ಸ್ಥಳೀಯ ಯೋಜನಾ ಮುಖ್ಯಸ್ಥರು ನನ್ನನು ಅವರ ಕಛೇರಿಗೆ ಕರೆಸಿಕೊಂಡರು ಮತ್ತು ಸದರಿ ಪೊಲೀಸ್ ಅಧಿಕಾರಿಯ ಬಗ್ಗೆ ನನ್ನ ಅಭಿಪ್ರಾಯ ಕೇಳಿದರು. ಅವರು ಒಳ್ಳೆಯ ವ್ಯಕ್ತಿ ಎಂದು ಹೇಳಿದೆ. ಇಂದು ಒಂದು ಘಟನೆ ನಡೆಯಿತು. ನಾನು ಕಾರವಾರದಿಂದ ಯೋಜನಾ ಪ್ರದೇಶಕ್ಕೆ ಕಾರಿನಲ್ಲಿ ಬರುತ್ತಿದ್ದೆ. ಮುಖ್ಯದ್ವಾರದ ಬಳಿಯೇ ನನ್ನ ಕಾರನ್ನು ತಡೆಯಲಾಯಿತು. ಚಾಲಕನಿಂದ ಕಾರಿನ ಕಾಗದ ಪತ್ರಗಳನ್ನು ಪಡೆದು ಕಾರನ್ನು ವಶಪಡಿಸಿಕೊಂಡಿರುವುದಾಗಿ ತಿಳಿಸಿ ನನ್ನನ್ನು ಇಳಿಯುವಂತೆ ಹೇಳಿ ಕಾರಿನ ಕೀಲಿಕೈ ಸಹ ಪಡೆದರೆಂದರು ಅವರು. ಪಾಪ ಅಲ್ಲಿಂದ ಕಾಲ್ನಡಿಗೆಯಲ್ಲಿ ಮೂರ್ನಾಲ್ಕು ಕಿಲೋಮೀಟರ್ ನಡದೇ ಬಂದಿದ್ದಾರೆ ಕಛೇರಿಗೆ. ನನಗೆ ಅದು ಕೇಳಿ ಬೇಸರವಾಯಿತು. ಕಾರಣ ಕೇಳಿದೆ. ಮೇಲೆ ಹೇಳಿದಂತೆ ಎಲ್ಲವನ್ನೂ ಹೇಳಿದರು. ಅದೇನು ಮಾಡುತ್ತೀರೋ ಗೊತ್ತಿಲ್ಲ, ಕಾರನ್ನು ಬಿಡಿಸಿಕೊಂಡು ಬನ್ನಿ ಅಂದರು. ಅನಾಯಾಸವಾಗಿ ಅವರ ಅಂಗಳದಲ್ಲಿದ್ದ ಚೆಂಡನ್ನು ನನ್ನ ಅಂಗಳಕ್ಕೆ ಹಾಕಿದ್ದರು.

ಆ ಕಾರಿನ ಚಾಲಕನನ್ನು ಕರೆದೆ. ಅವನಿಗೆ ಇನ್ನೊಂದು ಕಾರನ್ನು ತರಲು ಹೇಳಿದೆ. ವೃತ್ತನಿರೀಕ್ಷಕರರ ಮನೆಗೆ ಫೋನಾಯಿಸಿದೆ. ಮನೆಯಲ್ಲಿದ್ದರು. ಸರ್ ನಿಮ್ಮನ್ನು ಭೇಟಿಮಾಡಬೇಕೆಂದೆ. ಮನೆಗೆ ಬನ್ನಿ ಅಂದರು. ಕಾರಿನ ಚಾಲಕನಿಗೆ ಅವರ ಮುಂದೆ ಕೇಳಿದ್ದಕ್ಕೆ ಮಾತ್ರ ಉತ್ತರಕೊಡಬೇಕು ಮತ್ತು ವಿಧೇಯತೆಯಿಂದ ನಡೆದುಕೊಳ್ಳಬೇಕು ಎಂದು ಹೇಳಿದೆ. ಕೋಲೇಬಸವನಂತೆ ತಲೆ ಆಡಿಸಿದ. ಆಗ ಸಂಜೆಯ ಸಮಯ. ಅವರ ಮನೆಗೆ ನೇರವಾಗಿ ಹೋಗಿ ವಿಷಯ ಪ್ರಸ್ತಾಪಿಸಿದೆ. ಅವರು ನೇರವಾಗಿ ನಿಮ್ಮ ಕಂಪೆನಿಯ ಶಾಖಾ ಪ್ರಮುಖರು ತುಂಬಾ ಗರ್ವಿಷ್ಟರು. ನಾವು ಮುಂದೆಯೇ ಇದ್ದರೂ ಮಾತನಾಡಿಸಲಿಲ್ಲ. ಒಂದು ಕುಶಲೋಪರಿ ವಿಚಾರಿಸಿಕೊಳ್ಳಲಿಲ್ಲ. ನನಗೆ ಬಹಳ ಬೇಸರವಾಯಿತು ಎಂದರು. ಮೇಲಾಗಿ ಸ್ವಂತ ಉಪಯೋಗಕ್ಕೆ ಇಟ್ಟುಕೊಳ್ಳುವ ಖಾಸಗಿ ಕಾರನ್ನು ಬಾಡಿಗೆಗೆ ಪಡೆದಿದ್ದೀರಿ. ಅದಕ್ಕೆ ಕಾರನ್ನು ವಶಕ್ಕೆ ಪಡೆದಿದ್ದೇನೆ ಎಂದರು. ಮೌನಿಯಾಗಿ ಹೇಳಿದ್ದೆಲ್ಲ ಕೇಳಿಕೊಂಡೆ. ಅವರಿಗೂ ಸಮಾಧಾನವಾಗಿರಬೇಕು. ನಾನು ಈ ಮೊದಲೇ ಹೇಳಿದ್ದೇನೆ. ಆತ್ಮಗೌರವಕ್ಕೆ ಚ್ಯುತಿ ಬಂದಾಗ ಎಲ್ಲರೂ ಒಂದಲ್ಲ ಒಂದು ರೀತಿ ಪ್ರತಿಭಟಿಸುತ್ತಾರೆ. ಅದು ಎಲ್ಲರ ಹಕ್ಕು. ಆಮೇಲೆ ನಾನು ಮಾತನಾಡಲು ಅನುಮತಿ ಕೇಳಿದೆ. ಹೇಳಿ ಎಂದರು. ನಮ್ಮ ಶಾಖಾ ಮುಖ್ಯಸ್ಥರು

ಬಹಳ ಒಳ್ಳೆಯವರು ಆದರೆ ಸ್ವಲ್ಪ ನಾಚಿಕೆ ಸ್ವಭಾವದವರು ಎಂದು ಇದ್ದ ವಿಷಯವನ್ನೆಲ್ಲ ಹೇಳಿದೆ. ಸ್ವಲ್ಪ ಸಮಾಧಾನ ಆದಂತೆ ಕಂಡಿತು. ಕಾರಿನ ಚಾಲಕನನ್ನು ತೋರಿಸಿ ಇವನು ನನ್ನ ಸ್ನೇಹಿತರ ಮಗ ಸರ್ ಅಂದೆ. ವಿಧೇಯತೆಯಿಂದ ಎರಡೂ ಕೈ ಜೋಡಿಸಿ ನಮಸ್ಕರಿಸಿದ. ಮುಂದುವರಿಸಿದೆ, ಓದುಬಿಟ್ಟು ಅಪ್ಪನ ಕಾರಿನಲ್ಲಿ ಅಲ್ಲಿಇಲ್ಲಿ ಸುತ್ತುತ್ತಿದ್ದ. ಇದನ್ನು ಅವರಪ್ಪ ನನಗೆ ಹೇಳಿದರು. ನಾನೇ ಅವರಿಗೆ ಕಾರಿನೊಂದಿಗೆ ಮಗನನ್ನು ಇಲ್ಲಿಗೆ ಕಳಿಸಲು ಹೇಳಿದೆ. ಕಳುಹಿಸಿಕೊಟ್ಟಿದ್ದಾರೆ ಅಂದೆ. ಈಗ ಹುಡುಗ ಬಹಳ ಒಳ್ಳೆಯವನಾಗಿದ್ದಾನೆ. ತಾನೇ ದುಡಿದು ತನ್ನ ಕಾಲ ಮೇಲೆ ನಿಲ್ಲುತ್ತಿದ್ದಾನೆ ಸರ್ ಎಂದೆ. ಅವರು ಮೃದು ಹೃದಯಿ. ನಾನು ಹೇಳಿದ್ದು ಅಪ್ಪಟ ಸುಳ್ಳು. ಆ ಚಾಲಕ/ಮಾಲೀಕನ ತಂದೆಯವರನ್ನು ಇದುವರೆಗೂ ನಾನು ನೋಡಿಯೇ ಇಲ್ಲ. ಹಾಗೆ ಹೇಳದೆ ವಿಧಿಯೇ ಇರಲಿಲ್ಲ. "ದಂಡಿನಲ್ಲಿ ಸೋದರಮಾವನೆ?" ಅನ್ನುವ ಗಾದೆಯೇ ಇದೆಯಲ್ಲ!. ಬಿಟ್ಟ ಬಾಣ ಗುರಿತಪ್ಪಲಿಲ್ಲ. ನಾ ಹೋದ ಕೆಲಸವಾಯಿತು. ನಮಗೆ ಟೀ ಸಹ ಕೊಟ್ಟರು. ಕಾರಿನ ದಾಖಲಾತಿಗಳನ್ನು ಮತ್ತು ಕೀಲಿ ಕೈ ಕೊಟ್ಟರು. ಅವರಿಗೆ ವಂದಿಸಿ ಹೊರಟೆವು. ಬೆಟ್ಟದಷ್ಟಿದ್ದ ಸಮಸ್ಯೆ ಮಂಜಿನಂತೆ ಕರಗಿತ್ತು. ಆ ಕಾರಿನ ಚಾಲಕ/ಮಾಲೀಕ ಇಂದು ಅನೇಕ ಲಾರಿಗಳ ಮಾಲೀಕರು. ನನ್ನ ಸಂಪರ್ಕದಲ್ಲಿ ಈಗಲೂ ಇದ್ದಾರೆ. ಸುಳ್ಳು ಜೀವನ ರೂಪಿಸುವಂತಿದ್ದರೆ ಅದನ್ನು ಹೇಳುವುದರಲ್ಲಿ ತಪ್ಪಿಲ್ಲ ಎಂಬುದು ನನ್ನ ಅಭಿಮತ. ನೀವೇನಂತೀರಾ??

■

---




**ಅವರನ್ನ ನೋಡಿ ಕಲಿಯಿರಿ ಕಣ್ರೀ..!ನೀವು
ಇದ್ದಿರಿ 4ಗಂಟೆ ಮನೆ ಕೆಲಸ ಮಾಡಿದ್ರೆ ಸಾಕು
ಶಕ್ತಿನೆ ಇಲ್ಲದ ಹಾಗೆ ಮಾಡ್ತಿರಾ...!**

# ಸಂಗೀತಾ...ಆಹಾ...ಆಹಾ

**। ನಳಿನಿ. ಟಿ. ಭೀಮಪ್ಪ**

ನಂಗ್ ಬಾಳ್ ಸಿಟ್ಟ್ ಬಂದೇತ್ ನೋಡ್ರೀ. ಹೆಚ್ಚೂ ಕಮ್ಮೀ ಧೀರ್ಘ ವರ್ಸ ಆತ್ರೀ ನಾ ಹಾಡಾ ಕೇಳೀ. ಈಗ ಕೇಳೂದಿಲ್ಲೇನು ಅಂತಾ ಪ್ರಶ್ನೀ ಮಾಡಾಕತ್ತೀರೇನೂ?. ಈಗೂ ಕೇಳ್ತೀನ್ರೀ, ಆದ್ರ ನಂಗ್ ಇಷ್ಟಾ ಬಂದಂಗ್ ಹಾಡು ಕೇಳಾಕ್ ಮನ್ಯಾಗ್ ಬಿಡಂಗಿಲ್ಲ ನೋಡ್ರೀ. ಮೊದಲಾಗಿದ್ರೆ ಗಂಡಾ, ಮಕ್ಳುನ್ನ ಒಂಭತ್ತು ಗಂಟೀಗ್ ಡೆಬ್ಬೀ ಕಟ್ಟಿ ಹೊರಕ್ ಒಗ್ದು, ಒಂದು ಸ್ಟ್ರಾಂಗ್ ಕಾಫೀ ಮಾಡ್ಕಂಡ್, ಟೀವಿ ಹಚ್ಚಿ ಮ್ಯೂಸಿಕ್ ಚಾನೆಲ್ಲ ನೋಡ್ಕೋತ ಕೂಡ್ತಿದ್ದೆ. ಆಮ್ಯಾಗೆ ಒಳಗ್ ಅಡುಗೀ ಮನೀ ಕೆಲ್ಸ ಮಾಡೂ ಮುಂದ್ ಸೈತ, ರೇಡಿಯೋನೋ, ಅಲೆಕ್ಸಾನೋ ಒದರ್ತಾ ಇದ್ರೆ ಕೆಲ್ಸ್ ಸುಸೂತ್ರಾಗಿ ನಡೀತಿತ್ತು. ಈಗಂತೂ ಎಲ್ರೂ ಆನ್ಲೈನ್ ಕ್ಲಾಸೂ ಅಂತಾ ಮನ್ಯಾಗಿರ್ತಾರೆ. ಒಂದು ಟಿವಿ ಹಾಕಂಗಿಲ್ಲಾ, ಅಲೆಕ್ಸಾ ಹಚ್ಚಂಗಿಲ್ಲಾ, ಡಿಸ್ಟರ್ಬ್ ಆಕ್ಕೇತಿ ಆಫ್ ಮಾಡೂ ಅಂತಾ ಬಡ್ಕೋತಾರ. ಕಿವೀಗ್ ಇಯರ್ ಫೋನ್ ಹಾಕ್ಕೊಂಡು ಮೊಬೈಲ್‌ನಾಗ್ ಬೇಕಾದ್ರೆ ಕೇಳ್ಕೋ ಅಂತಾ ಫರ್ಮಾನ್ ಹೊರಡಿಸ್ಯಾರೆ. ಅದನ್ನ ಹಚ್ಕೊಂಡು ಕೆಲ್ಸಾ ಮಾಡೂ ಮುಂದ, ಹೊರಗ್ ಯಾರು ಕೂಗಿದ್ದೂ ಕೇಳ್ಸಂಗಿಲ್ಲಾ, ಕರ್ದಿದ್ದೂ ಕೇಳಸಾಂಗಿಲ್ಲ. ಮತ್ತ ಬೈಯ್ಯಾಕ್ ಚಾಲೂ ಮಾಡ್ತಾರ. ಏನೇ ಅಂದ್ರೂ ಹಾಡಾ ಜೋರ್ ದನಿಲೇ ಇಟ್ಕೊಂಡ್ ಅದರ ಜೊತೀಗ್ ಹಾಡೋ ಮಜಾನಾ ಬ್ಯಾರೆ ಬಿಡ್ರೀ. ನಮ್ಮ ಪಕ್ಕದ್ ಮನೀ ಆಂಟೀ ಸೈತ, ಒಮ್ಮೊಮ್ಮಿ ನನ್ನ ಹಾಡಾ ಕೇಳಿಸ್ಲಿಲ್ಲಾ ಅಂದ್ರ, ಊರಾಗಿರ್ಲಿಲ್ಲೇನ್ರೀ?, ಯಾಕೋ ನಿಮ್ಮ ಅಡುಗೀ ಮನಿಯಿಂದ ಹಾಡಾ ಕೇಳಸ್ಲಿಲ್ಲ, ಅದಕ್ಕಾ ಕೇಳಿದೆ ಅಂತಾರ.

ಸಂಡೇನಾರಾ ಹಚ್ಚೂಣೂ ಅಂದ್ರ, ಮೊದ್ಲಾ ಏಳೂದು ಎಲ್ಲರೂ ಲೇಟು, ಎದ್ದ ಮ್ಯಾಗ್ ಎಫ್ ಎಮ್ ಹಚ್ಚಿ, ಅದ್ರ ಕೂಡ ನಾನೂ ಕಾಕಾ ರಾಗದಾಗ್ ಹಾಡ್ಕೋತ ಕೆಲ್ಸ ಮಾಡೋಕ್ ಸುರು ಮಾಡೋತ್ಲೇ, ಹಲ್ಲುಜ್ಕೋತಾನೇ ಮಗಳು ಕೂಗು ಹಾಕ್ತಾಳೆ. ಮಮ್ಮೀ, ಒಂದೂ ನೀನಾರಾ ಹಾಡೂ, ಇಲ್ಲಾ ಆ ರೇಡಿಯೋಕ್ಕಾದ್ರೂ ಹಾಡಾಕ್ ಬಿಡೂ, ಇಬ್ರೂ ಜೊತೀಗ್ ಹೊಯ್ಕೊಳ್ಳೋಕ್ ಶುರುಮಾಡಿದ್ರೆ ನಾವೆಲ್ಲಿಗ್ ಹೋಗ್ಬೇಕ್ ಅಂತಾಳೆ. ಒಳ್ಳೇ ಟ್ರ್ಯಾಕ್ಟರ್‌ನಾಗ್ ಜೋರ್ ಹಚ್ಕೊಂಡು ಹೋಗ್ತಿರ್ತಾರ್ ನೋಡು ಹಂಗ್ ಇರ್ತೇತೀ. ನಾ ಹುಟ್ಟಿದಾಗ್ನಿಂದ ನೋಡೇನೀ, ನಿನ್ನ ಟೇಸ್ಟಾ ಚೇಂಜ್ ಆಗಿಲ್ಲ, ಹೊಳ್ಳಮಳ್ಳಾ, ಹೊಳ್ಳಾಮಳ್ಳಾ ಅವೇ ಹಾಡು ಕೇಳ್ಕೋತ ಇರ್ತೀ, ಬ್ಯಾಸ್ರ ಆಗಂಗಿಲ್ಲೇನು ನಿಂಗೆ ಅಂತಾಳ. ಅಕೀ ಹುಟ್ಟಿದ್ಯಾಗ್ ಅಲ್ಲ, ನಾ ಹುಟ್ಟಿದಾಗಿಂದ್ಲೂ ಅವಾ ಹಾಡು ಕೇಳಾಕತ್ತೇನೀ, ಎಷ್ಟು ಚಂದ ಇರ್ತಾವ, ಇವುಗಳದು ಅದೆಂತಾ ಟೇಸ್ಟೋ ಗೊತ್ತಾಗಂಗಿಲ್ಲ.

ಒಮ್ಮೀ ಹೊಸಾ ಹಾಡಾ ಕೇಳಾರಾ ಕೇಳು ಮಮ್ಮೀ, ಏನು ಮಸ್ತ್ ಹಾಡ್ತಾರೆ, ಲಿರಿಕ್ಸ್ ಅಂತೂ ಇನ್ನೂ ಮಸ್ಟ್ ಇರ್ತೇತಿ ಅಂತಾ ಅಲೆಕ್ಸಾ ಹಚ್ತಾಳೆ. ಬರೀ ಇಂಗ್ಲೀಷ್ ಹಾಡುಗಳು. ಸೆಲೆನಾ ಗೆಮೋಜ್, ಜಸ್ಟಿನ್ ಬಿಬರ್, ಶಾನ್ ಮೆಂಡೇಸ್, ಕ್ಯಾಟೀ ಪೆರ್ರೀ, ರಿಹಾನಾ, ಅಲಿಯಾನಾ ಗ್ರಾಂಡೇ ಹಾಡಿದ್ದ ನಮೂನಿನಮೂನಿ ಹಾಡಾ ಹಚ್ತಾಳ. ನನ್ ಕಿವೀನೇ ಕಿತ್ ಅಲೆಕ್ಸಾಕ್ಕೆ ಹಚ್ಚಿದ್ರೂ, ಒಂದು ಪದಾನೂ ಅರ್ಥ ಆಗ್ಲಿಲ್ಲ ಬಿಡ್ರೀ. ಸರಿಯಾಗಿ ಕೇಳಿಸ್ಕೋ ಅಂತಾ ಸಿಡುಕು ಮಾಡ್ತಾಳ. ಏನೋ ಅಕೀ

ಖುಷೀಗ್, ಭಲೋ ಐತಿ ಅಂತಾ ಹೇಳಿ ಪಾರಾಕ್ಕೇನಿ. ಅದ್ಯಾವೋ ಬ್ಯಾಂಡುಗಳಂತ. ಬಿಟಿಎಸ್, ಅಲನ್ ವಾಕರ್ ಅವುಗಳನ್ನೂ ಸೈತ ಬಿಡಂಗಿಲ್ಲ. ನಮಗಂತೂ ಮದ್ವೀನಾಗ್ ಬಾರ್ಸೋ ಬ್ಯಾಂಡ್ ಬಿಟ್ರೆ, ಬ್ಯಾರೆ ಗೊತ್ತಿಲ್ಲ್ ನೋಡ್ರೀ. ಏಸೂರು ತಿರುಗಿದ್ರೂ, ನಮ್ಮೂರಾ ನಮಗ್ ಚಂದ ಅನ್ನೂ ಹಂಗ್ ಮತ್ತ, ಆಕೀ ಅತ್ಲಾಗ್ ಹೊಗ್ತಿದ್ದಂಗ್ ನಮ್ಮ ಹಳೀ ಹಾಡಾ ಹಚ್ಚಿದ್‌ಮ್ಯಾಗಾ ಮನ್ಸು ಸಮಾಧಾನ ಆಗೂದು.

ಸಣ್ಣಾಕಿ ಇದ್ದಾಗ್ ಸೈತ ಹಂಗಾ. ನಮ್ಮವ್ವ ಬರೀ ರೇಡಿಯೋ ಕೇಳಾಕಿ, ನಮ್ಮಪ್ಪ ಟೇಪ್‌ರೆಕಾರ್ಡರ್‌ನಾಗ ಮುಕೇಶ್, ರಫೀ, ಲತಾ, ಆಶಾ ಇವ್ರ ಹಾಡಿದ್ ಕ್ಯಾಸೆಟ್ಸ್ ಮಾತ್ರ ತರ್ತಿದ್ದು. ಹೊಸಾ ಹೊಸಾ ಹಿಂದಿ ಹಾಡಾ ಕೇಳ್ಬೇಕೂ ಅಂತಾ ಆಸೀ ನಮಗೆ. ಒಮ್ಮೊಮ್ಮಿ ಸಿಲೋನ್ ನಾಗ್ ಬರೂ ಹಿಂದೀ ಹಾಡು ಹಚ್ತಿದ್ದಂಗ್, ನಮ್ಮವ್ವ ಬಂದು ಗಪ್ಪ ಅಂತಾ ಆರ್ಸಿ ಬಿಡಾಕಿ. ಇವುಕ್ಕೇನು ಹಾಡಾ ಅಂತಾರೇನು ಅಂತಾ. ನಮ್ ಗೆಳ್ತಿಯಾರ್ ಕಡೆಯಿಂದ ಒಮ್ಮೊಮ್ಮಿ ಕ್ಯಾಸೆಟ್ ತಂದು ಮೆಲ್ಲಕ ಹಚ್ಕೊಂಡು ಕೇಳ್ತಿದ್ದೆ. ಆಗ್ಲೂ ಸರಿಯಾಗ್ ಹಾಡು ಕೇಳ್ಲಿಲ್ಲ. ಈಗ ನಾನು ನನ್ನ ಮಗಳಿಗೆ ಅದೇ ಅನ್ನಾಕತ್ತೇನಿ ನೋಡ್ರೀ. ಇದೇ ಇರ್ಬೇಕು ಜೀವನ ಚಕ್ರ.

ಇನ್ನ ಕಾರ್‌ನ್ಯಾಗ್ ಹೋಗ್ಬೇಕಾದ್ರ ಅವರವರ ಇಷ್ಟದ ಹಾಡಾನ ಪೆನ್‌ಡ್ರೈವ್‌ಗೆ ಹಾಕ್ಕೊಂಡು ರೆಡಿಯಾಗ್ತಾರ. ನನ್ನಿಷ್ಟ ಯಾರೂ ಕೇಳಂಗೇ ಇಲ್ಲ ಬಿಡ್ರೀ. ಮೊನ್ನೆ ನಮ್ಮ ಕಾಕಾ ಮದ್ವೀಗ್ ಬರ್ತಿಯೇನವ್ವಾ ನಮ್ ಹೊಸಾ ಕಾರ್‌ನ್ಯಾಗ್ ಹೋಗ್ಬರೂಣು ಅಂತಾ ಕರೆದಿದ್ರು. ನನ್ನ ಮಗಳು ಇಯರ್ ಫೋನ್ ತೊಗೊಂಡು ಹೋಗ್ ಮಮ್ಮೀ, ನಿಂಗ್ ಡಿಸ್ಟರ್ಬ್ ಆದಾಗ ಕಿವಿಗ್ ಚುಚ್ಕೊಂಡು, ನಿನ್ನಿಷ್ಟದ ಹಾಡಾ ಕೇಳ್ಬೋದು, ಇಲ್ಲಾ ಕಿವಿ ಬಂದ್ ಮಾಡ್ಕೋಬೋದು ಅಂದ್ಲು. ಇರ್ಲೀ ಬಿಡಾ ಕಾಕಾ, ಕಾಕೀ ಜೋಡೀ ಮಾತಾಡ್ಕೊಂಡು ಹೋಕ್ಕೇನಿ, ಅವ್ರೂ ಹಳೀ ಕಾಲ್ದೋರು, ರಾಜ್ಕುಮಾರ್, ಎಸ್‌ಪಿಬಿ, ಜಾನಕಿ ಅವ್ರ ಹಾಡಾ ಹಚ್ಬೋದು, ನಂಗಂತೂ ಹಳೀ ಹಾಡು ಯಾವ್ದು ಹಚ್ಚಿದ್ರೂ ನಡೀತೈತಿ ಅಂತಾ ಹೇಳಿ ಹೋಗಿದ್ದೆ. ಕಾರ್‌ನ್ಯಾಗ್ ಕೂತಿದ್ದೇ ತಡ ಕಾಕಾ, ದೇವರ ಹಾಡು ಹಚ್ಚಪ್ಪಾ ಅಂತಾ ಡ್ರೈವರ್‌ಗೆ ಹೇಳಿದ್ರು ನೋಡ್ರೀ, ಊರು ಮುಟ್ಟೋ ಮಟ, ಸತತ್ ಎರಡು ತಾಸು ಮುಕ್ಕೋಟಿ ದೇವರುಗಳು ನನ್ನ ಕಿವೀನಾ ಪಾವನಾ ಮಾಡಿಬಿಟ್ರು. ಬರೂ ಮುಂದ ತಮ್ಮನ ಕಡೀ, ನಿನ್ನ ಇಯರ್ ಫೋನ್ ಕೊಡ್ಪಾ, ಊರಿಗ್ ಬಂದಾಗ ವಾಪಸ್ ತೊಗೊಂಡು ಹೋಗೋವಂತೆ ಅಂತಾ ಕೇಳಿ ತಂದಿದ್ದಾತು. ಮತ್ತೆ ಎರಡು ತಾಸು ಸತತ ದೇವರು ಹಾಡಿನ ಮಳೀ ಸುರುವಾಗಿತ್ತು. ಪುಣ್ಯೇಕ್ ಛತ್ರಿ ಹಂಗ್ ಇಯರ್ ಫೋನ್ ನೆರವಾತು. ಈಗ ಎಲ್ಲಿಗ್ ಹೋದ್ರೂ ಇಯರ್‌ಫೋನು ಮರೆಯಂಗಿಲ್ಲಾ ಮತ್ತ.

ಪಪ್ಪಾ ನೀ ಮಮ್ಮೀಗೆ, ಈ ಮನೀ ಕಟ್ಟೂ ಮುಂದ ಒಂದು ಸೌಂಡ್‌ಪ್ರೂಫ್ ರೂಮ್ ಕಟ್ಟಿಸ್ಬೇಕಿತ್ತು ನೋಡು. ಎಷ್ಟು ಜೋರ್ ಹಾಡಾ ಹಾಡಿದ್ರೂ, ಹಚ್ಚಿದ್ರೂ ನಡೀತಿತ್ತು, ನಮ್ಮ ಕಿವಿ ಶೋಷಣೆ ನಿಲ್ತಿತ್ತು ಅಂತಾ ಮಗಳು ಚಾಷ್ಟೀ ಮಾಡ್ತಾಳ. ಯಾವಾಗ ಈ ಕೊರೋನಾ ತೊಲಗಿ ನಾ ಜೋರ್ ಹಾಡಾ ಹಚ್ಚೀ, ಸಂಗೀತಾ...ಆಹಾ...ಆಹಾ ಅಂತಾ ಅದರ್ ಜೊತೀಗ್ ಹಾಡ್ತೀನೋ ಅಂತಾ ತುದೀಗಾಲಾಗ್ ಕಾಯಾಕತ್ತೇನಿ ನೋಡ್ರೀ. ■

# ನಮ್ಮ ಪ್ರವಾಸಕ್ಕೆ ಜಯವಾಗಲಿ!

**I ಸುಚಿತ್ರಾ ಹೆಗಡೆ**

ಲಾಕ್ ಡೌನ್ ಸಮಯ. ಟಿವಿಯಲ್ಲಿ ನ್ಯಾಷನಲ್ ಜಿಯೊಗ್ರಾಫಿಕ್ ಚಾನಲ್ ಬಿತ್ತರವಾಗುತ್ತಿತ್ತು. ಸಿಂಹವೊಂದು ತನ್ನ ಹಳೆಯ ಗಾಯಗಳನ್ನು ನೆಕ್ಕುತ್ತಾ ಮಲಗಿತ್ತು. ಅದನ್ನು ನೋಡುತ್ತಾ , ಹೊರಗೆಲ್ಲೂ ಹೋಗಲಾಗದೇ, ಮನೆಯಲ್ಲೂ ಕೂರಲಾಗದೇ ಮಾಡಿದಹಳೆಯ ಪ್ರವಾಸಗಳನ್ನೇ ನೆನೆಸಿಕೊಂಡು ಕೊರಗುತ್ತಿರುವ  ನನ್ನನ್ನೇ ನೋಡಿದಂತಾಯಿತು. ಎಂದಿನಂತೆ ಹಿಂದಿನ ಪ್ರವಾಸಗಳನ್ನು ನನೆಯೋಣ ಅಂದರೆ ಎಲ್ಲಾ ಟೂರುಗಳು ಎರೆಡೆರಡು ಸಲ ಮನದಲ್ಲಿ ಆಗಲೇ ರೀವೈಂಡ್ ಆಗಿ ಮುಗಿದಿತ್ತು. ಅಷ್ಟರಲ್ಲಿ ನನ್ನ ಬಾಲ್ಯದಕನ್ನಡ ಶಾಲೆಗಳ ಪ್ರವಾಸಗಳ ಅಚ್ಚಳಿಯದ ನೆನಪುಗಳು ತುಂಟನಗುವಿನ ಜೊತೆಗೆ ಕಣ್ಣು ಮಿಟುಕಿಸಿತು.

ಶಾಲೆಗೆ ಹೋಗುವುದೇ ಒಂದು ದೊಡ್ಡ ಪ್ರವಾಸದಂತೆ ಕಾಣುವ ಈ ಕಾಲದಲ್ಲಿ, ನನ್ನ ಶಾಲಾದಿನಗಳಲ್ಲಿ ಹೋದ ಪ್ರವಾಸಗಳನ್ನು ತಿರುಗಿ ನೋಡಿದರೆ ಅದೆಂತಾ ಸೊಗಸು. ಆ ಕಾಲದಲ್ಲಿ ನಮ್ಮಲ್ಲಿಯ ಶಾಲಾ ಪ್ರವಾಸಗಳಿಗೆ ಅದರದ್ದೇ ಆದ ಒಂದು ವಿಶಿಷ್ಟಸೊಗಡಿತ್ತು. ಉತ್ತರ ಕನ್ನಡದಲ್ಲಿ ಓದಿದ ನನ್ನ ಸಮಕಾಲೀನರಲ್ಲಿ ಯಾರನ್ನೂ ವಿಚಾರಿಸಿದರೂ ಪ್ರವಾಸಿ ಸ್ಥಳಗಳ ಪಟ್ಟಿಯಲ್ಲಿ ಎಳ್ಳಷ್ಟೂಬದಲಾವಣೆಯಾಗುವದಿಲ್ಲ.

ಒಂದರಿಂದ ನಾಲ್ಕನೇ ಕ್ಲಾಸಿನ ಮಕ್ಕಳು ಪ್ರವಾಸ ಭಾಗ್ಯ ಯೋಜನೆಯ ಫಲಾನುಭವಿಗಳ ಪಟ್ಟಿಯಲ್ಲಿ ಇರಲೇ ಇಲ್ಲ. ಏನಿದ್ದರೂ ಐದನೇ ತರಗತಿಯಿಂದ ಮಾತ್ರ. ಪ್ರವಾಸಕ್ಕೆ ಹೋಗುವ ಏಕೈಕ ಅರ್ಹತೆ ಎಂದರೆ ಮಕ್ಕಳು ತಂದೆ ತಾಯಿಗಳನ್ನು ಇನ್ನಿಲ್ಲದಂತೆ ಪೀಡಿಸಿಕಾಡಿಸಿ ಪ್ರವಾಸಿ ಭತ್ಯೆಯನ್ನು ಗಿಟ್ಟಿಸಿ ಗುರುಗಳಿಗೆ ತಂದುಕೊಡುವದು. ಕೆಲವು ಮಕ್ಕಳ ಪಾಲಕರಿಗೆ ಆ ಐವತ್ತು ಅರವತ್ತುರೂಪಾಯಿಗಳೂ ದೊಡ್ಡ ಹೊರೆಯಾಗಿ ಪರಿಣಮಿಸಿದಾಗ, ಮಕ್ಕಳು ತಮ್ಮಲ್ಲಿ ಹಾಸುಹೊಕ್ಕಾದ ಅದ್ಭುತ ಕ್ರಿಯಾಶೀಲತೆಯಿಂದಲೇ ಆ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು.

ಏಳನೆಯ ತರಗತಿಯಲ್ಲಿರುವಾಗ, ಮುರುಡೇಶ್ವರದ ಪ್ರವಾಸಕ್ಕೆ ಬೇಕಾದ ಐವತ್ತೈದು ರೂಪಾಯಿಗಳನ್ನು ನನ್ನ ಸಹಪಾಠಿಗಳಾದ ಗಣಪತಿ ಮತ್ತು ಕಿಶೋರ ಶಾಲೆಯದೇ ಆದ ಗೇರುಮರದ ತೋಪಿಗೆ ಹೋಗಿ ಗುಟ್ಟಾಗಿ ಕೆಜಿಗಟ್ಟಲೇ ಗೇರು ಬೀಜ ಸಂಗ್ರಹಿಸಿ, ಅದನ್ನು ನಮ್ಮೂರಿನ ಪ್ರಸಿದ್ಧ ವ್ಯಾಪಾರಿಯಾದ ವಾಮನ ಶೆಟ್ರಿಗೆ ಮಾರಾಟ ಮಾಡಿ ವೀರೋಚಿತವಾಗಿ ದುಡ್ಡು ತಂದು ಕೆರೆಯ ನೀರನು ಕೆರೆಗೇ ಚೆಲ್ಲಿದ್ದರು.

ಹೆಚ್ಚುವರಿಯಾಗಿ ಉಳಿದ ಹಣದಲ್ಲಿ ದಿಲ್ದಾರ್ ಆಗಿ ಇಡೀ ಕ್ಲಾಸಿಗೇ ಶೇಂಗಾ ಮತ್ತು ಹುರಿಗಡಲೆ ಪಾರ್ಟಿಯೂ ನಡೆದು ಮುಂದಿನಎರಡು ದಿನಗಳಲ್ಲಿ ಮಾಸ್ತರಾದಿಯಾಗಿ ಎಲ್ಲರೂ ಮೂಗು ಮುಚ್ಚಿಕೊಂಡು ನಾನಲ್ಲ..ನೀನು ಎಂಬ ಆರೋಪ ಪ್ರತ್ಯಾರೋಪಗಳಆಟಗಳಲ್ಲಿ ಬಿಜಿಯಾಗಿದ್ದೆವು.

ನಮ್ಮ ಉತ್ತರ ಕನ್ನಡದ ಶಾಲೆಗಳೋ ಈ ಶೈಕ್ಷಣಿಕ ಪ್ರವಾಸ ಎನ್ನುವ ವಿಷಯವನ್ನು ಪುಸ್ತಕದಲ್ಲಿರುವ ಸಿಲೆಬಸ್‌ನಷ್ಟೇ ಕರಾರುವಾಕ್ಕಾಗಿ ಪಾಲಿಸುತ್ತಿದ್ದರು. ಮೊದಲು ಯಾವ ತರಗತಿಯ ಮಕ್ಕಳು ಎಷ್ಟು ದೂರದವರೆಗೆ ಟ್ರಿಪ್

ಹೋಗಬಹುದೆಂಬ ಸರ್ವೆ ನಡೆಯುತ್ತಿತ್ತು. ಯಾವ ಜಾಗಕ್ಕೆ ಹೋದರೆ ಏನು ಫ್ರೀಯಾಗಿ ಸಿಗುತ್ತದೆ ಎನ್ನುವುದಕ್ಕೆ ಪ್ರಥಮ ಪ್ರಾಶಸ್ತ್ಯ. ಮಠ ಮಂದಿರಗಳಲ್ಲಿ ಊಟ, ಗೇರುಬೀಜ ಫ್ಯಾಕ್ಟರಿಯಲ್ಲಿ ಗೇರುಬೀಜ, ಐಸ್ ಫ್ಯಾಕ್ಟರಿಯಲ್ಲಿ ಐಸ್ ಕ್ಯಾಂಡಿ ಹೀಗೆ..ಆದರೆ ಹೆಂಚಿನ ಫ್ಯಾಕ್ಟರಿಯಲ್ಲಿ ಹೆಂಚುಫ್ರೀಯಾಗಿ ಕೊಟ್ಟಿದ್ದು ನೆನಪಿಗೆ ಬರುತ್ತಿಲ್ಲ.

ಕನ್ನಡ ಶಾಲೆಯ ಟ್ರಿಪ್ ಗಳಲ್ಲಿ ಮೊದಲನೆಯ ಪ್ರಾಶಸ್ತ್ಯ ಪುಣ್ಯ ಕ್ಷೇತ್ರಗಳು..ಆ ಯಾತ್ರೆಗಳಲ್ಲಿ ಇಡಗುಂಜಿ, ಗೋಕರ್ಣ, ಮುರುಡೇಶ್ವರ, ಗೋರೆ, ಸೋದೆ ಮತ್ತು ಚಿತ್ತಾಪುರ ಮಠಗಳು, ಎರಡನೆಯದಾಗಿ, ಐತಿಹಾಸಿಕ ಸ್ಥಳಗಳಾದ ಮಿರ್ಜಾನ್ ಕೋಟೆ, ಬನವಾಸಿ, ಭಟ್ಕಳ,ಗೇರುಸೊಪ್ಪ ಇನ್ನು ಆರು ಮತ್ತು ಏಳನೆಯ ತರಗತಿಯ ಮಕ್ಕಳಿಗೆ ಫೀಲ್ಡ್ ಟ್ರಿಪ್ಗಳೂ ಇದ್ದವು....ಅಕ್ಕಪಕ್ಕದ ಹಂಚಿನಫ್ಯಾಕ್ಟರಿ, ದೀವಗಿಯ ಐಸ್ ಫ್ಯಾಕ್ಟರಿ ..ಇನ್ನೂ ಮುಂದುವರಿದ ಶಾಲೆಯಾದರೆ ಕುಮಟಾ ಮತ್ತು ಬೇಲೆಕೇರಿ ಬಂದರು. ಇನ್ನು ನಿಸರ್ಗಸೌಂದರ್ಯದ ಸ್ಥಳಗಳಾದರೆ ನಮ್ಮ ಇಡೀ ಜಿಲ್ಲೆಯೇ ಭೂಲೋಕ ಸ್ವರ್ಗ.. ಜೋಗ, ಉಂಚಳ್ಳಿ, ವಾಗೋಡು ಮುಂತಾದಜಲಪಾತಗಳು ಯಾಣಕ್ಕೆ ಚಾರಣ, ದಾಂಡೇಲಿಯ ಅಭಯಾರಣ್ಯ, ಕಾರವಾರದ ಬೀಚು..ಒಂದೇ..ಎರಡೇ..

ಮಕ್ಕಳಿಂದ ಸಂಗ್ರಹಿಸಿದ ಹಣದ ಬೆಲೆ ಚೆನ್ನಾಗಿ ಗೊತ್ತಿದ್ದ ಶಿಕ್ಷಕರು ಮಾಡುತ್ತಿದ್ದ ಹಣಕಾಸು ನಿರ್ವಹಣೆಯ  ಕರಡು ಪ್ರತಿಯೇನಾದರೂನಮ್ಮ ಸರ್ಕಾರಗಳ ಕೈಗೆ ಸಿಕ್ಕಿದ್ದರೆ ನಮ್ಮ ಜಿಡಿಪಿ ಅಧ್ಯಯನಕ್ಕೆ ಇಸ್ರೋದವರೇ ಬರಬೇಕಿತ್ತು. 'ಊಟ ಹೋದ್ರೆ ಕೋಟಿ ಲಾಭ'ಎನ್ನುವತತ್ವದಲ್ಲಿ ಅಸೀಮ ನಂಬಿಕೆಯಿಟ್ಟ ನಮ್ಮ ಶಿಕ್ಷಕರು ಊಟದ ಸಮಯಕ್ಕೆ ಸರಿಯಾಗಿ ಉಚಿತ ದಾಸೋಹದ ಛತ್ರಗಳಿರುವದೇವಸ್ಥಾನದ ಎದುರಿಗೆ ಪ್ರವಾಸದ ವಾಹನ ಬಂದು ನಿಲ್ಲುವ ವ್ಯವಸ್ಥೆ ಮಾಡುತ್ತಿದ್ದರು.

ಇನ್ನು ಮುಂದಿನದು ಮಕ್ಕಳಾದ ನಮ್ಮ ಪ್ರತಿಭಾ ಕಾರಂಜಿ ಕಾರ್ಯಕ್ರಮ. ಹೇಗೆ ಸರತಿ ಸಾಲನ್ನು ಬೇಧಿಸಿ ಮುನ್ನುಗ್ಗುವುದು, ಪಂಕ್ತಿಯಲ್ಲಿ ಬಾಳೆಲೆ ಹಿಡಿದು ಕುಳಿತುಕೊಳ್ಳುವದು, ನಾವು ಮಕ್ಕಳು ಎಂದುಕೊಂಡು ಸ್ವಲ್ಪವೇ ಬಡಿಸುವಸಮಾಜದ ಅಂಧಾಚರಣೆಗಳನ್ನು ಬದಲಿಸಿ 'ಕಂಡರೆ ಮಾಣಿ..ಉಂಡರೆ ಗೋಣಿ' ಎನ್ನುವ ಪ್ರಗತಿಪರ ನಂಬಿಕೆಗೆ ಬದಲಾಯಿಸುವುದು. ತೆಳುವಾದ ಸಾರು ಓಡಿಹೋಗದಂತೆ ಅನ್ನದ ಕಟ್ಟೆ ಕಟ್ಟುವುದು, ಕೊನೆಯಲ್ಲಿ ಬರುವ ಪಾಯಸಕ್ಕೆ ಹೊಟ್ಟೆಯಲ್ಲಿ ಆದಷ್ಟು ಜಾಗಇರುವಂತೆ ನೋಡಿಕೊಳ್ಳುವುದು ಇತ್ಯಾದಿ ಇತ್ಯಾದಿ.

ಇನ್ನು ಪ್ರವಾಸಕ್ಕೆ ಹೋಗುವ ವಾರಗಳ ಮೊದಲೇ ನಮ್ಮ ಅತಿಮುಖ್ಯವಾದ ತಯಾರಿ ಶುರುವಾಗುತ್ತಿತ್ತು. ಕಚ್ಚಾ ಪಟ್ಟಿಗಳಲ್ಲಿ ( ರಫ್ನೋಟ್ ಬುಕ್) ಉಳಿದ ಖಾಲಿ ಹಾಳೆಗಳನ್ನು ಕತ್ತರಿಸಿ ನೂರಾರು ಚಿಕ್ಕ ಚಿಕ್ಕ ಚೀಟಿಗಳನ್ನಾಗಿ ಮಾಡಿ ಅದರಲ್ಲಿ 'ನಮ್ಮ ಶಾಲೆಯಇಡಗುಂಜಿ ( ಯಾವ ಊರಿಗೆ ಹೋಗುತ್ತೇವೋ ಆ ಹೆಸರು) ಪ್ರವಾಸಕ್ಕೆ ಜಯವಾಗಲಿ' ಎಂದು ಬರೆದು ಅದನ್ನು ಆದಷ್ಟು ಚಿಕ್ಕದಾಗಿಮಡಿಸಿ ಕಟ್ಟುಗಳನ್ನಾಗಿ ಮಾಡಿ ಇಟ್ಟುಕೊಳ್ಳುತ್ತಿದ್ದೆವು. ಯಾರು ಹೆಚ್ಚು ಚೀಟಿಗಳನ್ನು ಬರೆಯುತ್ತಾರೋ ಅವರಿಗೆ ಮುಂದಿನ ಸೀಟುಬಿಟ್ಟು ಕೊಟ್ಟು ಗೌರವಿಸಲಾಗುತ್ತಿತ್ತು.

ಸೀತಾಪಹರಣವಾಗ ದಾರಿಯುದ್ದಕ್ಕೂ ಸೀತೆ ತನ್ನ ಆಭರಣಗಳನ್ನು ಒಂದೊಂದಾಗಿ ಬೀಳಿಸುತ್ತ ತನ್ನ ಗಮ್ಯದ ಕುರುಹುಗಳನ್ನುರಾಮನಿಗೆ

ತಿಳಿಯಪಡಿಸಿದಳಂತೆ. ನಾವೂ ಹಾಗೆಯೇ ನಮ್ಮ ಪ್ರವಾಸಕ್ಕೆ ಜಯವಾಗಲಿ ಎಂದು ನಮ್ಮ ಬಸ್ಸಿನಲ್ಲೇ ಜೋರಾಗಿಕಿರುಚುತ್ತ ಈ ಚೀಟಿಗಳನ್ನು ಕಿಟಕಿಯಿಂದಲೇ ಎಸೆಯುತ್ತಿದ್ದೆವು. ನಮ್ಮ ಬಸ್ಸು ಒಂದು ಸಲವೂ ಅಪಹರಣವಾಗದ್ದರಿಂದ, ಇಡೀಊರಿಗೆಲ್ಲ ನಮ್ಮ ಪ್ರವಾಸದ ಬಗ್ಗೆ ಬಿತ್ತರಿಸುವ ಈ ಮಹಾಕಾರ್ಯದ ಘನ ಉದ್ದೇಶದ ಬಗ್ಗೆ ಈಗಲೂ ನನಗೆ ಯಾವ ಕ್ಲಾರಿಟಿಯೂಇಲ್ಲ. ಆದರೂ ದಾರಿಯ ಅಷ್ಟೂ ಊರುಗಳಲ್ಲಿ ಚೀಟಿ ಹೆಕ್ಕಿ ಓದಿದ ಜನರು ಯಾವ ಶಾಲೆಯ ಮಕ್ಕಳು ಯಾವ ಊರಿಗೆ ಪ್ರವಾಸಕ್ಕೆಹೋಗಿದ್ದರು ಎನ್ನುವ ಬ್ರೇಕಿಂಗ್ ನ್ಯೂಸ್ ಅವರ ಚಾನಲ್ ನಲ್ಲಿಯೇ ಮೊದಲು ಬಿತ್ತರಿಸುತ್ತಿದ್ದರು. ಹ್ಞಾಂ..ಮರೆತಿದ್ದೆ..ನಮ್ಮಲ್ಲೇಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಪ್ರವಾಸ ಮುಗಿಸಿ ಬರುವಾಗ 'ನಮ್ಮ ಪ್ರವಾಸಕ್ಕೆ ಜಯವಾಗಿದೆ' ಎನ್ನುವಚೀಟಿಯನ್ನೂ ಬರೆದು ತಂದು ಕಿಟಕಿಯಲ್ಲಿ ಎಸೆದು ವಿಜಯದ ನಗು ಬೀರುತ್ತಿದ್ದರೆ ಉಳಿದವರದು ಪೆಚ್ಚುಮುಖ..!

ನಮ್ಮ ಇನ್ನೊಂದು ಮುಖ್ಯವಾದ ಸಿದ್ಧತೆಯೆಂದರೆ ದಾರಿಯಲ್ಲಿ ಬೇಕಾಗುವ ತಿಂಡಿ ತೀರ್ಥಗಳದ್ದು. ಪ್ಯಾಕೆಟ್ ತಿಂಡಿಗಳು ಇನ್ನೂ ಅತಿಥಿಪಾತ್ರಗಳನ್ನೇ ಮಾಡುತ್ತಿದ್ದವು. ಬಸ್ಸು ಸ್ಟಾರ್ಟ್ ಆಗುತ್ತಿದ್ದಂತೆ ಅಮ್ಮನನ್ನು ಕಾಡಿ ಬೇಡಿ ಮಾಡಿಸಿಕೊಂಡ ತಿಂಡಿ ತಿನಿಸುಗಳ ಹಂಚಿಕೆಶುರುವಾಗುತ್ತಿತ್ತು. ಅವಲಕ್ಕಿ, ಮುಂಡಕ್ಕಿ, ರವೆಲಾಡು, ವಿಧವಿಧವಾದ ಉಂಡೆಗಳು, ಚಕ್ಕುಲಿಗಳು ಕ್ಯಾಬಿನೆಟ್ ಖಾತೆಯಂತೆನಾಮುಂದು ತಾಮುಂದು ಎಂದು ಬಿಕರಿಯಾಗಿಬಿಡುತ್ತಿದ್ದವು. ನಂತರದ ಸರದಿ ಮುಳ್ಳೆ ಹಣ್ಣು, ಕಾರೆ ಹಣ್ಣು, ಕರಜಲು ಹಣ್ಣುಮುಂತಾದ ಸ್ವತಂತ್ರ ಖಾತೆಗಳು. ಕೊನೆಯಲ್ಲಿ ನಾನು ಉಪ್ಪು ಖಾರ ತರುತ್ತೇನೆ..ನೀನು ನೆಲ್ಲಿಕಾಯಿ, ಹುಣಿಸೆಕಾಯಿ, ಮಾವಿನಕಾಯಿಏನಾದರೂ ತಾ ಎಂಬ ಸಹಾಯಕ ಮಂತ್ರಿಗಳ ಸರದಿ. ಹೆಚ್ಚಿನ ಮಕ್ಕಳು ಎಲ್ಲರಿಗೂ ಹಂಚಿ ತಿಂದರೆ, ಇನ್ನು ಕೆಲವರು ಈಅಪರೂಪದ ತಿಂಡಿಗಳು ತಮಗೇ ಸಿಗಲ್ಲ ಎಂದು ಪ್ರವಾಸದುದ್ದಕ್ಕೂ ತಿನ್ನದೇ ಹಾಗೇ ಮನೆಗೆ ತಂದು ತಿನ್ನುವದೂ ಇತ್ತು! ರಸ್ನಾ ಎನ್ನುವಕಿತ್ತಳೆಗಿಂತ ಕಿತ್ತಳೆಯಾದ ಬಣ್ಣ ಬೆರೆಸಿದ ಪಾನೀಯ ನಮ್ಮ ಬೆವರೇಜಿನ ಲಿಸ್ಟಿನಲ್ಲಿ ಪ್ರಮುಖ ಸ್ಥಾನದಲ್ಲಿತ್ತು. ಬಸ್ಸು ಮುಂದೆಸಾಗುತ್ತಿದ್ದಂತೆ ಇಂಥ ಅಪವಿತ್ರ ಮೈತ್ರಿ ಯಿಂದ ಹೊಟ್ಟೆಯಲ್ಲಿ ಭಿನ್ನಮತದ ಅಪಸ್ವರ!

ಏನಾದರೂ ಕೊಳ್ಳಲು, ಐಸ್ಕ್ಯಾಂಡಿ ಅಥವಾ ಪೆಪ್ಸಿ ಎಂದು ಕರೆಯುತ್ತಿದ್ದ ಪೊಪ್ಸಿಕಲ್ ತಿನ್ನಲು ನಮ್ಮ ಹತ್ತಿರ ಇರುತ್ತಿದ್ದ ಪಾಕೆಟ್ ಮನಿಐದು ಅಥವಾ ಹತ್ತು ರೂಪಾಯಿಗಳು! ಆ ದುಡ್ಡು ಕಳೆಯದಂತೆ ಜೋಪಾನವಾಗಿಡಲು ವಿಧವಿಧದ ಸರ್ಕಸ್ ನಡೆಯುತ್ತಿತ್ತು. ಸೇಫ್ಟಿಪಿನ್ನು ಚುಚ್ಚಿದ ಕಳ್ಳಜೇಬುಗಳು, ಬ್ಯಾಗಿನ ಒಳಗಿನ ಕಾಣದ ಕಿಸೆ..ಇನ್ನೂ ಮುಂದೆ ಹೋಗಿ ನಮ್ಮ ಹಣವನ್ನು ಮಾಸ್ತರಹತ್ತಿರವೋ..ಅಕ್ಕೋರ ಹತ್ತಿರವೋ ಅಡ ಇಡುತ್ತಿದ್ದೆವು..ಬೇಕಾದಾಗ ಕೊಡುವ ಷರತ್ತಿನೊಂದಿಗೆ. ಮಾಸ್ತರರು ಜೋಳಿಗೆ ತುಂಬಮಕ್ಕಳ ನಾಣ್ಯಗಳನ್ನು ತುಂಬಿಕೊಂಡು ಹೋದಕಡೆಯಲ್ಲಲ್ಲ ಟಣಟಣ ಸದ್ದು ಮಾಡುತ್ತ ಪಿಗ್ಮಿ ಕಲೆಕ್ಟರನ ಥರ ಓಡಾಡುತ್ತಿದ್ದರು!

ಇನ್ನು ಹೈಸ್ಕೂಲಿಗೆ ಕಾಲಿಟ್ಟ ಮೇಲೆ ಶೈಕ್ಷಣಿಕ ಪ್ರವಾಸಗಳು ಮೇಕೋವರ್ ಮಾಡಿಸಿಕೊಂಡು ನಮ್ಮ ಜಿಲ್ಲೆಯನ್ನು ದಾಟಿ ವಿಸ್ತರಿಸಿಕೊಂಡವು. ಎರಡು ಮೂರು ದಿನಗಳ ಪ್ರವಾಸಗಳು ಶುರುವಾದವು. ಹಾಗೆಯೇ ನಮ್ಮ ಪ್ರವಾಸಿ ಸ್ಥಳಗಳೂ ಮೂರರಕಾಂಬಿನೇಶನ್ನಿನಲ್ಲಿ ಬದಲಾದವು. ಒಂದನೆಯದು ಬಿಜಾಪುರದ(ವಿಜಯಪುರ)

ಗೋಳಗುಮ್ಮಟ, ಬಾದಾಮಿ ಮತ್ತು ಪಟ್ಟದಕಲ್ಲು..ಇಲ್ಲವಾದರೆ ಮೈಸೂರು, ಶ್ರೀರಂಗ ಪಟ್ಟಣ ಮತ್ತು ರಂಗನತಿಟ್ಟು ಇನ್ನೊಂದು ಬೇಲೂರು, ಹಳೇಬೀಡು ಮತ್ತುಶ್ರವಣಬೆಳಗೊಳ. ಇವುಗಳೆಲ್ಲ ಐದಾರು ನೂರರಿಂದ ಒಂದು ಸಾವಿರ ರೂಪಾಯಿಗಳವರೆಗಿನ ದುಬಾರಿ ಪ್ರವಾಸ. ಕೇವಲದುಡ್ಡಿದ್ದವರು ಮಾತ್ರ ಹೋಗುತ್ತಿದ್ದರು. ಒಂದೇ ಮನೆಯಲ್ಲಿ ಎರಡು ಮೂರು ಮಕ್ಕಳಿದ್ದರಂತೂ ವರ್ಷಕ್ಕೊಂದೇ ಮಗು ಪ್ರವಾಸದಫಲಾನುಭವಿ.

ಮೂರು ದಿವಸಗಳ ಪ್ರವಾಸಕ್ಕೆ ಬೇಕಾಗುವ ಮೂರು ಜೊತೆ ಬಟ್ಟೆಗಳು, ಅದನ್ನು ತುಂಬಲು ಬೇಕಾಗುವ ಬ್ಯಾಗು ಮತ್ತು ಕೈ ಖರ್ಚಿಗೆಬೇಕಾಗುವ ಹಣದ ಹೊಂದಿಸುವ ಕೆಲಸಕ್ಕೆ ವಾರಗಳೇ ಬೇಕಾಗಿತ್ತು. ಬಜೆಟ್ ಮಂಡಣೆಯಾಗಿ, ಎಷ್ಟೋ ಸುತ್ತುಗಳ ಚರ್ಚೆ, ವಾಗ್ಯುದ್ಧ, ಧರಣಿ, ನಿರಶನ, ಭಾವೋದ್ರಿಕ್ತ ಕಲಾಪಗಳು ನಡೆದು, ಕೊನೆಗೊಮ್ಮೆ ಅಷ್ಟೋ ಇಷ್ಟು ಹಣ ಬಿಡುಗಡೆಯಾಗುತ್ತಿತ್ತು. ಚಳಿಯೆಂದರೆಏನಂದು ಗೊತ್ತೇ ಇರದ ಕರಾವಳಿಯ ನಮಗೆ ಅದರ ಪರಿಚಯ ಮಾಡಿಸಿದ್ದೇ ಈ ಪ್ರವಾಸಗಳು. ಒಬ್ಬಬ್ಬಿರು ವರ್ಷಗಳಿಂದ ಟ್ರಂಕಿನಲ್ಲಿಜೋಪಾನವಾಗಿಟ್ಟ ನುಸಿಗುಳಿಗೆಯ ವಾಸನೆ ಹೊಡೆಯುವ ಸ್ವೆಟರೋ ಶಾಲೋ ಧರಿಸಿ ಪ್ರವಾಸದುದ್ದಕ್ಕೂ ಮಿಂಚುತ್ತಿದ್ದರು.

ಹೈಸ್ಕೂಲಿನಲ್ಲೂ ಶಿಕ್ಷಕರ ಆರ್ಥಿಕ ನಿರ್ವಹಣೆ ಯಾವ ಬಹುರಾಷ್ಟ್ರೀಯ ಕಂಪನಿಗಿಂತ ಕಡಿಮೆಯೇನಿರಲಿಲ್ಲ. ಪ್ರವಾಸದ ಒಟ್ಟೊಮೂರು ರಾತ್ರಿಗಳಲ್ಲಿ ಎರಡು ರಾತ್ರಿಗಳು ಬಸ್ಸಿನಲ್ಲಿಯೇ ಕಳೆಯುವಂತೆ ನೋಡಿಕೊಂಡು, ಮಧ್ಯದ ಒಂದು ರಾತ್ರಿಗಾಗಿ ಒಂದೊಎರಡೊ ಹಾಲ್ ಗಳನ್ನು ಬುಕ್ ಮಾಡಿ ನಮ್ಮನ್ನೆಲ್ಲ ಗಂಡುಮಕ್ಕಳು ಒಂದು ಕಡೆ ಮತ್ತು ಹೆಣ್ಣುಕ್ಕಳು ಇನ್ನೊಂದು ಕಡೆ ಸಾಲಾಗಿಮಲಗುವ ವ್ಯವಸ್ಥೆ ಮಾಡುತ್ತಿದ್ದರು. ಆ ಊರಿನಲ್ಲಿರುವ ಹಳೆಯ ವಿದ್ಯಾರ್ಥಿಯೋ, ಪರಿಚಿತರೋ ಇದ್ದರೆ ಅವರನ್ನು ಅವಶ್ಯವಾಗಿಭೆಟ್ಟಿಯಾಗಿ ಒಂದು ಊಟದ್ದೊ, ತಿಂಡಿಯದೋ ಖರ್ಚು ಕೂಡ ಉಳಿಸುತ್ತಿದ್ದರು. ಅಲ್ಲಿ ಪರಸ್ಪರ ಪ್ರೀತ್ಯಾದರಗಳೂ ಹಾಗೆಯೇಇರುತ್ತಿತ್ತು ಅನ್ನಿ.

ಈ ಪ್ರವಾಸಗಳು ದೊಡ್ಡದಾದ ಮತ್ತು ಅಪರಿಚಿತ ನಗರಗಳಲ್ಲಿ ನಡೆಯುತ್ತಿದ್ದುದರಿಂದ ಹೆಜ್ಜೆ ಹೆಜ್ಜೆಗೂ ವಿಶ್ವಾಸಮತ ಯಾಚಿಸುವಂತೆಮಕ್ಕಳ ತಲೆ ಎಣಿಕೆ ನಡೆಯುತ್ತಲೇ ಇರುತ್ತಿತ್ತು. ಅದರ ಮಧ್ಯದಲ್ಲೇ ತಲೆ ತಪ್ಪಿಸಿಕೊಂಡು ರಿಸಾರ್ಟಿಗೆ ಓಡುವ ಶಾಸಕರಂತೆ ಕೆಲವುಮಕ್ಕಳು ನಾಪತ್ತೆಯಾಗುತ್ತಿದ್ದರು. ಹೆಣ್ಣುಮಕ್ಕಳು ಗುಟ್ಟಾಗಿ ಹೋಗಿ ಸರ, ಬಳೆ, ಟಿಕ್ಲಿ ಮುಂತಾದ ಶಾಪಿಂಗು ಮಾಡಿದ್ದು, ಗಂಡುಮಕ್ಕಳು ತಿಂಡಿ ತಿನಿಸು ಕೊಂಡಿದ್ದು ಮುಂತಾದ ಹಗರಣಗಳು ಮತ್ತು ವಿವಾದಗಳು ಭುಗಿಲೇಳುತ್ತಿದ್ದವು. ಕೈಯಲ್ಲಿ ಹಣ ಇರದ, ಈ ಥರದ ಚಟುವಟಿಕೆಗಳನ್ನು ಮಾಡಲಾಗದ ಕೆಲವು ಅದ್ಭುತ ಪ್ರತಿಭೆಯ ವರದಿಗಾರರು ಈ ಪ್ರಕರಣಗಳನ್ನು ಅತಿರಂಜಕವಾಗಿವರದಿ ಮಾಡಿ ದಿನದ ಕೊನೆಯಲ್ಲಿ ಪಿಟಿ ಸರ್ ಎನ್ನುವ ಲೋಕಾಯುಕ್ತಕ್ಕೆ ಆರೋಪಿಗಳನ್ನು ಒಪ್ಪಿಸಿ ಶಕ್ತ್ಯಾನುಸಾರ ಒದೆಯೋ, ಪೆಟ್ಟೋ ಇಲ್ಲವೇ ಕಪಾಳಮೋಕ್ಷವೋ ಕೊಡಿಸಿದ್ದೂ ಇದೆ. ಪ್ರವಾಸದ ಖುಷಿಯಲ್ಲಿ ಮುಳುಗಿರುತ್ತಿದ್ದ ನಮಗೆ ಅದೆಲ್ಲ ಒಂದು ಲೆಕ್ಕವೇಅಲ್ಲ. ಮರುಕ್ಷಣದಲ್ಲೇ ನಾವುಗಳು ಬ್ರೂಕ್ ಬಾಂಡ್ ಚಹಾದಷ್ಟೇ ತಾಜಾ.

ಹಾಗೆ ನೋಡಿದರೆ ನಮ್ಮ ಪೀಳಿಗೆಯವರು ಶಾಲೆಯಲ್ಲಿ ಕಲಿತದ್ದಕ್ಕಿಂತ ಈ

ಪ್ರವಾಸಗಳಿಂದ ಕಲಿತ ಜೀವನದ ಪಾಠಗಳೇ ಅಧಿಕ. ಈಗಿನಶಾಲೆಗಳಲ್ಲಿ, ತರಗತಿಗಳಲ್ಲಿ ಕಲಿಸಲು ಹರಸಾಹಸ ಮಾಡುವ ಬಹುಮುಖ್ಯ ಮೌಲ್ಯಗಳಾದ ಪರಸ್ಪರ ಹೊಂದಾಣಿಕೆ, ನಮ್ಮ ನಮ್ಮಕಂಫರ್ಟ ಝೋನ್ ಗಳನ್ನು ಬಿಟ್ಟು ಇರುವುದು, ಭಿನ್ನ ಭಾಷೆ, ಪರಿಸರ, ಸಂಸ್ಕೃತಿಗಳ ಅರಿವು ಮುಂತಾದ ನಾಳಿನ ಬದುಕಿಗೆಬೇಕಾಗುವ ವಿಷಯಗಳು ನಮ್ಮ ಪಯಣ ಮುಗಿಯುವಷ್ಟರಲ್ಲಿ ನಮಗರಿವಿಲ್ಲದಂತೆ ಮನದಟ್ಟಾಗಿಬಿಡುತ್ತಿತ್ತು.

ಬಾಲ್ಯದಲ್ಲಿ ನಾವು ಶಾಲಾ ಪ್ರವಾಸಗಳಿಗಿಂತ ಹೆಚ್ಚಾಗಿ ಹೋಗಿದ್ದು ನೆಂಟರ ಮನೆಗೆ ಮತ್ತು  ಅಜ್ಜನಮನೆಯೆಂಬ ತಾಯಿಯತವರುಮನೆಗೆ. ಪ್ರತಿ ಬೇಸಿಗೆ ರಜೆಯಲ್ಲೂ ಕಡ್ಡಾಯವಾಗಿ ಹೋಗುತ್ತಿದ್ದ ಈ ಪ್ರವಾಸವೇ ನಮಗೆಲ್ಲರಿಗೂ ಅತಿಪ್ರಿಯವಾಗಿತ್ತು. ಕೂಡುಕುಟುಂಬಗಳೇ ಅಧಿಕವಾಗಿದ್ದ ಆ ಕಾಲದಲ್ಲಿ ಅಜ್ಜ, ಅಜ್ಜಿ, ಮಾವಂದಿರು, ಅತ್ತೆಯಂದಿರು, ಚಿಕ್ಕಮ್ಮಂದಿರು ಮತ್ತು ಅವರಮಕ್ಕಳಿಂದ ತುಂಬಿರುತ್ತಿದ್ದ ಅಜ್ಜನಮನೆಯಲ್ಲಿ ನಾವು ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳಂತೆ ವಿಹರಿಸುತ್ತಿದ್ದೆವು. ನಮ್ಮಅಜ್ಜನಮನೆಯ ಸಾಹಸಗಾಥೆಗಳು ಯಾವ ಹ್ಯಾರಿ ಪಾಟರ್ ಕಥೆಗಳಿಗಿಂತ ಕಮ್ಮಿಯೇನಿಲ್ಲ.

ಅದನ್ನೆಲ್ಲ ಈಗ ಹೊರಳಿ ನೆನೆದಾಗ, ಈಗಿನ ಮಕ್ಕಳು ಪ್ರವಾಸವಿರಲಿ, ಸ್ವಚ್ಛಂದವಾಗಿ ಶಾಲೆಗೆ ಹೋಗುವ , ಸಹಪಾಠಿಗಳ ಜೊತೆಮುಕ್ತವಾಗಿ ಬೆರೆಯುವ ಅವಕಾಶದಿಂದಲೂ ವಂಚಿತರಾಗಿರುವುದು ಬೇಸರ ತರಿಸುತ್ತದೆ. ಯುಗಯುಗಾದಿ ಬಂದು ಹೋಗಿ, ಕಾಲಬದಲಾಗಿ, ಈಗ ನಾವು ಎಷ್ಟೇ ಐಷಾರಾಮಿ ಪ್ರವಾಸ ಮಾಡಿದರೂ ಆ ದಿನಗಳ ಮುಗ್ಧ ಸಂತಸ ಮತ್ತು ಶುದ್ಧ ಸಂಭ್ರಮ ಮರಳಿಬರಲಾರದು.

■

---




**ನಿನ್ನ ಆಶೆಗೆ ಸ್ವಲ್ಪ ಸ್ಪೀಡ್ ಬ್ರೇಕ್ ಹಾಕೇ....**
**ನಿನ್ನ ಕನಸು ನನಸಾಗೋದು ಕಾಣ್ತಾ ಇಲ್ಲ,**
**ನಮಗೂ ಸ್ಪೀಡ್ ಬ್ರೇಕ್ ಹಾಕಿದಾರೆ...**

# ಅಭಿಮನ್ಯು

**I ಕೆ.ಎಸ್.ಸೋಮೇಶ್ವರ**

ಮೊನ್ನೆ ನಮ್ಮ ಮೈಸೂರು ದಸರ ದಲ್ಲಿ ಅಲ್ಲಿನ ರಾಜಕಾರಿಣಿಗಳು ಏನೂ ಗಲಾಟೆ ಮಾಡ್ಲಿಲ್ಲವಂತೆ. ಆದರೆ, ಅದೇಕೋ, ಈ ಅಭಿಮನ್ಯು ಎಂಬ ಗಜರಾಜ ಮಾತ್ರ ಒಂದಿಷ್ಟು ತಕರಾರು ಮಾಡಿದನಂತೆ. ಅದೇಕೆ ಎಂದು ಸ್ವಲ್ಪ ತಿಳಿಯೋಣ ಬನ್ನಿ.

ಮಹಾಭಾರತದ ಅಭಿಮನ್ಯು ಅ 'ಮಹಾ........ಭಾರತ್' ಓದಿದವರಿಗೆ, ಅಲ್ಲ ನೋಡಿ, ಕೇಳಿ ಆನಂದಿಸಿದವರಿಗೆ ಗೊತ್ತಿರತ್ತೆ. ಇದೇನು ಮಹಾಭಾರತಕ್ಕೆ ಇಷ್ಟೊಂದು ರಾಗವೇ? ಹೌದು, ಈಗ ಹಂಗೇ ಹೇಳಬೇಕು. ಏಕೆಂದರೆ, ನಮ್ಮಲ್ಲಿ ಅನೇಕ ಸಣ್ಣ ಸಣ್ಣ ದೂರದರ್ಶನ ಕೇಂದ್ರಗಳು ಡೋರ್ ಷಟ್' ಮಾಡಿಕೊಂಡಿವೆಯಂತೆ. ಏನಿದ್ದರೂ 'ಅಲ್ಲಿಂದ ಬಂದವರು' ಮಾತ್ರ.

ಈಗ ಆಭಿಮನ್ಯುವಿನ ಕಥೆ. ಪಾಪ ಅವನೊಬ್ಬ ಅಮಾಯಕ ಬಾಲಕ. ಇನ್ನೂ ಮೈನರ್ ಆಗಿದ್ದನೇನೋ. ಆಗ, ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಏನೂ ಕಾನೂನು ಇರಲಿಲ್ಲ. ಇವನನ್ನು ಫೀಲ್ಡಿ ಗೆ ಇಳಿಸಿ ಹಿರಿಯರು ಎಲೆಯಡಿಕೆ ಜಗಿಯುತ್ತಿದ್ದರೇನೋ. ಆ ಕೌರವರೋ, ಈ ಪುಟ್ಟ ಮಗುವನ್ನು ಚಕ್ರವ್ಯೂಹ ದಲ್ಲಿ ಬಂಧಿಸಿ ಅವನ್ನು ಹಿಂಡಿ ಹಿಪ್ಪೆ ಮಾಡಿ ಬಿಟ್ಟರು. ಇವನೋ 'ಅವಸರವೇ ಅಪಘಾತಕ್ಕೆ ಕಾರಣ' ಎಂಬ ಸ್ಲೋಗನ್ ಕೇಳಿರಲಿಲ್ಲ. ತಾಯ ಗರ್ಭದಲ್ಲೇ ಅವನಿಗೆ ಚಕ್ರವ್ಯೂಹದ ಒಳಗೆ ಹೇಗೆ ಹೋಗುವುದು ಎಂಬುದು ಆ ಕಿಟ್ಟಪ್ಪನ ಬಾಯಿಂದ ಇವನ ಕಿವಿಗೆ ಸೇರಿ ಇವ ಹೂಂ ಗುಟ್ಟುತ್ತಿದ್ದ. ಆಮೇಲಾದರೂ ಯಾರಾದರೂ ಅವನಿಗೆ ಅಲ್ಲಿಂದ ಹೇಗೆ ಹೊರ ಬರಬೇಕೆನ್ನುವ ಸ್ಟೋರಿ ಹೇಳ ಬೇಕಲ್ಲವೇ!

ಅದೆಲ್ಲ ದ್ವಾಪರ ಯುಗದ ಹಳೇ ಕಥೆ. ಈಗ ಕಲಿಯುಗ ಏನು ಬೇಕಾದರೂ ಆಗತ್ತೆ ಅಂತಾರೆ ದೊಡ್ಡವರು!. ನೋಡಿ ನಮ್ಮಲ್ಲಿ ಆನೆ, ಹುಲಿ, ಸಿಂಹ ಇವುಗಳನ್ನೆಲ್ಲ ಹದ ಮಾಡಿ ಅಂದರೆ ಪಳಗಿಸಿ ಅವುಗಳನ್ನು ಸರ್ಕಸ್‌ನಲ್ಲಿ ಕುಣಿಸುತ್ತಿದ್ದರು. ಇವುಗಳಿಗೆ ಸಿನಿಮಾಗಳಲ್ಲೂ ನಟನಾ ಸಾಮರ್ಥ್ಯ ಪ್ರದರ್ಶನದ ಅವಕಾಶ. ಸರ್ಕಸ್‌ನಲ್ಲಿ 'ಹಿಸ್ ಮಾಸ್ಟ್ರಸ್ ವಾಯ್ಸ್' ಎಂಬಂತೆ ಅವನ ದನಿಯನ್ನು ತಿಳಿದುಕೊಂಡು ಇವುಗಳು ನಮ್ಮನ್ನು ರಂಜಿಸುತ್ತಿದ್ದವು. ಇನ್ನು ಚಲನ ಚಿತ್ರಗಳಲ್ಲಿ 'ಚಲ್ ಚಲ್ ಚಲ್ ಮೇರೆ ಹಾಥಿ, ಮೇರೆ ಸಾಥಿ' ಎಂದು ನಾಯಕ, ನಾಯಕಿಯೊಂದಿಗೆ ಗಜಾರೋಹಣ ಮಾಡಿದ್ದು ಏನೂ ಕಡಿಮೆಯಲ್ಲ. ಅದೇನೋ ನೋಡಿ ಅವೆಲ್ಲ ಈಗ ಬಂದ್. ಅವುಗಳ ಚಾತುರ್ಯ ಪ್ರದರ್ಶನಕ್ಕೆ ಅವಕಾಶವೇ ಇಲ್ಲ. ಬರಿಯ 'ಝೂ ಮೇಟ್' ಗಳು ಮಾತ್ರ. ಅಲ್ಲಿ ನೋಡಿ ಯಾವುದೇ ಪ್ರಾಣಿಯಾದರೂ ಚಟುವಟಿಕೆ ಉಹುಂ ಶುದ್ಧ ಶೂನ್ಯ . ಈಗಿನ ಅವುಗಳ ಸಂತತಿಯವು ಹಳ ಹಳಿಸುತ್ತಿವೆಯಂತೆ ನಾವು ಎಂಥಾ ಕಾಲದಲ್ಲಿ ಜನುಮ ಕೊಟ್ಟೆವೋ ಅಂತ. ಈಗೆಲ್ಲ ವನರಾಜನೂ ಸೇರಿದಂತೆ ಎಲ್ಲ (ಅ)ಮಾನುಷರೂ ಕಾರ್ಟೂನ್ ಪೀಸ್‌ಗಳಾಗಿ ಬಿಟ್ಟಿದ್ದಾರೆ. ಅದು ಬಿಡಿ ನಮ್ಮ ಪಂಚತಂತ್ರದ ಕಥೆಗಳಿಂದ ಈ ಕಾಲದ ವಾಲ್ಟ್ ಡಿಸ್ನೆ ಅವರ ಸಿನೆಮಾಗಳೂ ಸೇರಿದಂತೆ ಬಣ್ಣ ಬಣ್ಣದ ಚಿತ್ರಗಳಂತಾಗಿವೆ.

ಗಜ ಪಡೆಗಳಿಗೆ ಅಲ್ಪ ಸ್ವಲ್ಪ ಮರ್ಯಾದೆ ಇದೆ ಎನಿಸುತ್ತದೆ. ಏಕೆಂದರೆ ಅನೇಕಾನೇಕ ಕದನ ಕುತೂಹಲದಲ್ಲಿ ಇವುಗಳ ದೊಡ್ಡ ಪಡೆಯೇ ಇರುತ್ತಿತ್ತು ಅಂತ ಚಿತ್ರಗಳಲ್ಲಿ ಢಾಳಾಗಿ ತೋರಿಸ್ತಾರೆ.. ಅದಲ್ಲದೇ, ನಮ್ಮ ದೊಡ್ಡ ದೊಡ್ಡ ದೇವ ಮಂದಿರಗಳಲ್ಲಿ ದೇವಾನು

ದೇವತೆಗಳಿಗೆ ಮೆರವಣಿಗೆ ಮಾಡಿಸ ಬೇಕಲ್ಲವೇ !. ಅಲ್ಲದೇ, ಪ್ರತಿ ವರುಷ ನಮ್ ದಸರ ಹಬ್ಬಕ್ಕೆ ಅವುಗಳಿಗೆ ಭೂರಿ ಭೋಜನ. ಏಕೆಂದು ಗೊತ್ತಲ್ಲವೇ ? ಅದು ಸರಿ ಇವುಗಳನ್ನು ಕರೆ ತರುವುದು ಅಷ್ಟು ಸುಲಭವೇ. ಅದಕ್ಕಾಗಿ ಅವುಗಳನ್ನು ನಿಯಮಿತವಾಗಿ 'ಖೆಡ್ಡಾ' ದಲ್ಲಿ ಬೀಳಿಸಿ ಏಳಿಸಿ ಬೆನ್ನು ತಟ್ಟಿ ಮರುಳು ಮಾಡುತ್ತಿದ್ದರು.

'ಮೈಸೂರು ದಸರ ಎಷ್ಟೊಂದು ಸುಂದರ' ಸರಿಯೇ. ಆಗೆಲ್ಲ ದಸರೆಯಲ್ಲಿ ರಾಜ ಮಹಾರಾಜರುಗಳನ್ನ ತನ್ನ ಹೆಗಲ ಮೇಲೆ ಹೊತ್ತು. ಈ ಗಜೇಶ್ವರರು ಜಂಬೂ ಸವಾರಿ ಮಾಡಿತ್ತಿದ್ದರು. ಕಲಿಗಾಲ ನೋಡಿ ಹೇಗಿದೆ. ಕಾಲಾಂತರದಲ್ಲಿ ಆ ರಾಜ ಮಹಾರಾಜರುಗಳ ಕಿರೀಟ ತ್ಯಾಗ ಆದ ಮೇಲೆ ಇವುಗಳಿಗೆ ಮೋಕ್ಷ ಇಲ್ಲ. ಬದಲಿಗೆ ತಾಯಿ ಚಾಮುಂಡೇಶ್ವರಿಯನ್ನೇ ಹೊತ್ತೊಯ್ಯುತ್ತ ತನ್ನ ಗಜ ಗಾಂಭಿರ್ಯವನ್ನು ಉಳಿಸಿಕೊಂಡಿದ್ದಾನೆ.

ಇವುಗಳಿಗೆ ದಸರೆಗೆ ಕರೆ ತರುವಾಗ ಅಬ್ಬಾ ಏನು ರಾಜ ಮರ್ಯಾ ದೆ ಅಂತೀರ ನೋಡಲು ಎರಡು ಕಣ್ಣು ಸಾಲದು. ಇದೊಂತರ ಗಿಲೀಟು ಮಾಡಿ ಕೆಲಸ ಮಾಡಿಸಿ ಕೊಂಡಂತೆ. ಇವುಗಳೂ ಪಾಪ ನಮ್ಮಗಳ ಹುನ್ನಾರಕ್ಕೆ ಎರಡು ಮಾತಿಲ್ಲದೇ ಸೊಂಡಿಲೆತ್ತಿ ಒಪ್ಪಿಗೆ ಸೂಚಿಸುತ್ತವೆ. ಕೆಲಸ ಮುಗಿದ ಮೇಲೆ ಇವುಗಳಿಗೆ ಸಿಕ್ಕಿದ ಲಾರಿ ಅಡ್ಡ ಹಾಕಿ ಅವುಗಳನ್ನು ಎತ್ತಾಕೊಂಡು ಹೋಗಿ ಬಿಡ್ತಾರೆ.

ಇಷ್ಟೆಲ್ಲ ಇವುಗಳ ಗುಣ ಗಾನ ಇರುವಾಗ ಇವುಗಳಲ್ಲಿ ಒಬ್ಬ (ಮದ!) ಕರಿ ಈ ಬಾರಿ ಬೀಳ್ಕೊಡುಗೆ ಸಮಾರಂಭದಲ್ಲಿ ಹಠ ಮಾರಿ ಯಾದ ನಂತೆ. ಅದೇಕೋ ಅವನನ್ನೇ ವಿಚಾರಿಸಬೇಕು. ಈ ಬಾರಿ ಮೈಸೂರಲ್ಲಿ ಅನೇಕ ರಾಜಕೀಯ ಪಟಾಕಿಗಳು ಸಿಡಿಯುತ್ತವೆ ಎಂಬ ಅಡ್ಡ ಮಾತಿತ್ತು. ಇದಕ್ಕೂ ಕಾರಣವಿದೆ. ಕೆಲ ತಿಂಗಳುಗಳ ಹಿಂದೆ ಮೈಸೂರೆಂದರೆ ವಾಕ್ಪಟುಗಳ ವಾಕ್ ಕದನ ಬಹು ಜೋರಾಗಿತ್ತು.

ನಮ್ಮ 'ಅಭಿನವ ಅಭಿಮನ್ಯು' ಎಲ್ಲರಿಗೂ ಸೊಂಡಿಲೆತ್ತಿ ಟಾಟಾ ಮಾಡಿ ಹೊರಡುವ ಸಮಯದಲ್ಲಿ ಲಾರಿ ಏರದೆ ಸತ್ಯಾಗ್ರಹ ಮಾಡಲು ಶುರು ಮಾಡಿದನಂತೆ. ಏನೆಲ್ಲ ಪ್ರಯತ್ನದಿಂದ ಅವನ್ನು ದಬ್ಬಿದರೂ ಉಹೂಂ ಅವನು ಇಟ್ಟ ಹೆಜ್ಜೆಯನ್ನು ಮುಂದಿಡಲಿಲ್ಲವಂತೆ. ' ಏನಾದರೂ ಆಗಲಿ ನಾನು ನನ್ನ ಫೋರ್ ಲೆಗ್ ಗಳ ಮೇಲೆ ಸ್ವತಂತ್ರ ಅನ್ನುವಂತಿತ್ತು ಅವನ ನಡವಳಿಕೆ. ಇದಕ್ಕೆ ಗುಟ್ಟಾಗಿ ಕಾರಣ ಕಂಡು ಹಿಡಿದು ಜನಜನಿತ ಮಾಡುವುದರಲ್ಲಿ ಫೇಮಸ್ ಆದ ಒಂದು ಟಿವಿ ವಾಹಿನಿಯ ಪ್ರಕಾರ ಅವನ ಹಠಕ್ಕೆ ಕಾರಣ ಹೀಗಂತೆ. , ಅಂದರೆ ದ್ವಾಪರ ಯುಗದಲ್ಲಿ ನಮ್ಮ ವಂಶಜರ ಹೆಸರು ಬಳಸಿಕೊಂಡು ದೊಡ್ಡ ಶಂಖವಾದ್ಯದೊಂದಿಗೆ 'ಅಶ್ವತ್ಥಾಮೋ ಹತಃ ಕುಂಜರಃ ' ಅಂತ ಆ ನನ್ನ ಹೆಸರಿನ ಚಿರಂಜೀವಿಯನ್ನು ನಿರ್ಜೀವಿಯಾದಂತೆ ಮಾಡಿ ಅವರಪ್ಪ ದ್ರೋಣಪ್ಪನಿಗೆ ಶಸ್ತ್ರ ತ್ಯಾಗ ಮಾಡಿಸಿದ ಕಥೆ ಅವನ ವಂಶಜರಿಂದ ಜನರೇಷನ್ ಟು ಜನರೇಷನ್ ಹರಡಿ ಇವನ ಮೊರದಗಲ ಕಿವಿಯಲ್ಲಿ ಈಗಲೂ ಆ ಶಂಖವಾದ್ಯವೇ ರಿಂಗಣಿಸುತ್ತದಂತೆ. ನೀವುಗಳು ಬರಿಯ ಮಾನವರು ಆ ಲಾರಿಯಷ್ಟೇ ದೊಡ್ಡ ಐಶಾರಾಮಿ, ಹವಾನಿಯಂತ್ರಿತ ವಾಹನಗಳಲ್ಲಿ ನಮ್ಮೂರಿನ ಕೊಳಚೆ ನೀರಿನಂತೆ ಯಥೇಚ್ಛವಾಗಿ ಎಣ್ಣೆ ಸುರಿದು ರಾಜಾ ರೋಷವಾಗಿ ಓಡಾಡುವಾಗ ಈ ನನ್ನ ದೊಡ್ಡ ದೇಹ ಮತ್ತು ಗಜ ಗಾಂಭೀರ್ಯಕ್ಕೆ ಬೆಲೆ ಕೊಟ್ಟು ಅಂತಹುದೇ ಏರ್ ಕಂಡೀಷನ್ ವಾಹನಗಳಲ್ಲಿ ಕಳಿಸಿಕೊಟ್ಟಿದ್ದರೆ ನಿಮ್ಮ ಪೆಟ್ರೋಲ್ / ಡೀಸೆಲ್ ಏನು ಕಳಕೊತಿದ್ದಿರಿ ಅಂತ ಅವನ ಅಂಬೋಣ. ■

# "ಕರಾಮತಿ"

**। ಅರವಿಂದ.ಜಿ.ಜೋಷಿ.**

"ಶಾಂತಿ ನಿವಾಸ"ಎನ್ನುವ ತನ್ನ ಮನೆಯಲ್ಲಿ ಅವನಿಗಾಗಿಯೇ ಮೀಸಲಿಟ್ಟ ಪುಟ್ಟ ಕೋಣೆಯ ಒಂದು ಬದಿ ಹಾಕಿದ್ದ ಸಿಂಗಲ್ ಮಂಚದ ಮೇಲೆ ಗಡದ್ದಾಗಿ ಉಂಡು,ಡೊಳ್ಳು ಹೊಟ್ಟೆ ಬಿಟ್ಟು ಅಂಗಾತ ಮಲಗಿದ್ದ ಶೀನ, ಗೋಡೆ ಸೀಳಿ ಹೋಗುವ ರೀತಿ"ಘೊರ್..ಘೊರ್..."ಎಂದು ಹೊರಡಿಸುತ್ತಿದ್ದ ಗೊರಕೆ ಶಬ್ದ, ಆತನ ತಲೆಯ ಮೇಲಿದ್ದ ಓಬೀರಾಯನ ಕಾಲದ ದೊಡ್ಡ ರೆಕ್ಕೆಯ ಫ್ಯಾನ್"ಅಯ್ಯೋ.. ಇನ್ನು ನನ್ನಿಂದ ಸುತ್ತೊಕಾಗಲ್ಲ.." ಎನ್ನುವ ರೀತಿ "ಕಟರ್....ಕಟರ್.."ಎಂದು ಬಡಿದುಕೊಳ್ಳುವ ಘನ ಘೋರ ಶಬ್ದಕ್ಕೆ ಪೈಪೋಟಿ ನೀಡುವಂತಿತ್ತು.

ಇನ್ನು ಈ ಮಹಾ ಪುರುಷನ ಅರ್ಧಾಂಗಿ ಪಮ್ಮಿ ತನ್ನ ಅಡುಗೆ ಮನೆ ಸಾಮ್ರಾಜ್ಯ ದಲ್ಲಿ ತನಗಿಷ್ಟವಾದ ಚಿತ್ರಗೀತೆಗಳನ್ನು ಮೊಬೈಲ್ ನಲ್ಲಿ ಹಾಕಿ, ಅದಕ್ಕೆ ಗರಿಷ್ಠ ಮಟ್ಟದ ಸೌಂಡ್ ಕೊಡುವುದರ ಜೊತೆಗೆ ತಾನೂ ಅದರೊಂದಿಗೆ ಗುನಗುನಿಸುತ್ತಿದ್ದಳು. ಮಧ್ಯ-ಮಧ್ಯೆ ಸ್ಟವ್ ಮೇಲಿಟ್ಟ ಪಾತ್ರೆಯೊಳಗೆ ಸೌಟು ಆಡಿಸುತ್ತ "ಕಟ್..ಕಟ್.." ಎನ್ನುವ ಶಬ್ದ ಹೊರಡಿಸಿ ತನ್ನದೇ ಲೋಕದಲ್ಲಿ ತೇಲಾಡುತ್ತಿದ್ದಳು. ಇವರಿಬ್ಬರ ಸುಪುತ್ರ ಹನ್ನೆರಡರ ಗೋಪಿ, ಹಜಾರದಲ್ಲಿನ ಟಿವಿ ಎದುರಿದ್ದ ಆರಾಮ ಸೋಫಾದ ಮೇಲೆ ಕುಳಿತು ಲ್ಯಾಪ್ ಟಾಪ್ ನಲ್ಲಿ ಮೂಡಿಬರುತ್ತಿದ್ದ ವಿಡಿಯೋ ಗೇಮ್ ನೋಡಿ ಖುಷಿ ಪಡುತ್ತಿದ್ದ.ಅದರೊಂದಿಗೆ ಟಿವಿ ಯಲ್ಲಿ ಕ್ರಿಕೆಟ್ ಮ್ಯಾಚ್ ಹಾಕಿ, ಅದಕ್ಕೆ ಗರಿಷ್ಠ ಪ್ರಮಾಣದ ಸೌಂಡ್ ಕೊಟ್ಟಿದ್ದ.

ಅದು ಬರೀ ನಾಮಕಾ ವಾಸ್ತೆ ಆದಂತೆ ಆಗಿತ್ತು. ಏಕೆಂದರೆ ವಿಡಿಯೋ ಗೇಮ್ ಎಂದ್ರೆ ಆತನಿಗೆ ಪಂಚ ಪ್ರಾಣ.ಹೀಗಾಗಿ ತುಂಬಾ ಅಪರೂಪಕ್ಕೆ ಟಿವಿ ಯತ್ತ ಕಣ್ಣು ಹಾಯಿಸುತ್ತಿದ್ದ.ಇನ್ನು ಇವರ ಮನೆಯಲ್ಲಿದ್ದ ಪಮೋರಿಯನ್ ನಾಯಿ ಟೆರೇಸ್ ಮೇಲೆ ಸರಪಳಿಯಿಂದ ಕಟ್ಟಿಸಿಕೊಂಡು ಬಿಡುವಿಲ್ಲದೇ ಬೊಗುಳುತ್ತಲೇ ಇತ್ತು.

ಮನೆಯಲ್ಲಿ ಒಂದು ಕಡೆ ಶೀನಿಯ ಗೊರಕೆ ಶಬ್ದ, ಫ್ಯಾನಿನ ಕರ್-ಕರ್ ಶಬ್ದ, ಅಡುಗೆ ಮನೆಯಿಂದ ಮೊಬೈಲ್ ನಲ್ಲಿ ತೂರಿಬರುವ ಹಾಡಿನ ಶಬ್ದ,ಹಜಾದಲ್ಲಿನ ಟಿವಿ ಶಬ್ದ, ಗೋಪಿ ಕೈಯಲ್ಲಿನ ಲ್ಯಾಪ್ ಟಾಪ್ ನಲ್ಲಿ ಯ ವಿಡಿಯೋ ಗೇಮ್ ಶಬ್ದ ಇದಕ್ಕೆ ಮುಕುಟ ವಿದ್ದಂತೆ ಟೆರೇಸ್ ಮೇಲೆ ನಾಯಿಯ ಬೊಗಳುವಿಕೆ ಶಬ್ದದಿಂದಾಗಿ ಯಾರು ಏನೇ ಮಾತನಾಡಿದರೂ ಯಾರಿಗೂ ಕೇಳದ ವಾತಾವರಣ ಸೃಷ್ಟಿ ಆಗಿತ್ತು.

ಇದೇ ಸಂದರ್ಭದಲ್ಲಿ,ಠಾಕು ಠೀಕಾಗಿ ಡ್ರೆಸ್ ಮಾಡಿಕೊಂಡು, ಬೆನ್ನಿಗೊಂದು ಕಪ್ಪು ಬ್ಯಾಗ್ ಇಳಿಬಿಟ್ಟ ಇಪ್ಪತ್ತರ ಯುವಕನೋರ್ವ ಅರೆಬರೆ ತೆರೆದ ಗೇಟಿನಿಂದ ಬಂದು ಮೆಟ್ಟಿಲೇರಿ ವೆರಾಂಡಾ ದಲ್ಲಿ ಇಣುಕಿದ.ಮನೆ ತುಂಬ ನಾನಾ ವಿಧದ ಸೌಂಡ್ ಬರ್ತಿತ್ತೆ ವಿನಃ ಯಾವ ಮನುಷ್ಯನೂ ಕಾಣಲಿಲ್ಲ.ಒಳಗೆ ಬಂದ ಆಸಾಮಿಗೆ ಮೊದಲು ಕಂಡಿದ್ದು ಅಲ್ಲಿದ್ದ ಟೀ ಪಾಯ್ ಮೇಲಿದ್ದ ಬೆಲೆಬಾಳುವ ಮೊಬೈಲ್.ಅದನ್ನು ಎತ್ತಿ ಸ್ವಿಚ್ ಆಫ್ ಮಾಡಿ ಜೇಬಿಗೆ ಇಳಿಬಿಟ್ಟ.ಹಾಗೇ ಹಜಾರದೊಳಗೆ ಕಾಲಿಟ್ಟ.ವಿಡಿಯೋ ಗೇಮ್ ನಲ್ಲಿ ಮುಳುಗಿದ್ದ ಗೋಪಿ ಒಮ್ಮೆ ತಲೆಎತ್ತಿ ಅನ್ನುತ್ತಾ "ಹಾಯ್..."ಎಂದು ಕೈ ವೇವ್ ಮಾಡಿ ಮತ್ತೆ ಕಣ್ಣು ಅಲ್ಲಿಯೇ ನೆಟ್ಟ.ಆ ಯುವಕ ಅಡುಗೆ ಮನೆಕಡೆಗೊಮ್ಮೆ

ನೋಡಿದ. ಮನೆಯ ಯಜಮಾನಿ ಮೊಬೈಲ್ ನಿಂದ ತೂರಿಬರುತ್ತಿದ್ದ ಹಾಡಿನೊಂದಿಗೆ ತಾನೂ ಹಾಡುತ್ತ ಅಡುಗೆ ಮಾಡುತ್ತಿದ್ದಳು.ನಿಶಬ್ದದಿಂದ ಆ ಯುವಕ ಹತ್ತು ಹೆಜ್ಜೆ ಮುಂದೆ ಬಂದವ ಎಡ ಬದಿಯ ಶೀನನ ರೂಮಿಗೆ ಎಂಟ್ರಿ ಕೊಟ್ಟ.ಕುಂಭಕರ್ಣನನ್ನೂ ಮೀರಿಸುವಂತೆ ಗೊರಕೆ ಹೊಡೆಯುತ್ತಿದ್ದ ಶೀನನನ್ನು ಕಂಡು ಬಲಭಾಗದಲ್ಲಿ ಸ್ವಲ್ಪ ಬಾಗಿಲು ತೆರೆದ ಬೀರುವಿನಲ್ಲಿ ತಡಕಾಡಿ ಬಟ್ಟೆಯ ಕೆಳಗೆ ಒಂದು ಪುಟ್ಟ ಪ್ಲಾಸ್ಟಿಕ್ ಬ್ಯಾಗ್ ನೊಳಗೆ ಒಂದಿಷ್ಟು ನೋಟುಗಳಿರುವುದನ್ನು ಬ್ಯಾಗ್ ಗೆ ಹಾಕಿಕೊಂಡ. ಪುನಃ ಅದೇ ರೂಮಿನಿಂದ ಒಳಗಡೆ ಇದ್ದ ದ್ವಾರದ ಮೂಲಕ ಮತ್ತೊಂದು ರೂಮಿಗೆ ಪ್ರವೇಶಿಸಿದ.ಅದು ಪಮ್ಮಿಯ ರೂಮ್ ಆಗಿತ್ತು.ಅಲ್ಲಿದ್ದ ನಿಲುವಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡವ ಪಕ್ಕದಲ್ಲಿದ್ದ ದೊಡ್ಡ ಟೇಬಲ್ ಡ್ರಾಯರ್ ಎಳೆದವನ ಕಣ್ಣಿಗೆ ಒಂದು ಚಿನ್ನದ ಚೈನು ಮತ್ತು ಉಂಗುರ ಕಂಡಿತು.ಅದನ್ನೂ ಎಗರಿಸಿ ಸದ್ದಿಲ್ಲದೇ ಹಜಾರದೊಳಗೆ ಬರುವಷ್ಟರಲ್ಲಿ ಅಡುಗೆ ಮನೆಯಲ್ಲಿದ್ದ ಪಮ್ಮಿ ಬಾತ್ ರೂಮಿಗೆ ಹೋಗಿ ಚಿಲಕ ಹಾಕಿರುವುದನ್ನು ಆಲಿಸಿ ,ಆ ಟಿವಿ ಸ್ಟ್ಯಾಂಡ್ ಪಕ್ಕದಲ್ಲಿ ಸ್ಕೂಟರ್ ಕೀ ಎಗರಿಸಿ ಲಗುಬಗೆಯಿಂದ ಈಚೆಗೆ ಬಂದು ಗೇಟಿನ ಆಚೆ ನಿಲ್ಲಿಸಿದ ಸ್ಕೂಟರ್ ಸ್ಟಾರ್ಟ್ ಮಾಡಿ ಭರ್.. ಎಂದು ಹೊರಟೇಬಿಟ್ಟ.

ಅದಾಗಿ ಮುಕ್ಕಾಲು ಘಂಟೆಯ ನಂತರ ಸ್ಕೂಟರ್, ಮೊಬೈಲ್,ಹಣ, ಚಿನ್ನದ ಒಡವೆ ಕಾಣೆಯಾಗಿರುವುದನ್ನು ಗಮನಿಸಿದ ಶೀನಿ ಆಂಡ್ ಫ್ಯಾಮಿಲಿ ಪರಸ್ಪರರು ಕೇರ್ ಲೆಸ್...ಕೇರ್ ಲೆಸ್ ಎಂದು ದೂಷಿಸಿಕೊಂಡು ಕೂಗಾಡಿದರೂ ಅದೆಲ್ಲ ಗಾಳಿಗೆ ಗುದ್ದಿ ಮೈ ಕೈ ನೋಯಿಸಿಕೊಂಡಂತಾಗಿತ್ತು. ■

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**
**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



ಏನ್ ರಾಯರೇ ಹೊರಟಿರಿ?

ಜವಾನನ್ ಕೈಲಿ ಕಾಗದ ಕೊಟ್ಟಿದ್ದೆ ಟಪಾಲಿಗೆ ಹಾಕಲು –
ಸರಿಯಾಗಿ ಹಾಕುತ್ತಾನೋ ಇಲ್ಲವೋ ನೋಡುಕ್ಕೆ ಹೋಗುತ್ತಿದ್ದೇನೆ.

# ಎಮ್ಮೆ ಕಟ್ಟಿ ನೋಡು

**| ಸಿ.ಆರ್.ಸತ್ಯ**

'ಮನೆ ಕಟ್ಟಿ ನೋಡು,ಮದುವೆ ಮಾಡಿ ನೋಡು' –ಇದು ಎಲ್ಲರಿಗೂ ತಿಳಿದಿರುವ ನಾಣ್ಣುಡಿ. ಇದರ ಜೊತೆಗೆ ನಾನುಇನ್ನೊಂದು ನಾಣ್ಣುಡಿ ಸೇರಿಸ್ತಾ ಇದೀನಿ. ಅದು 'ಎಮ್ಮೆ ಕಟ್ಟಿ ನೋಡು' ಅಂತ. ಕಾರಣ ಯಾಕೆ ಅಂತ ಹೇಳ್ತೀನಿ. ನಾನು ರಿಟೈರ್ಡ್ ಆದಮೇಲೆ ಏನೂ ಮಾಡದೇ ಕಾಲಹರಣ ಮಾಡುತ್ತಾ ಇದ್ದುದ್ದನ್ನು ನೋಡಿ, ನನ್ನ ಹೆಂಡತಿ ಕೋಪದಿಂದ "ಒಂದೆರಡು ಎಮ್ಮೆಗಳನ್ನಾದರೂ ಸಾಕಿ. ನಮಗೆ ಹಾಲೂ ಸಿಗುತ್ತೆ , ನಿಮ್ಮ ಸೋಮಾರಿತನವೂ ಕೊನೆಯಾಗುತ್ತೆ" ಅಂತ ಹೇಳಿದಳು. ನನಗೂ ಗುಡ್ ಐಡಿಯಾ ಅಂತ ಅನ್ನಿಸ್ತು. " ಯಾವುದೋ ಜ್ಞಾನದಲ್ಲಿ ಕೋಣ ತೊಗೋಬೇಡಿ. ಎಮ್ಮೆನಾ ಅಂತ ಚೆಕ್ ಮಾಡಿ ತೊಗೊಂಡು ಬನ್ನಿ" ಅಂತ ಬೇರೆ ಎಚ್ಚರಿಕೆ ಕೊಟ್ಟಳು. ಎಮ್ಮೆ ವಿಷಯ ಅಷ್ಟು ಗೊತ್ತಿಲ್ಲದಿದ್ದರೂ ಎರಡು ಎಮ್ಮೆಗಳನ್ನು ಕೊಂಡುಕೊಂಡೆ. ಮನೆಗೆ ಕರೆದುಕೊಂಡು ಬಂದೆ. ನಿಜ ಹೇಳಬೇಕು ಅಂದರೆ ಅವುಗಳು ನನ್ನನ್ನು ಕರೆದುಕೊಂಡು ಬಂದವು– ಅವುಗಳ ಎಳೆದಾಟದಿಂದ. ಮನೆಗೆ ಬಂದಮೇಲೆ ಒಂದು ಪ್ರಾಬ್ಲಮ್ ಆಯ್ತು. ನಮ್ಮ ಮನೆ ಚಿಕ್ಕದು. ಹಿತ್ತಲಿನಲ್ಲಿ ಜಾಗ ಇಲ್ಲ. ಮನೆ ಮುಂದೇನೂ ಜಾಗ ಇಲ್ಲ. ನಮ್ಮ ಮನೆ ಇರೋ ರಸ್ತೆ ಕೇವಲ ಎಂಟು ಅಡಿ ಅಗಲ ಅಷ್ಟೆ. ಅದಕ್ಕೆ ಕಾರು, ಬಸ್ಸು ಈ ತರಹ ದೊಡ್ಡ ವಾಹನಗಳು ನಮ್ಮ ರಸ್ತೆಗೆ ಬರೋದೇ ಇಲ್ಲ. ಆದರೆ ಎರಡು ಚಕ್ರದ ವಾಹನಗಳ ಗಲಾಟೆಯಂತೂ ಬಹಳವಾಗೇ ಇದೆ. ಇಲ್ಲಿಯ ಮನೆಯವರು ಟ್ರಾಫಿಕ್ ಪೋಲೀಸಿನವರಿಗೆ ಎಷ್ಟು ಬಾರಿ ಕಂಪ್ಲೈಂಟ್ ಕೊಟ್ಟು ಈ ಗಲಾಟೆಗೆ ಕಡಿವಾಣ ಹಾಕಿ ಅಂತ ಬೇಡಿಕೊಂಡಿದ್ರೂ, ಏನೂ ಆಗಿರಲಿಲ್ಲ.

ನನಗೊಂದು ಉಪಾಯ ಹೊಳೆಯಿತು. ನಮ್ಮ ರಸ್ತೆಯ ಎರಡು ಮೂಲೆಯಲ್ಲೂ ನನ್ನ ಎಮ್ಮೆಗಳನ್ನು ಕಟ್ಟಿ ಹಾಕಿದೆ. ಅವುಗಳಿಗೆ ಕ್ಷೀರಲಕ್ಷ್ಮಿ, ಭಾಗ್ಯಲಕ್ಷ್ಮಿ ಅಂತ ಹೆಸರಿಟ್ಟೆ. ಅವು ರೋಡ್ ಬ್ಲಾಕ್ ಮಾಡಿಕೊಂಡು ಅಲ್ಲೇ ಅಡ್ಡ ಕಟ್ಟಿ ತಮ್ಮ ವಾಸವನ್ನು ಭದ್ರ ಮಾಡಿಕೊಂಡವು. ಅಕ್ಕ ಪಕ್ಕ ಸಗಣಿ ಹಾಕಿ ಸಂತೋಷವಾಗಿದ್ದವು. ನಾನು ಹಾಲು ಕರೆಯೋದಿಕ್ಕೆ ಜೊತೆಗೆ ಅವು ಮೇಯೊದಕ್ಕೆ ಹುಲ್ಲು, ಕುಡಿಯೋದಕ್ಕೆ ನೀರು – ಇತ್ಯಾದಿ ಕೆಲಸಗಳಿಗೆ ಅವುಗಳ ಹತ್ತಿರ ಎರಡು ಸಲ ಹೋಗ್ತಿದ್ದೆ ಅಷ್ಟೆ. ಟೂ ವ್ಹೀಲರ್ ಗಲಾಟೆ ದಿಢೀರ್ ಅಂತ ನಿಂತೇ ಹೋಯಿತು. ಕೆಲವರು ನುಗ್ಗಿ ಬಂದವರು ಸಗಣಿ ಮೇಲೆ ಜಾರಿ ಕೆಳಗೆ ಬಿದ್ದು ಬುದ್ಧಿ ಕಲಿತರು. ರಸ್ತೆ ಶಾಂತ ಸ್ಥಿತಿಗೆ ಬಂತು. ರಸ್ತೆಯ ಮನೆಯವರೆಲ್ಲಾ ನನ್ನನ್ನುಅಭಿನಂದಿಸಿ ನೀವೂ, ನಿಮ್ಮ ಎಮ್ಮೆಗಳೂ ಚಿರಕಾಲ ಬಾಳಿ ಅಂತ ಹರಸಿದರು. ಜೊತೆಗೆ, ಅವು ಕೊಡುವ ಗಟ್ಟಿ ಹಾಲಿಗೂ ಬೇಡಿಕೆ ಬಂತು. ಮನೆಗೆ ಸಂಪಾದನೆಯೂ ಆಯಿತು. ಬಂದ ದುಡ್ಡೆಲ್ಲಾ ನನ್ನ ಹೆಂಡತಿ ಕೈ ಸೇರಿದ್ದರಿಂದ ಅವಳಿಗೂ ಸಂತೋಷ ಆಯ್ತು. ಒಂದು ದಿನ ಈ ಸಂತೋಷ ಇಮ್ಮಡಿ ಆಯ್ತು. ಅವತ್ತು ನಮ್ಮ ಏರಿಯಾ ಟ್ರಾಫಿಕ್ ಪೋಲೀಸ್ ಇನ್ಸ್ ಪೆಕ್ಟರ್ ನಮ್ಮ ಮನೆಗೆ ಬಂದು, " ಇಷ್ಟು ವರುಷಗಳಿಂದ ಈ ರಸ್ತೆಯಲ್ಲಿ ಆಗುತ್ತಿದ್ದ ಟೂ ವ್ಹೀಲರ್ ಹಾವಳಿಯನ್ನು ನಮಗಂತೂ ತಡೆಯೋಕ್ಕೆ ಆಗಲಿಲ್ಲ. ನೀವು ನಿಮ್ಮ ಎಮ್ಮೆಗಳಿಂದ ಒಳ್ಳೆಯ ಪರಿಹಾರ ಒದಗಿಸಿದ್ದೀರಿ. ನಿಮಗೆ ನಮ್ಮ ಧನ್ಯವಾದಗಳು. ಇಂತಹ ಮಹತ್ಕಾರ್ಯ ಮಾಡಿದ ನಿಮಗೆ ನಿಮ್ಮ ಎಮ್ಮೆಗಳಿಗೆ ಈ ವರುಷದ

ರಾಜ್ಯೋತ್ಸವ ಪ್ರಶಸ್ತಿಗೆ ಶಿಫಾರಸು ಮಾಡಿದ್ದೀವಿ" ಅಂತ ಬೇರೆ ಹೇಳಿದರು. ನಾನು ಎಮ್ಮೆಗಳ ಬೆನ್ನು ತಟ್ಟಿದೆ!

ಇದಲ್ಲದೆ ಒಳ್ಳೇ ಗಟ್ಟಿ ಹಾಲು ಕುಡಿದು, ಆ ಹಾಲಿನಿಂದ ರಸಗುಲ್ಲ, ಶ್ರೀಕಂಡ್, ದೂದ್ ಪೇಡ, ಬಾಸುಂದಿ, ಬರ್ಫಿ, ಜಾಮೂನ್, ರಸಮಲೈ, ಕುಲ್ಫಿ, ಪಾಯಸಗಳು, ಗಟ್ಟಿ ಬಾದಾಮಿ ಹಾಲು, ಪನೀರ್, ಚೀಸ್, ಐಸ್ ಕ್ರೀಮ್– ಇತ್ಯಾದಿ ಖಾದ್ಯಗಳನ್ನು,ಸಿಹಿ ತಿಂಡಿಗಳನ್ನು ಮಾಡಿ ತಿಂದು, ನಾವು ಮಾತ್ರ ಅಲ್ಲ, ನಮ್ಮ ಹಾಲಿನ ಗ್ರಾಹಕರೆಲ್ಲರೂ ಮೈ, ಕೈ ತುಂಬಿಕೊಂಡು, ಮೂರು ನಾಲ್ಕು ಕೆಜಿ.ತೂಕವನ್ನು ಹೆಚ್ಚಿಸಿಕೊಂಡಿದ್ದೂ ಆಯಿತು. ನಮ್ಮ ಪಕ್ಕದ ಮನೆಯವರು ನನ್ನನ್ನು ನೋಡಿ " ಪರವಾಗಿಲ್ಲ. ಒಳ್ಳೇ ಹಾಲಿನ ಸೇವನೆಯಿಂದ ನೀವು ಇತ್ತೀಚೆಗೆ ಕಳೆ ಕಳೆಯಾಗಿ ಕಾಣುತ್ತಾ ಇದ್ದೀರಿ. ನಿಮ್ಮ ಬಣ್ಣಾನೂ ಎಮ್ಮೆ ಬಣ್ಣಕ್ಕೆ ತಿರುಗುತ್ತಾ ಇದೆ" ಅಂತ ಹೊಗಳಿದರು.

ಇನ್ನೊಂದು ದಿನ ಶುಕ್ರ ದೆಸೆ ಅಂತಾರಲ್ಲಾ, ಅದೇ ತರಹದ 'ಎಮ್ಮೆ ದೆಸೆ' ನಮಗೆ ಹೊಡೀತು. ಅಮೆಝನ್ ಕಂಪೆನಿಯಿಂದ ಒಬ್ಬ ಬಂದ."ನಿಮ್ಮ ಎರಡು ಎಮ್ಮೆಗಳು ಹಾಕೋ ಸಗಣಿಯನ್ನು ಏನು ಮಾಡ್ತೀರಾ?" ಅಂತ ಕೇಳಿದ. " ಅವರು ಇವರು ತೊಗೊಂಡು ಹೋಗ್ತಾರೆ. ಸ್ವಲ್ಪ ಸಗಣಿಯನ್ನು ಹಾಗೇ ಬಿಡ್ತೀವಿ. ಯಾವನಾದರೂ ಟೂ ವ್ಹೀಲರ್ ಬಂದರೆ ಅವನು ಸ್ಕಿಡ್ ಆಗಿ ಬೀಳಲಿ ಅಂತ" ಅಂದೆ. ಅದಕ್ಕೆ ಅವನು "ನೋಡಿ, ಇನ್ನು ಮುಂದೆ ನಮ್ಮ ಕಂಪೆನಿ ಪ್ರತಿದಿನ ರಾತ್ರಿ ಎರಡು ಎಮ್ಮೆಗಳ ಸಗಣಿಯನ್ನುತೆಗೆದುಕೊಂಡು ಹೋಗುತ್ತೆ. ನಮ್ಮ ಫ್ಯಾಕ್ಟರಿಯಲ್ಲಿ ಒಂದು ಅಮೇರಿಕನ್ ಮೆಶಿನ್ ಇದೆ. ಅದು ಕಂಪ್ಯೂಟರ್ ಕಂಟ್ರೋಲ್ಡ್. ಅದರ ಒಳಗೆ ಸಗಣಿ ಹಾಕಿದ್ರೆ, ಅದನ್ನು ಅಚ್ಚು ಮಾಡಿ, ಬೆರಣಿ ರೂಪಕ್ಕೆ ತಂದು, ಅಲ್ಲಿಯೇ ಒಣಗಿಸಿ, ಪರಿಸರ ಪ್ರೇಮಿ ಪ್ಯಾಕಿಂಗ್‌ನಿಂದ ಪ್ಯಾಕ್ ಮಾಡಿ ಗ್ರಾಹಕರಿಗೆ ಕೊಡೋದಕ್ಕೆ ತಯಾರಿ ಮಾಡುತ್ತೆ. ಹಳ್ಳಿ ಕಡೆಗಳಲ್ಲಿ ಬೆರಣಿಗಳಿಗೆ ಒಳ್ಳೆ ಡಿಮ್ಯಾಂಡ್ ಇದೆ. ನಿಮಗೆ ತಿಂಗಳಿಗೆ ಮೂವತ್ತು ಸಾವಿರ ರೂಪಾಯಿ ಕೊಡ್ತೀವಿ, ಒಪ್ಪಿಗೇನಾ?" ಅಂತ ಕೇಳಿದ. ಅದಕ್ಕೆ ನನ್ನ ಹೆಂಡತಿ ಅಡುಗೆ ಮನೆಯಿಂದಲೇ "ಒಪ್ಪಿದೀವಿ" ಅಂತ ಕೂಗಿದಳು. ಅಲ್ಲಿಗೆ ನಮ್ಮ ಡೀಲ್ ಕ್ಲೋಸ್ ಆಗಿ, ಅಂದಿನಿಂದ ನಮ್ಮ ಆದಾಯ ಇನ್ನೂ ಹೆಚ್ಚಿತು. ಸಗಣಿಯನ್ನು ಪ್ರತಿ ದಿನವೂ ಕಂಪೆನಿ ತೆಗೆದುಕೊಂಡು ಹೋಗುವುದರಿಂದ, ಸುತ್ತಮುತ್ತಲ ಮನೆಯವರಿಗೆ ಹೊಡೆಯುತ್ತಿದ್ದ ನಾತ ಕಮ್ಮಿ ಆಯಿತು. ನನಗೆ 'ಪರಿಸರ ಪ್ರೇಮಿ' ಅಂತ ಪ್ರಶಸ್ತಿಯನ್ನು ಕೊಟ್ಟು ನಮ್ಮ ರಸ್ತೆಯ ಕ್ಷೇಮಾಭಿವೃದ್ಧಿ ಸಂಘ ಸನ್ಮಾನ ಮಾಡಿತು. ನನ್ನ ಎರಡು ಎಮ್ಮೆಗಳಿಗೂ ಹಾರ, ಶಾಲು ಹೊದಿಸಿದರು. ಹೀಗೆ ನಮ್ಮ ದೇಹದ ತೂಕ, ನಮ್ಮ ಮನೆಯ ಆದಾಯ ಹೆಚ್ಚಾಗಿ ನಮ್ಮ ಜೀವನ ಸುಗಮ ಹಾದಿಯನ್ನು ಹಿಡಿಯಿತು. ಕ್ಷೀರ ಲಕ್ಷ್ಮಿ, ಭಾಗ್ಯ ಲಕ್ಷ್ಮಿಗಳ ನಡುವೆ ನಾನೂ ನನ್ನ ಹೆಂಡತಿಯೂ ನಿಂತುಕೊಂಡು ತೆಗೆಸಿಕೊಂಡ ಒಂದು ಗ್ರೂಪ್ ಫೋಟೋವನ್ನು ಕಟ್ಟು ಹಾಕಿಸಿ ನಮ್ಮ ಮನೆಯ ಡ್ರಾಯಿಂಗ್ ರೂಮಿನಲ್ಲಿ ಎಲ್ಲರಿಗೂ ಕಾಣುವ ಹಾಗೆ ಇಟ್ಟುಕೊಂಡ್ವಿ.

ಇಷ್ಟೆಲ್ಲಾ ನಾನು ಹೇಳುತ್ತಿರೋದು ಖಂಡಿತಾ ಜಂಬ ಕೊಚ್ಚಿಕೊಳ್ಳುವುದಕ್ಕಲ್ಲ. ನನ್ನ ತರಹ ನೀವೂ ರಿಟೈರ್ಡ್ ಆಗಿ, ಸೋಮಾರಿಗಳಾಗಿದ್ದು, ನನ್ನ ಹೆಂಡತಿ ತರಹಾನೇ ಬುದ್ಧಿವಂತ ಹೆಂಡತಿಯನ್ನು ಪಡೆದು ಕೊಂಡಿದ್ದರೆ, ನೀವೂ ನನ್ನ ಹಾಗೆ ಎಮ್ಮೆ ಸಾಕುವ ಬಗ್ಗೆ ಯೋಚಿಸಿ. ' ಎಮ್ಮೆ ಕಟ್ಟಿ ನೋಡು' ನಾಣ್ಣುಡಿ ಖಂಡಿತ ಸತ್ಯವಾಗುತ್ತದೆ! ಆದರೆ ಹುಷಾರು! ನನ್ನ ಹೆಂಡತಿ ಎಚ್ಚರಿಸಿದ ಹಾಗೆ, ಎಮ್ಮೆ ಅಂದುಕೊಂಡು ಕೋಣಗಳನ್ನು ಮನೆಗೆ ತರಬೇಡಿ! ■

# ರಂಗರುಕ್ಮಿಣಿ.. ಮಾವಿನ ಪ್ರಸಂಗ

**। ವಿಲಾಸ ನಾ. ಹುದ್ದಾರ**

ಹಿಂದಿನ ದಿನವೇ ಮಕ್ಕಳು ಅಜ್ಜನ ಮನೆಯಿಂದ ತಿರುಗಿ ಬಂದಿದ್ದರು. ರಂಗ ಬೆಳಿಗ್ಗೆ ಬೇಗನೆ ಎದ್ದು ವಾಕಿಂಗ್ ಹೋಗುವ ತರಾತುರಿಯಲ್ಲಿದ್ದ. ಅಷ್ಟರಲ್ಲಿ ಮಗ ಎದ್ದು ಬಂದ, "ಪಪ್ಪಾ, ನಾನೂ ಬರ್ತೀನೀ...". "ಲಗೂನೆ ಬಾ ಮಾರಾಯಾ... ಬರೋದ ತಡಾ ಆದ್ರ ನಿನ್ನ ಪ್ರೀತೀಯ ಮಮ್ಮಾಗ ಚಹಾಕ್ಕ ತಡಾ ಆಗಿ ಸಿಡಕ್ತಾಳ....". ಅಪ್ಪ–ಮಗ ಇಬ್ಬರೂ ಹೊರಟರು. ಪ್ರತಿದಿನ ಇವನು 12–14 ಸುತ್ತು ವಾಕಿಂಗ್ ಮಾಡಾಂವ ಇವತ್ತ ತಡಾ ಆಗ್ತದಂತ 10 ಸುತ್ತು ಮುಗಿಸಿ ಹೊರಟ. ದುರಾದೃಷ್ಟ. ಅವನ ಗೆಳ್ಯಾ ಭೆಟ್ಟಿ ಆಗಬೇಕ. ಅವಾಂ ಒಂದ 10 ಮಿನಿಟ್ ಹರಟೆ ಹೊಡಕ್ಕೋತ ನಿಂತಾ. ಅವನ ರುಕ್ಕುಗೆ ತನ್ನ ವೇಳ್ಯಾಕ್ಕ ಚಹಾ ಕುಡಿಬೇಕ... ಸ್ವಲ್ಪ ಹೆಚ್ಚು ಕಡಿಮಿ ಆದ್ರ, ಆಕಿಗೆ ಚಡಪಡಿಕೆ ಆಗ್ತಿತ್ತು.. ಲಗ್ನ ಆದಾಗಿನಿಂದ ಇಬ್ಬರೂ ಕೂಡಿಯೇ ಚಹಾ ಕುಡಿಬೇಕು, ಅದೇ ರೂಢಿ. ಒಬ್ಬರನ್ನ್ ಬಿಟ್ಟ ಒಬ್ರ ಎಂದೂ ಚಹಾ ಕುಡೀತಿದ್ದಿಲ್ಲಾ ಮತ್ತ ಅವರಿಗೆ ಮಜಾ ಬರ್ತಿರಲಿಲ್ಲ. ಅವಳಿಗೆ ಚಹಾ ಕುಡಿದ ಮೇಲೆ ತನ್ನ ದಿನ ನಿತ್ಯ ಕರ್ಮಗಳ ಕೆಲಸ ಶುರು.

ಇವತ್ತ ಅವಳ ಕಡಿಂದ ದುರುಗುಟ್ಟಿ ನೋಡಿಸಿ ಕೊಳ್ಳೋದು ಡೆಫಿನೇಟ್ ಅನ್ಕೋತ ಮನೆಗೆ ಬಂದ. ಮಗನಿಗೂ ಗೊತ್ತಿತ್ತು ಮಮ್ಮಾನ ಸ್ವಭಾವ. ಸುಮ್ಮನೆ ಶೂಸ್ ತಗದು ತನ್ನ ರೂಮಿಗೆ ಹೋದ. ರಂಗ ಸಪ್ಪಳಾ ಮಾಡಲಾರದ ಸೋಫಾದ ಮ್ಯಾಲೆಕೂತ ಪೇಪರ್ ಕೈಗೆ ತೊಗೊಂಡ. ಅವಳು ಬಂದ ಚಹಾ ಗ್ಲಾಸ್ ಟೀಪಾಯ್ ಮ್ಯಾಲೆಇ ಟ್ಟ ಅಂವಾ ಕೈಯೊಳಗ ಹಿಡದ ಪೇಪರ್ ಬರೋಬ್ಬರಿ ಮಾಡಿದ್ಲು. ಅವನು ತಿರುವು ಮರುವು ಹಿಡ್ಕೊಂಡಿದ್ದಾ. ಚಹಾ ಕುಡದು ಮುಗೀತು. ಅವಳು ಎಂದಿನಂತೆ ಬಾಥರೂಮಿಗೆ ಹೋಗ್ತ ಅವಳಿಗೆ ನೆನಪಾತು. " ಮಾವಿನ ಹಣ್ಣಿನಾಂವ ಬರ್ಲಿಕ್ಕತ್ತಾನ.. ಯಾವಾಗ ಬೇಕಾದ್ರೂ ಬರಬಹುದು..... ನನ್ನ ಮೋಬೈಲಗೆ ಫೋನ ಮಾಡ್ತಾನ.... ಕ್ಲಬ್ ಹೌಸ್ ಹತ್ರ ಇರ್ತಾನ.. ಹೋಗಿ ಮಾವಿನ ಹಣ್ಣಿನ ಒಂದ ಡಬ್ಬಿ ತೊಗೊಂಡ ಬಾ. ಮತ್ತ ಚೆಕ್ ಮಾಡು ತರೋಕ್ಕಿಂತ ಮೊದ್ಲ.. ತಿಳೀತಿಲ್ಲೋ ?"

" ಏ.. ನನಗ...ಅಷ್ಟ ತಿಳಿಯೋದಿಲ್ಲೇನ್ ?"

" ನೀವು ಎಮ.ಬಿ.ಎ. ಮಂದಿಗೆ ಕೆಳಗಿನ ಮಂದಿ ಮ್ಯಾಲೆ ಜೋರು ಮಾಡಿ, ಹೆದ್ರಿಸಿ ಕೆಲಸಾ ತೊಗೊಳ್ಳೋದ ಗೊತ್ತಿರ್ತದ... ಸ್ವತಃ ಏನಾದರೂ ಮಾಡೋದ ಬಂದ್ರ ಆ ದೇವ್ರ ಕಾಪಾಡಬೇಕ.... ಇಲ್ಲೀವರಿಗೂ ಒಂದರ ಕೆಲ ಬರೋಬ್ಬರಿ ಮಾಡಿಯೇನ ನೆನಪ ಮಾಡ್ಕೋ..."

" ರುಕ್ಕು, ಸುಮ್ಮ ಸುಮ್ನ್ನ ಎಮ.ಬಿ.ಎ. ಆದವರಿಗೆ ಬಯ್ಯಬ್ಯಾಡಾ.... ನೀವು ಇಂಜಿನೀಯರಗೋಳ ಭಾಳ ಶ್ಯಾಣ್ಯಾರೇನ್...ಅದ ಹೋಗ್ಲಿ ಬಿಡು...ಬರೇ ಕೆಳಗ ಹೋಗಿ ಒಂದ ಹಣ್ಣಿನ ಬುಟ್ಟಿ ತರೋದಲ್ಲಾ... ಅದೇನ ದೊಡ್ಡ ಕೆಲಸಲ್ಲಾ..."

" ನೀ ಅಷ್ಟರೇ ಬರೋಬ್ಬರಿ ಮಾಡಪ್ಪಾ.."

" ಪಪ್ಪಾ ನಾ ಬರ್ಲೇನ ಬೇಕಾದ್ರ ನಿನ್ನ ಜೋಡಿ.. ಹೆಲ್ಪ ಮಾಡಲಿಕ್ಕೆ.."

" ಏ.. ಮಮ್ಮಾನ ಮಗನ.. ನೀ ಸುಮ್ನ ಕೂಡ.."

ಅವಳು ಬಾಥ್‌ರೂಮಿಗೆ ಹೋಗಿ 5 ಮಿನಿಟ ಆಗಿರಲಿಲ್ಲ ಆಕಿ ಮೋಬೈಲ್‌ಗೆ

ಮಾವಿನ ಹಣ್ಣಿನವಂದು ಫೋನ್ ಬಂತು. ರಂಗ ಹಣ್ಣಿನ ಡಬ್ಬಿ ತರಲಿಕ್ಕೆ ಕೆಳಗ ಹೋದ. ಕರೋನಾ ಕಾಲಾ... ಅದಕ್ಕ ಹಣ್ಣಿನಂವಾ ಒಬ್ಬೊಬ್ಬರಿಗೆ ಫೋನ್ ಮಾಡಿ ಕರಿಸಲಕ್ಕತ್ತಿದ್ದ. ರಂಗ ಹೋದಾಗ ಅಂವಾ ಯಾರದೋ ಜೋಡಿ ಫೋನ್‌ನೊಳಗ ಮಾತಾಡಲಿಕ್ಕತ್ತಿದ್ದ. ಇವನನ್ನು ನೋಡಿ, " ಯಾಕ ಅಕ್ಕೋವ್ರ ಬರಲಿಲ್ಲ?"

" ಅಕ್ಕೋವ್ರ ಬಂದ್ರ ಅಷ್ಟ ಹಣ್ಣ ಕೊಡೋವೇನ ನೀ ಮತ್ತ ?"

" ಹಂಗೇನಿಲ್ರಿ ಸಾಹೇಬ್ರ ...ಕಡೀಕ ಪ್ಯಾಕ್ ಮಾಡಿದ ಡಬ್ಬಿ ಅದ ನೋಡ್ರಿ..ಅದ ನಿಮ್ದು, ಚೆಕ್ ಮಾಡಿ ತೊಗೊಂಡ ಹೋಗ್ರಿ.." ತನ್ನ ಫೋನಿನ ಮಾತು ಮುಂದುವರೆಸಿದ.

ಕಡೀಕ ಮೂಲ್ಯಾಗ ಇದ್ದಡಬ್ಬಿ ತೊಗೊಂಡ ಮನೆಗೆ ಬಂದ. ಇವರ ಮನೀ ಒಳಗ ಬಂದ ಕೂಡ್ಲೆ ಒಂದು ಸಣ್ಣರೂಮ, ಅಲ್ಲೆ ಶೂ ರ್‍ಯಾಕ್, ನ್ಯೂಸ್ ಪೇಪರ್ ಇಡ್ಲಿಕ್ಕೆ, ಕೂತು ಶೂ ಹಾಕ್ಕೊಳಲಿಕ್ಕೆ ಗ್ರ್ಯಾನೈಟ್‌ಕಟ್ಟಿ. ಈಗ ಕರೋನಾ ಇದ್ದದ್ದಕ್ಕ ಮೊದಲ ತಂದ ಸಾಮಾನ ಎಲ್ಲಾ ಅಲ್ಲೇ ಇಟ್ಟು ...ತೊಳದು.... ಅಡಿಗಿ ಮನಿಗೆ ತೊಗೊಂಡು ಹೊಗೋದು. ಹಾಗಾಗಿ ಹಣ್ಣಿನ ಬುಟ್ಟಿ ಅಲ್ಲೇ ಕಟ್ಟಿ ಮ್ಯಾಲೆ ಇಟ್ಟ, ಸೆನೆಟೈಜರ್ ಹಚ್ಚಿಕೊಂಡ. ರುಕ್ಕು ಬಂದಳು.

" ಹಣ್ಣು ಚೆಕ್ ಮಾಡೀಅಲ್ಲಾ?"

" ಅವನ್ನೇನ್ ಚೆಕ್ ಮಾಡೋದು?"

" ಮತ್ತ ಡಬ್ಬಿ ತಗದದ್ದ ಅದ ಅಲ್ಲಾ?" . ಈಗ ಅದು ಅವನ ಲಕ್ಷಕ್ಕ ಬಂತು. ಆ ಹಣ್ಣಿನವಾ "ಅಕ್ಕೋರ ಬಂದಿಲ್ಲಾ" ಅಂತ ಕೇಳಿದ ಕೂಡ್ಲೆ ಇವಂಗ ಇರಿಸು ಮುರಿಸಾಗಿ ಅದ ಮೂಡನೊಳಗ ಹಣ್ಣು ಚೆಕ್ ಮಾಡೋದ ಮರೆತು ಹಂಗ ತಂದಿದ್ದ ಮತ್ತ ಆ ಡಬ್ಬಿ ತಗದದ್ದೂ ಅವನ ಗಮನಕ್ಕ ಬಂದಿರಲಿಲ್ಲ. ಅವಳ ಅದನ್ನ ತಗದ ನೋಡೀದ ತಕ್ಷಣ ಅವಳ ಚೆಹರಾನ ಬದ್ಲಿ ಆತು. ಅದನ್ನ ನೋಡೀದ ಕೂಡ್ಲೆ ಇವನಿಗೆ ಅನಿಸ್ತು ಏನೋ ಗದ್ಲಾ ಆತಂತ.

ಅಷ್ಟರೊಳಗ ಕರೆಗಂಟೆ ಆತು. ಬಾಗಲಾ ಇವನ ಹೋಗಿ ತಗದಾ. ಎದುರಿಗೆ ಹಣ್ಣಿನಾಂವಾ ಪ್ಯಾಕ್ ಮಾಡಿದ ಹಣ್ಣಿನ ಬುಟ್ಟಿ ಹಿಡಕೊಂಡ ನಿಂತಿದ್ದ.

"ಏನ ಸಾಹೇಬ್ರ, ನಿಮಗ ಕಡೀಗಿರೋ ಪ್ಯಾಕ್ ಮಾಡಿದ್ದ ಬುಟ್ಟಿ ತೊಗೋ ಅಂದ್ರ, ಕಡೀಗೆ ಮೂಲ್ಯಾಗ ಇಟ್ಟ ಬುಟ್ಟಿ ಹೊತ್ಕೊಂಡ ಬಂದೀರಲ್ಲಾ?"

ರುಕ್ಕು ಏನೂ ಮಾತಾಡದೇ ಅವನ ಕೈಯಿಂದ ಬುಟ್ಟಿ ಇಸ್ಕೊಂಡ, ಚೆಕ್ ಮಾಡಿದಳು. ಅದರೊಳಗ ಒಂದ ಹಣ್ಣು ಕೆಟ್ಟತ್ತು, ಅದನ್ನ ರಂಗ ತಂದ ಮೊದಲಿನ ಬುಟ್ಟಿಯಲ್ಲಿ ಹಾಕಿ ಅದನ್ನ ರಂಗನ ಮುಂದ ಹಿಡಿದು ಅದರೊಳಗ ಏನ ಅದ ಅಂತ ತೋರಸಿ, ಹಣ್ಣಿನವನಿಗೆ ಕೊಟ್ಟಳು. ಅವನು ತನ್ನ ಕೈಚೀಲದಲ್ಲಿದ್ದ ಒಂದು ಛೊಲೊ ಹಣ್ಣನ್ನ ಇವಳ ಕೈಗೆ ಕೊಟ್ಟ ನಡೆದ. ಹೋಗುವ ಮುಂದ ಇವನ ಕಡೆ ಒಂದ ವ್ಯಂಗ್ಯ ದೃಷ್ಟಿ ಬಿಟ್ಟಾ. ಇವನು ತಂದ ಬುಟ್ಟಿ ಒಳಗ ಎಲ್ಲರೂ ಚೆಕ್ ಮಾಡಿದಾಗ ಸಿಕ್ಕ ಕೆಟ್ಟ ಹಣ್ಣ ಹಾಕಿದ್ದು ಇದ್ದವು.

ರಂಗ ಮರುಮಾತಾಡದೇ ಬಂದು ಸೋಫಾದ ಮ್ಯಾಲೆಕೂತಾ. ಪೇಪರ ಕೈಲಿ ಹಿಡಕೊಂಡಾ. ಮತ್ತ ರುಕ್ಕು ಬಂದ ತಿರುವು-ಮರುವು ಹಿಡಿದ ಪೇಪರ್ ಬರೋಬರಿ ಮಾಡಿ ಇವನ ಕೈಗೆ ಕೊಟ್ಟು ಏನೋ ಗೊಣಗುತ್ತಾ ಮಾವಿನ ಹಣ್ಣು ತೊಳಿಲಿಕ್ಕೆ ಹೋದಳು.

■

●ದಂನಆ

- ಮನುಷ್ಯರಿಗೆ ಮನುಷ್ಯರ ಮೇಲೆ ವಿಶ್ವಾಸ ಹೋದಾಗ ಬಾಗಿಲು ಹುಟ್ಟಿತು; ಆ ವಿಶ್ವಾಸಕ್ಕೆ ಆಘಾತ ಆದಾಗ ಬೀಗ ಹುಟ್ಟಿತು. ಆ ವಿಶ್ವಾಸ ಪೂರಾ ಸತ್ತಾಗ ಸಿಸಿಟಿವಿ ಜನ್ಮ ತಾಳಿತು.
- ಅಷ್ಟು ಹೊತ್ತು ಮರದ ನೆರಳಿನಲ್ಲಿ ದಣಿವಾರಿಸಿಕೊಂಡವರು ಮೇಲೆದ್ದು ಮರ ಕಡಿಯಲು ಕೊಡಲಿ ಎತ್ತಿಕೊಂಡರು.
- ದಿ ಬೆಸ್ಟ್ ಥಿಂಗ್ಸ್ ಇನ್ ಲೈಫ್ ಆರ್ ನಾಟ್ ಥಿಂಗ್ಸ್.
- 'ನೀನು ಬದಲಾಗಿದ್ದೀಯ' ಎಂದು ಯಾರಾದರು ಪದೇ ಪದೇ ಹೇಳಿದರೆ ಮತ್ತೇನಿಲ್ಲ, ಅವರಿಗೆ ಬೇಕಾದ ಹಾಗೆ ನಾವು ವರ್ತಿಸುತ್ತಿಲ್ಲ ಅಷ್ಟೆ.
- ಭಾವಚಿತ್ರ ತೆಗೆದುಕೊಳ್ಳುವಾಗ ಇದ್ದ ಸಂತೋಷ ಅದನ್ನು ನೋಡುವಾಗ ಇರದು.
- ದಿ ಸ್ಟಮಕ್ ಈಸ್ ಫಾರ್ ಬೆಟರ್ ದ್ಯಾನ್ ಬ್ರೈನ್. ಇಟ್ ಸಿಗ್ನಲ್ಸ್ ವೆನ್ ಎಂಪ್ಟಿ.
- ಒಂದು ಶಾಂತ ಸಮುದ್ರ ಎಂದಿಗೂ ಶ್ರೇಷ್ಠ ನಾವಿಕರನ್ನು ಸೃಷ್ಟಿಸದು.
- ತಂದೆ ಕಟ್ಟಿದ ಮನೆಯಲ್ಲಿ ಮಕ್ಕಳಿರಬಹುದು ಆದರೆ ಮಕ್ಕಳು ಕಟ್ಟಿದ ಮನೆಯಲ್ಲಿ ತಂದೆ ತಾಯಿ ಇರುವುದು ಕಷ್ಟ.
- ನಾಳೆ ಎಂಬುದು ಒಂದು ಆಸೆ ಅಥವಾ ಕನಸು ಅಷ್ಟೆ. ಭರವಸೆ ಅಲ್ಲ.
- ಡು ನಾಟ್ ಟ್ರೈ ಟು ಫಿಕ್ಸ್ ವಾಟೆವರ್ ಕಂಸ್ ಇನ್ ಯುವರ್ ಲೈಫ್. ಫಿಕ್ಸ್ ಯುವರ್‌ಸೆಲ್ಫ್ ಇನ್ ಸಚ್ ಎ ದಟ್ ವಾಟೆವರ್ ಕಂಸ್ ಯು ವಿಲ್ ಬೆ ಫೈನ್.
- ನಿರ್ದೇಶಕ ರಾಜಮೌಳಿ ಅವರ ಜೀವನ ಈಗ ಎರಡು ಭಾಗ – ಬಾಹುಬಲಿಗೆ ಮುನ್ನ, ಬಾಹುಬಲಿಯ ನಂತರ.
- ಮನಿ ಈಸ್ ದಿ ವರ್ಸ್ಟ್ ಡಿಸ್‌ಕವರಿ ಆಫ್ ಹ್ಯೂಮನ್ ಲೈಫ್. ಬಟ್ ಇಟ್ ಈಸ್ ದಿ ಮೋಸ್ಟ್ ಟ್ರಸ್ಟೆಡ್ ಮೆಟೀರಿಯಲ್ ಟು ಟೆಸ್ಟ್ ಹ್ಯೂಮನ್ ನೇಚರ್.
- ಯಶಸ್ವಿ ಜೀವನಕ್ಕಿಂತ ತೃಪ್ತಿಕರ ಜೀವನ ಒಳ್ಳೆಯದು. ಏಕೆಂದರೆ ನಮ್ಮ ಯಶಸ್ಸನ್ನು ಬೇರೆಯವರು ಅಳೆಯುತ್ತಾರೆ. ತೃಪ್ತಿಯನ್ನು ನಾವೇ ಅಳೆಯುತ್ತೇವೆ.
- ಸುಸ್ತಾಗುವುದಕ್ಕೆ ಮೊದಲೇ ವಿಶ್ರಾಂತಿ ಪಡೆಯುವದನ್ನು ಸೋಮಾರಿತನ ಎನ್ನುತ್ತಾರೆ.
- ಸಂ ಪೀಪಲ್ ಗಿವ್ ಸೌಂಡ್ ಅಡ್ವೈಸ್ 99% ಸೌಂಡ್ 1% ಅಡ್ವೈಸ್.

■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | 98452 64304

You could also request any book of your choice by WhatsApp

# ಏನಾಯ್ತು, ನಿಮಗೇನಾಯ್ತು.....

**| ಹೆಚ್. ಗೋಪಾಲಕೃಷ್ಣ**

ಛಲ ಬಿಡದ ತ್ರಿವಿಕ್ರಮ ಮತ್ತೆ ವಿಧಾನಸೌಧದ ಮೂಲೆ ಮರದ ಬಳಿ ಬಂದ. ಅಲ್ಲಿದ್ದ ಶವವನ್ನು ಹೆಗಲ ಮೇಲೆ ಇರಿಸಿಕೊಂಡ. ಭರಭರ ಹೆಜ್ಜೆ ಹಾಕಲು ಶುರುಮಾಡಿದ. ಶವ ಹೇಳಿತು,

ತ್ರಿವಿಕ್ರಮ ಮಹಾರಾಜ ನನ್ನನ್ನು ಹೊತ್ತಿರುವ ಹಾಗೂ ಈ ಅವೇಳೆಯಲ್ಲಿ ನಡೆದು ಸಾಗುತ್ತಿರುವ ನಿನ್ನ ಆಯಾಸ ಕಳೆಯಲು ಈ ಕತೆ ಕೇಳು.

ಕತೆ ಮೂರು ವಿಭಿನ್ನವಾದ್ದು.

ಕತೆ ನಂತರ ನನ್ನ ಸಂಶಯಗಳಿಗೆ ನೀನು ಉತ್ತರಿಸಬೇಕು ಎಂದು ಕತೆ ಹೇಳಲು ಆರಂಭಿಸಿತು...

***

ಏನಾಗಿದೆ ನಿಮ್ಮ ಯಜಮಾನರಿಗೆ ಅಂತ ಎಲ್ಲರೂ ಕೇಳ್ತಿದ್ದಾರೆ, ಏನಾಯ್ತು ನಿಂಗೆ? ಅಂತ ಹೆಂಡತಿ ಕಣ್ಣು ಕೆಂಪಗೆ ಮಾಡಿಕೊಂಡು ಕೇಳಿದಳು.

ಆಗ ತಾನೆ ಅವರ ನಂಟರ ಮನೆಯಿಂದ ಬಂದಿದ್ದೋ, ಮೂರು ಬಸ್ಸು ಬದಲಾಯಿಸಿ ಒಂದು ಆಟೋ ಹಿಡಿದು ರಾತ್ರಿ ಹನ್ನೆರೆಡುವರೆಗೆ ನಮ್ಮ ಕೊಂಪೆ ಸೇರಿಕೊಂಡಿದ್ದೆವು.

ಯಾಕೇ ಏನಾಯಿತು? ಅವರು ಮಾಡಿದ ಎಲ್ಲಾ ಜೋಕುಗಳಿಗೆ ಬಿದ್ದೂ ಬಿದ್ದೂ ನಕ್ಕಲ್ಲಾ... ಅಂದೆ.

ನನ್ನ ರೆಲೇಷನ್ಸು ಜೋಕ್ ಮಾಡಿದರೆ ನೀವು ಮುಖ ಸಿಂಡರಿಸಿಕೊಂದು ಹರಳೆಣ್ಣೆ ಕುಡಿದವರ ಹಾಗೆ, ನಮ್ಮ ಮಾಜಿ ಪ್ರಧಾನಿಗಳ ಹಾಗೆ, ಆಗ ತಾನೇ ಪಕ್ಕದ ರಸ್ತೆಯ ಹುಡುಗರಿಂದ ಕಲ್ಲೇಟು ತಿಂದು ಬಂದ ನಮ್ಮ ರೋಡಿನ ನಾಯಿ ಹಾಗೆ, ನಾಲ್ಕು ದಿವಸದಿಂದ ಹೊಟ್ಟೆ ಕಟ್ಟಿರುವ ಗೊರಿಲ್ಲಾ ಹಾಗೆ ಇರ್ತಿರಾ ಅಂತ ನನ್ನ ಮೇಲೆ ನನ್ನಾಕೆ ಕಂಪ್ಲೇಂಟು.

ಈ ರೀತಿಯ ಕಂಪ್ಲೇಂಟು ಸುಮಾರು ಸಲ ಕೇಳಿದ ನಂತರ ನಾನು ತುಂಬಾ ಹುಷಾರು ಆಗಿದ್ದಿನಿ. ಹೆಂಡತಿ ಕಡೆಯವರ ಮನೆಗೆ ಹೋದಾಗ ಯಾರೇ ಯಾವ ಮಾತೇ ಆಡಲಿ, ಮೈಕೈಕುಲುಕಿಸಿ ನಗ್ತೀನಿ. ಹಹಾ ಹೋಹೋ ಹ್ಯಾಹೂ ಅಂತ ಕಿವಿಯಿಂದ ಕಿವಿತನಕ ನಕ್ಕು ನಕ್ಕು ನೋಡಿದವರಿಗೆ ಬಿದ್ದುಬಿದ್ದು ನಕ್ಕ ಭಾವನೆ ಬರಬೇಕು ಹಾಗೆ ಮಾಡ್ತೀನಿ.

ಈಗ ನೋಡಿದರೆ ಹೀಗೆ ಹೇಳ್ತಾ ಇದಾಳೆ ಹೆಂತಿ ಅಂತ ಸೋಜಿಗ ಆತು.

ಯಾಕಂತೆ? ನಾನೇನು ಅಂತಹ ಮಾಡಬಾರದ್ದು ಮಾಡಿದ್ದೆನಂತೆ... ಅಂತ ಪ್ರಶ್ನೆ ರೆವರ್ಟ್ ಮಾಡಿದೆ.

ಅಲ್ಲ ಅವರ ಮನೇಲಿ ಅದೇನು ಕೊಟ್ರು ತಟ್ಟೆ ಕಡೆ ತಲೆ ಎತ್ತಿ ನೊಡಲಿಲ್ಲವಂತೆ.... ಅಂದಳು.

ನಿಮಗಿಷ್ಟ ಅಂತ ಸುಬ್ಬಮ್ಮನ ಅಂಗಡಿಯಿಂದ ಕಾಂಗ್ರೆಸ್ಸು, ಖಾರದ ಗೋಡಂಬಿ,

ಕೋಡುಬಳೆ ನಿಪ್ಪಟ್ಟು ತರಿಸಿದ್ದರಂತೆ. ತಟ್ಟೆ ತುಂಬಾ ಪೇರಿಸಿ ಎದುರು ಇಟ್ಟರಂತೆ...

ನೀವು ಅದರ ಕಡೆಗೇ ನೋಡಲಿಲ್ಲ ಅಂತ ಭಾಗ್ಯ ಬೇಜಾರು ಮಾಡಿಕೊಂಡಳು...

ಭಾಗ್ಯ ಅಂದರೆ ನನ್ನಾಕೆ ಸೋದರತ್ತೆ ಮೊಮ್ಮಗಳು. ನಾನು ಅವಳು ಲಂಗ ಜಾಕೆಟ್ ಹಾಕೋ ಕಾಲದಿಂದ ನೋಡಿರೋನು.

ಈಗ ಅವಳಿಗೆ ಎರಡು ಗಂಡು ಕೂಸುಗಳು. ಒಂದು ಮೆಡಿಕಲ್ ಕೊನೆ ವರ್ಷ, ಮತ್ತೊಂದು ಇಂಜಿನಿಯರ್ ಮೂರನೇ ಸೆಮಿಸ್ಟರ್...

***

ಏನೋ ಮಾರಾಯ ನಿನಗೆ ಅದೇನಾಗಿದೆಯೋ... ಅಂತ ಗೆಳೆಯ ಮಧ್ಯ ರಾತ್ರಿ ಫೋನಾಯಿಸಿ ಗಾಬರಿಯಿಂದ ಕೇಳಿದ. ಕೋವಿಡ್ ಗಲಾಟೆ ಕಡಿಮೆ ಆದ ನಂತರ ಅವರ ಮನೆಗೆ ಹೋಗಿದ್ದೆ.

ಅವನ ಅತ್ತೆ ಅವನ್ ಮಾವ, ಅವನ ನಾದಿನಿ, ಅವನ ಅಕ್ಕ ತಂಗಿ.. ಹೀಗೆ ಅವನ ಮನೇಲಿ ಇದ್ದವರೆಲ್ಲಾರ ಸಂಗಡ ಮಾತು ಕತೆ ಆಡಿ ಮನೆ ಸೇರಿದ್ದೆ.

ನಮ್ಮ ಮನೆಗೆ ಬಂದರೆ ನೀನು ಫೋನು ಹಿಡಕೊಂಡು ಕುಕ್ಕರಿಸಿಕೊಂಡು ಇರ್ತಿಯ ಅಂತ ಅವರ ಮನೇಲಿ ಅವನ ಪಟಾಲಂ ನಾನು ಮೊದಮೊದಲು ಅವನ ಮನೆಗೆ ಹೋದಾಗ ಕಂಪ್ಲೈಂಟ್ ಮಾಡ್ತಾ ಇದ್ದವಂತೆ.

ಇದು ಅವನು ನನಗೆ ಒಂದು ಸಲ ಉಗುಳು ನುಂಗ್ತಾನುಂಗ್ತಾ ಹೇಳಲೋ ಬೇಡವೋ ಅಂತ ಮೀನಮೇಷ ಎಣಿಸಿ ಹೇಳಿದ್ದ, ಅವನ ಮನೆಗೇ ಎರಡನೇ ಸಲವೋ ಮೂರನೇ ಸಲವೋ ಹೋಗಿದ್ದಾಗ ಹೇಳಿದ್ದ.

ಅವತ್ತಿಂದ ಅವನ ಮನೆಗೆ ಹೋದರೆ ವಾಪಸ್ಸು ಬರೋವರೆಗೆ ನನ್ನ ಬಾಯಿ ತಮಿಳು ಸಿನಿಮಾ ಹೀರೋ ತರಹ ನಾನ್ ಸ್ಟಾಪ್ ವಟ ವಟ ಮಾಡ್ತಾ ಇರುತ್ತೆ.

ಉಂಡು ಮಲಗಿದಾಗ ಅವನ ಫೋನು ಬಡಕೊಂಡಿದ್ದು...

ಗಾಬರಿಯಿಂದ ಅದೇನಾಯ್ತೋ ಅಂದೆ.

ಅಡಿಗೆ ಮನೆಗೆ ನುಗ್ಗಿ ನುಗ್ಗಿ ಡಬ್ಬ ಹುಡುಕಿ ಇರೋದನ್ನೆಲ್ಲ ತಟ್ಟೆಗೆ ಸುರುವುಕೊಂಡೂ ಪೂರ್ತಿ ಬಾಚಿ ತೊಳೆದ ಹಾಗೆ ಖಾಲಿ ಮಾಡ್ತಾ ಇದ್ದೋನು ಇವತ್ತು ಅಡಿಗೆ ಮನೆ ಕಡೆ ತಿರುಗಿ ಸಹ ನೋಡಲಿಲ್ಲ ಅಂತ ಅತ್ತೆ ಬೇಜಾರು ಮಾಡಿಕೊಂಡಿದೆ.

ತಾರಸಿ ಮೇಲೆ ಕರಕೊಂಡು ಹೋಗಿ ಎರಡು ದಂ ಹೊಡಿತಿದ್ದವನು ಇವತ್ತು ಮೆಟ್ಟಲೆ ಹತ್ತಿಲ್ಲ ಅಂದರೆ ಅವನಿಗೆ ಏನಾಗಿದೆ ಅಂತ ಮಾವ ತಲೆ ಕೆಡಿಸಿಕೊಂಡ ಹಾಗಿದೆ.

ಪ್ರತಿಸಲ ಬಂದಾಗಲೂ ಹೊಸಾ ಸೀರೆ ತಗೊಂಡ್ರಾ ಹೊಸಾ ಬಳೆ ಮಾಡಿಸಿಕೊಂಡು ಇದೀರಾ ಅಂತ ಕೇಳಿ ಮುಖದ ತುಂಬಾ ಖುಷಿ ತೋರಿಸ್ತಾ ಇದ್ದವರು ಇವತ್ತು ಸೀರೆ ಬಳೆ ಜುಂಕಿ ವಿಷಯ ಕೇಳಲೇ ಇಲ್ಲ. ಅವರಿಗೆ ತೋರಿಸಬೇಕು ಅಂತ ಹೊಸದೆಲ್ಲಾ ಗುಡ್ಡೆ ಹಾಕಿಕೊಂಡು ಕೂತಿದ್ದೆವು, ಅವರಿಗೆ ಏನಾಯಿತು ಅಂತ ನಾದಿನಿ ಕೇಳ್ತಾ ಇದ್ದಾಳೆ.... ಅಂತ ಗೆಳೆಯ ಪರದಾಡಿದ...

***

ಅವನೂ ನಾನೂ ಒಂದೇ ಹಾಸ್ಟೆಲ್‌ನಲ್ಲಿ ಒಂದೇ ರೂಮಿನಲ್ಲಿ ನಾಲ್ಕು ವರ್ಷ ಜತೆಗೇ ಇದ್ದೋವರು.

ಅವನ ಇಂಚಿಂಚೂ ನನಗೆ ಅಂಗೈ ನೆಲ್ಲಿಕಾಯಿ ತರ ಗೊತ್ತು. ಯಾಕೆ ಹಿಂಗಾಗಿಬಿಟ್ಟ ಅವನು ಅಂತ ಸಂಜೀವ ಪರದಾಡ್ತಾ ಅಜ್ಜೀನ ಕೇಳಿದ. ಯಾಕೆ ಸಂಜೀವಣ್ಣ ಅದೇನಾಯ್ತು ಅಂತ ಅಜ್ಜಿ ಪರದಾಡಿಕೊಳ್ತು..

ಅಲ್ಲಮ್ಮಾ ಹಾಸ್ಟೆಲ್‌ನಲ್ಲಿ ನಾಲ್ಕು ವರ್ಷ ಜತೆ ಅಂತ ಹೇಳಿದೆ ಅಲ್ಲವಾ ಇವನ ಕತೆ ಕೇಳು. ಊರಿಂದ ಯಾರಾದರೂ ಇವನನ್ನ ನೋಡೋಕ್ಕೆ ಅಂತ ಬರ್ತಾ ಇದ್ರಲ್ಲ, ಆಗ ಇವನಮ್ಮನೋ ಇವನಜ್ಜಿನೋ ದಂರೋಟು, ಕೇಸರಿ ಹಲ್ವಾ ಬಾಂಬೆ ಮಿಠಾಯಿ... ಈ ರೀತಿ ಸ್ವೀಟ್ ಮಾಡಿ ಡಬ್ಬದ ತುಂಬಾ ತುಂಬಿ ಕಳಿಸ್ತಾ ಇದ್ದರು.

ರೂಮಿನಲ್ಲಿ ಅವನಿಲ್ಲದೆ ನಾವ್ಯಾರಾದ್ರೂ ಇದ್ರೆ ಅವನು ಬರೋ ಅಷ್ಟರಲ್ಲಿ ಇಡೀ ಡಬ್ಬ ಖಾಲಿ ಮಾಡಿ ತೊಳೆದು ಇಡ್ತಾ ಇದ್ದೋ. ಅಕಸ್ಮಾತ್ ಅವನಿರ ಬೇಕಾದರೆ ಡಬ್ಬ ಬಂತು ಅನ್ನು, ಇವನು ಅದನ್ನ ಪೆಟ್ಟಿಗೇಲಿ ಇಟ್ಟು ಬೀಗ ಹಾಕಿ ಬಿಡ್ತಾ ಇದ್ದ.

ನಾವು ಎದುರು ಇರೋವರೆಗೂ ಪೆಟ್ಟಿಗೆ ಮೇಲೆ ಕೂತು ತಿಂಡಿನ ಕಾವಲು ಕಾಯ್ತಾ ಇದ್ದ. ಹಾಗಿದ್ದೊನು ಹೇಗಾದ ನೋಡಿದೆಯಾ ....

ಏನಾಯ್ತು ಸಂಜೀವ ಅಣ್ಣಾ ಅಂತ ಅಜ್ಜಿ ಗಾಬರೀಲಿ ಕೇಳಿತು. ಅಲ್ಲಾಮ್ಮಾ ಅಷ್ಟೊಂದು ಇಷ್ಟ ಪಡ್ತಾ ಇದ್ದ ಸೀ ತಿಂಡಿಗಳನ್ನು ಇವತ್ತು ಹಾಗೆ ತಗೋ ತಗೋ ತಗೋ ಅಂತ ಕೈ ಸಡಿಲ ಬಿಟ್ಟು ಹಂಚಿ ಬಿಟ್ನಲ್ಲಾ ತಾಯಿ ಇವನಿಗೆ ಏನಾಯ್ತು....

***

ಬೇತಾಳ ಕತೆ ಮುಗಿಸಿತು. ರಾಜಾ ಈಗ ತಾನೇ ಹೇಳಿದ ಕತೆ ಕೇಳಿದೆ ತಾನೇ? ಸಮಸ್ಯೆಗೆ ಉತ್ತರ ತಿಳಿದೂ ನೀನು ಹೇಳದಿದ್ದರೆ ನಿನ್ನ ತಲೆ ಸಹಸ್ರ ಚೂರು ಗಳಾಗಿ ಬಿಡತ್ತೆ, ಹುಷಾರು.

ಎಲ್ಲರೂ ಏನಾಯ್ತು ಏನಾಯ್ತು ಏನಾಯ್ತು ಎಂದು ಪರಿತಪಿಸುವ ಕಾರಣ ವೇನು? ಒಂದೊಂದಾಗಿ ಪಾಮರರಿಗೆ ಸಂಪೂರ್ಣ ಅರ್ಥವಾಗುವ ಹಾಗೆ ವಿವರಿಸು ಮತ್ತು ಸಮಸ್ಯೆಗೆ ಪರಿಹಾರ ಹೇಳಿ ನಿನ್ನ ತಲೆ ಜೋಪಾನವಾಗಿ ಕಾಪಾಡಿಕೋ.... ಎಂದಿತು.

ರಾಜ ಗಹಗಹಿಸಿ ನಕ್ಕ. ಅಯ್ಯೋ ಬೇತಾಳವೆ, ನಿನ್ನ ಬುದ್ಧಿಗೆ ಅದೇನೆಂದು ಹೇಳಲಿ, ಎಂತಹ ಸುಲಭದ ಅರ್ಥ ನಿನಗೆ ಹೊಳೆಯದೆ ಹೋಯಿತೇ...?

ಇಲ್ಲಿ ಕೇಳು ಎಂದ.

ಮೊದಲನೇ ಪ್ರಸಂಗದಲ್ಲಿ ಹೆಂಡತಿ ಗಂಡನನ್ನು ಏನಾಯ್ತು ಏನಾಯ್ತು ಅಂತ ಕೇಳ್ತಾಳೆ. ತುಂಬಾ ಸುಲಭದ ಉತ್ತರ ಗಂಡನಿಗೆ ದವಡೆ ಹಲ್ಲು ಮುರಿದು ಹೋಗಿದೆ ಮತ್ತು ಯಾವ ಅಂಗಡಿಯ ಕಾಂಗ್ರೆಸ್ಸು, ಕೋಡುಬಳೆ ಅವನಿಗೆ ನೋಡಲೂ ಸಹ ಆಗದಷ್ಟು ಜೀವನದಲ್ಲಿ ಜಿಗುಪ್ಸೆ ಹುಟ್ಟಿದೆ..

ಎರಡನೇ ಪ್ರಸಂಗದಲ್ಲಿ ಮನೆ ಅವರ ಹತ್ರ ಈತ ಸಲೀಸಾಗಿ ಇಂದಿನ ಹಾಗೆ ಕಪ್ಪೆ ರೀತಿ ವಟವಟ ಅನ್ನಲಿಲ್ಲ ಅಂತ ತಾನೇ?

ಅವನಿಗೆ ಕಾನ್‌ಸ್ಟಿಪೇಷನ್ ಆಗಿದೆ. ಗೂಗಲ್‌ನಲ್ಲಿ ಅದರ ಬಗ್ಗೆ ಸಿಕ್ಕಿದ್ದೆಲ್ಲಾ ಓದಿದ್ದಾನೆ. ಬಾಯಿ ಬಿಟ್ಟರೆ ವಾಸನೆ ಬರುತ್ತೆ ಅಂತ ಓದಿರೋದೂ ಅವನ ತಲೇಲಿ ಕೊರೆದು ಬಿಟ್ಟಿದೆ. ಅದಕ್ಕೇ ಮಾತು ಕಡಿಮೆ, ಡಬ್ಬ ಹುಡುಕಿದ್ದು ಸಹ ಕಡಿಮೆ.

ಇನ್ನು ಸಂಜೀವನ ಕತೆಗೆ ಬಂದ್ರೆ ಸ್ನೇಹಿತನಿಗೆ ಈಗ ತಾನೇ ಸಕ್ಕರೆ ಖಾಹಿಲೆ ಶುರು ಆಗಿದೆ. ಡಾಕ್ಟ್ರು ಸ್ವೀಟ್ ನೋಡಬೇಡ ಸಾಯ್ತಿ ಅಂತ ಹೆದರ್ಸಿ ಬಿಟ್ಟಿದ್ದಾರೆ. ಅಂತೋನು ಸ್ವೀಟ್ ನೋಡಿದರೆ ಸಾಕು ಹೊಟ್ಟೆ ಉರಿಯಲ್ವಾ...? ಅದಕ್ಕೆ ಕಣ್ಣೆದುರು ಅದು ಇದ್ರೆ ತಾನೇ ಪ್ರಾಬ್ಲಮ್ಮು? ಅದೇ ಕಾರಣದಿಂದ ಎಲ್ಲರಿಗೂ ತಗೊಳ್ಳಿ ತಗೊಳ್ಳಿ ತಗೊಳ್ಳಿ ಅಂತ ಎಲ್ಲಾನೂ ಹಂಚಿಬಿಟ್ಟ.....

ರಾಜ ಮೌನ ಮುರಿದ ಕೂಡಲೇ ಬೇತಾಳ ಥ್ಯಾಂಗ್ ಅಂತ ಹೆಗಲಿನಿಂದ ಹಾರಿ ವಿಧಾನ ಸೌಧದ ಹತ್ತಿರ ದೌಡಾಯಿಸಿ ಕಣ್ಮರೆ ಆಯಿತು......

■

---

## ಹಣವೇ ನಿನ್ನಯ ಗುಣ

**।ಎ. ಆರ್. ಹರಿಪ್ರಸಾದ್**

ನಮ್ಮ ದೊಡ್ಡಪ್ಪ ಶರ್ಮರು ಮಲೆನಾಡಿನಲ್ಲಿ ಒಬ್ಬ ಜಮೀನುದಾರರು, ವಿದ್ವಾನ್, ಸಮಾಜಸೇವಕ, ಸ್ವಾತಂತ್ರ ಹೋರಾಟಗಾರರು ಅವರು ಉಪನ್ಯಾಸ ನೀಡುವುದರಲ್ಲಿ ಎತ್ತಿದ ಕೈ. ತಮ್ಮ ಕಂಚಿನ ಕಂಠದಿಂದ ಮಾತಾಡಲು ಪ್ರಾರಂಭಿಸಿದರೆ ಎಂಥ ಸಭೆಯಾದರೂ ನಿಶ್ಯಬ್ಧವಾಗಿರುತ್ತಿತ್ತು. ಯಾವುದೇ ವಿಚಾರವಾದರೂ ನಿರರ್ಗಳವಾಗಿ ಮಾತನಾಡುತ್ತಿದ್ದರು. ಶರ್ಮರು ಶಿವಮೊಗ್ಗದ ಸುಪ್ರಸಿದ್ಧ ವಕೀಲರಾಗಿದ್ದ ಶಾಸ್ತ್ರಿಗಳವರಲ್ಲಿ ತುರ್ತು ಅನಿವಾರ್ಯತೆಗಾಗಿ ಸುಮಾರು 5000 ಸಾಲ ಮಾಡಿದ್ದರು. ಎರಡು ವರ್ಷಕಾಲ ಮಳೆಬೆಳೆ ಸರಿಯಾಗಿ ಆಗದೇ ಇದ್ದುದರಿಂದ ಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿ ಮಾಡಲಾಗಲಿಲ್ಲ. ಅವರು ಎಂದೂ ಸಾಲವನ್ನು ಇಟ್ಟುಕೊಂಡವರಲ್ಲ. ಆದರೆ ಇದೊಂದು ಅನಿವಾರ್ಯ ಪರಿಸ್ಥಿತಿಯಾಗಿತ್ತು. ಒಂದು ದಿನ ಶಾಸ್ತ್ರಿಗಳು ಶರ್ಮರಿಗೆ ಸಾಲವನ್ನು ನಿಗದಿತ ಅವಧಿಯೊಳಗೆ ಪಾವತಿಸದಿದ್ದರೆ ಕೋರ್ಟಿಗೆ ದಾವಾ ಹಾಕುವುದಾಗಿ ಪತ್ರ ಬರೆದರು. ಆದರೆ ಶರ್ಮರಿಗೆ ಅದನ್ನು ಸಮಯದೊಳಗೆ ತೀರಿಸಲು ಆಗಲಿಲ್ಲ.

ಸರಿ, ಶಾಸ್ತ್ರಿಗಳು ಕೋರ್ಟಿಗೆ ದಾವಾ ಹಾಕಿದರು. ನನ್ನ ಪರ ವಕೀಲರು ಬೇಡ ಎಂದು ಶರ್ಮರು ಹೇಳಿದರು. ಖಟ್ಲೆ ವಿಚಾರಣೆಗೆ ಬಂತು. ಆ ದಿನ ಶರ್ಮರು ಹಳ್ಳಿಯಿಂದ ಸೀದಾ ಶಾಸ್ತ್ರಿಗಳ ಮನೆಗೇ ಹೋದರು. ಅಲ್ಲೇ ಸ್ನಾನ, ಸಂಧ್ಯಾವಂದನೆ, ಉಪಹಾರ ಎಲ್ಲ ಮುಗಿಸಿ ಅವರ ಕಾರಿನಲ್ಲೇ ಕೋರ್ಟಿಗೆ ತೆರಳಿದರು. ಆಗ ನ್ಯಾಯಾಧೀಶರು ಶರ್ಮರ ಹತ್ತಿರ ಏನು ಶರ್ಮರೇ ನೀವು ಸಾಲ ತೆಗೆದುಕೊಂಡದ್ದು ನಿಜವೇ ಎಂದು ಕೇಳಿದಾಗ ಅವರು ಒಪ್ಪಿಕೊಂಡರು. ಸಾಲ ತೀರಿಸುವುದಿಲ್ಲವೇ ಎಂದು ಕೇಳಿದಾಗ ಶರ್ಮರು ಇಲ್ಲ ಸ್ವಾಮೀ, ಖಂಡಿತ ತೀರಿಸುತ್ತೇನೆ ಆದರೆ ಒಂದೇ ಸಾರಿ ಎಲ್ಲವನ್ನೂ ಕೊಡಲು ಅಗುವುದಿಲ್ಲ. ನನಗೆ ಸಮಯ ಬೇಕು ಎಂದಾಗ ನ್ಯಾಯಾಧೀಶರು 3 ಕಂತು ಸಾಕೇ ಎಂದಾಗ ಅವರು ಆಗಲಿ ಎಂದರು. ಆಗ ನ್ಯಾಯಾಧೀಶರು ಮೊದಲನೆಯ ಕಂತಾಗಿ 2000 ಈ ದಿನ ಕೋರ್ಟಿಗೆ ಕಟ್ಟಬೇಕು ಎಂದು ಅಪ್ಪಣೆ ಮಾಡಿದರು. ಆಗ ಶರ್ಮರು ಶಾಸ್ತ್ರಿಗಳ ಕಡೆ ನೋಡಿದರು. ಆಗ ಶಾಸ್ತ್ರಿಗಳು ತಮ್ಮ ಜೇಬಿನಿಂದ 2000 ರೂಗಳನ್ನು ಕೋರ್ಟಿಗೆ ಕಟ್ಟಿದರು. ಆ ದಿನ ಕೋರ್ಟು ಮುಗಿದ ಮೇಲೆ ಶಾಸ್ತ್ರಿಗಳ ಕಾರಿನಲ್ಲಿಯೇ ಶರ್ಮರು ಅವರ ಮನೆಗೆ ಹೊಗಿ ಅಲ್ಲಿ ಊಟ ಮಾಡಿ ಊರಿಗೆ ತೆರಳಿದರು. ಇದು ಶರ್ಮರು ಶಾಸ್ತ್ರಿಗಳೊಂದಿಗೆ ಇಟ್ಟುಕೊಂಡಿದ್ದ ಸ್ನೇಹವನ್ನೂ ಶಾಸ್ತ್ರಿಗಳ ಕಟ್ಟುನಿಟ್ಟಿನ ವ್ಯವಹಾರದ ರೀತಿಯನ್ನೂ ತೋರಿಸುತ್ತದೆ. ಈ ಘಟನೆಯಿಂದ ಅವರಿಬ್ಬರ ಸ್ನೇಹಕ್ಕೇನೂ ಕೊರತೆಯಾಗಲಿಲ್ಲ. ಕೊನೆಗೂ ಶರ್ಮರು ಸಾಲವನ್ನು ತೀರಿಸಿದರು ಎನ್ನುವುದು ಮುಖ್ಯ.

# ಮದುವೆ – ಆಸ್ಕರ್ ವೈಲ್ಡ್ ಕಣ್ಣಿನಲ್ಲಿ

*ಸಂಗ್ರಹ* | **ಬೇಲೂರು ರಾಮಮೂರ್ತಿ**

**ಜನಪ್ರಿಯ ಇಂಗ್ಲಿಷ್ ಲೇಖಕ ಆಸ್ಕರ್ ವೈಲ್ಟ್ ಜೀವನದ ಅನೇಕ ಘಟ್ಟಗಳ ಬಗೆಗೆ ತನ್ನ ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾನೆ.**

**ಅವುಗಳನ್ನು ಸಂಗ್ರಹಿಸಿ ಎಪಿಗ್ರಾಮ್ಸ್ ಆಫ್ ಆಸ್ಕರ್ ವೈಲ್ಡ್ ಎನ್ನುವ ಪುಸ್ತಕವೂ ಬಂದಿದೆ. ಅದರಲ್ಲಿ ಮದುವೆ ಬಗೆಗೆ ಆಸ್ಕರ್ ವೈಲ್ಡ್ ಅವರ ಅನೇಕ ಪುಸ್ತಕಗಳಲ್ಲಿನ ಹೇಳಿಕೆಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ಕೊಡಲಾಗಿದೆ.**

1 ನನಗನಿಸುವ ಪ್ರಕಾರ ಹುಟ್ಟಿದ ಪ್ರತಿಯೊಬ್ಬರೂ ಮದುವೆಯಾಗಲೇ ಬೇಕು. ಏಕೆಂದರೆ ಕೆಲವೇ ಮಂದಿ ಸುಖವಾಗಿರೋದು ನನಗಿಷ್ಟವಿಲ್ಲ. (ದ ಪಿಕ್ಚರ್ ಆಫ್ ಡೋರಿಯನ್ ಗ್ರೇ)

2 ನನಗೆ ಯಾವಾಗಲೂ ಅನಿಸುವುದೇನೆಂದರೆ ಮದುವೆಯಗುವ ಹುಡುಗನಿಗೆ ಎಲ್ಲವೂ ಗೊತ್ತಿರಬೇಕು ಅಥವಾ ಏನೂ ಗೊತ್ತಿರಬಾರದು. (ದಿ ಇಂಪಾರ್ಟೆನ್ಸ್ ಆಫ್ ಬೀಯಿಂಗ್ ಅರ್ನೆಸ್ಟ್)

3 ಈಚಿನ ದಿನಗಳಲ್ಲಿ ನೋಡಲು ಎಲ್ಲ ಬ್ರಹ್ಮಚಾರಿಗಳೂ ಸಂಸಾರಸ್ಥರಂತೆಯೂ ಎಲ್ಲ ಸಂಸಾರಸ್ಥರೂ ಬ್ರಹ್ಮಚಾರಿಗಳಂತೆಯೂ ಗೋಚರಿಸುತ್ತಾರೆ (ದ ಪಿಕ್ಚರ್ ಆಫ್ ಡೋರಿಯನ್ ಗ್ರೇ )

4 ಹೆಂಗಸು ಮರುಮದುವೆಯಾದಳು ಎಂದರೆ ಅವಳು ಮೊದಲ ಗಂಡನನ್ನು ಕಂಡು ಅಸಹ್ಯಪಡುತ್ತಿದ್ದಳು ಅಂತ. ಅದೇ ಒಬ್ಬ ಗಂಡು ಮರುಮದುವೆಯಾದ ಎಂದರೆ ಅವನು ಮೊದಲ ಹೆಂಡತಿಯನ್ನು ಆರಾಧಿಸುತ್ತಿದ್ದ ಅಂತ. ಹೆಂಗಸು ತನ್ನ ಅದೃಷ್ಟ ಪರೀಕ್ಷೆ ಮಾಡುತ್ತಾಳೆ. ಗಂಡು ಬದುಕಿಗೆ ಗಂಡಾಂತರ ತಂದುಕೊಳ್ಳುತ್ತಾನೆ. (ದ ಪಿಕ್ಚರ್ ಆಫ್ ಡೋರಿಯನ್ ಗ್ರೇ)

5 ಪರಿಪೂರ್ಣ ಗಂಡ ಎನ್ನುವ ಒಂದು ವಸ್ತು ಈ ಭೂಮಿಯಲ್ಲೇ ಇರಲು ಅಸಾಧ್ಯ. ಮದುವೆ ಎನ್ನುವ ಸಂಸ್ಥೆಯೇ ಹುಸಿ (ದ ವುಮನ್ ಆಫ್ ನೋ ಇಂಪಾರ್ಟೆನ್ಸ್)

6 ಇಂಗ್ಲಿಷ್ ಮಹಿಳೆಯರು ಮದುವೆಯಾಗುವ ತನಕ ತಮ್ಮ ಭಾವನೆಗಳನ್ನು ಮುಚ್ಚಿಟ್ಟು ನಂತರ ಅವುಗಳೇನೆಂದು ತೋರಿಸುತ್ತಾರೆ (ದ ವುಮನ್ ಆಫ್ ನೋ ಇಂಪಾರ್ಟೆನ್ಸ್)

7 ಮದುವೆಗೆ ಪರಿಪೂರ್ಣವಾದ ತಳಹದಿ ಅಂದರೆ ಪರಸ್ಪರರನ್ನು ತಪ್ಪಾಗಿ ತಿಳಿದುಕೊಳ್ಳುವುದು (ಲಾರ್ಡ್ ಆರ್ಥರ್ ಸೇವಿಲ್ಸ್ ಕ್ರೈಮ್ )

8 ಇಪ್ಪತ್ತು ವರ್ಷಗಳ ವಿವಾಹರಹಿತ ರಮ್ಯಜೀವನ ಅವಳನ್ನು ಪಾಳುಬಿದ್ದವಳಂತೆ

ತೋರಿದರೆ ಇಪ್ಪತ್ತು ವರ್ಷಗಳ ಸಂಸಾರಿಕ ಜೀವನ ಅವಳನ್ನು ಒಂದು ಸಾರ್ವಜನಿಕ ಕಟ್ಟಡದಂತೆ ತೋರುತ್ತದೆ (ದ ವುಮನ್ ಆಫ್ ನೋ ಇಂಪಾರ್ಟೆನ್ಸ್)

9 ಗಂಡಸು ಮದುವೆಯಾಗುತ್ತಾನೆ ಏಕೆಂದರೆ ಅವನಿಗೆ ಒಬ್ಬನೇ ಹೆಣಗಿ ಸಾಕಾಗಿರುತ್ತದೆ, ಹೆಣ್ಣು ಮದುವೆಯಾಗುತ್ತಾಳೆ ಏಕೆಂದರೆ ಅವಳಲ್ಲಿ ಅತೀವ ಕುತೂಹಲ ಇರುತ್ತದೆ. ನಂತರ ಇಬ್ಬರಿಗೂ ಆಶಾಭಂಗವಾತ್ತದೆ. ( ದ ಪಿಕ್ಚರ್ ಆಫ್ ಡೋರಿಯನ್ ಗ್ರೇ )

10 ನಿಶ್ಚಿತಾರ್ಥಕ್ಕೂ ಮದುವೆಗೂ ಹೆಚ್ಚು ಅಂತರ ಇರಲೇಬಾರದು ಏಕೆಂದರೆ ಅದು ಪರಸ್ಪರರರ ಗುಟ್ಟುಗಳನ್ನು ಪತ್ತೆಮಾಡಲು ಅವಕಾಶ ಮಾಡಿಕೊಡುತ್ತದೆ. ಅದು ಮದುವೆಯಂತಹ ಸಂಬಂಧಕ್ಕೆ ಅನಾವಶ್ಯಕ. (ದಿ ಇಂಪಾರ್ಟೆನ್ಸ್ ಆಫ್ ಬೀಯಿಂಗ್ ಅರ್ನೆಸ್ಟ್ )

11 ಯಾವ ಗಂಡಸೂ ತನ್ನ ಹೆಂಡತಿಯಿಂದ ಯಾವ ವಿಚಾರವನ್ನೂ ಮುಚ್ಚಿಡಬಾರದು. ಏಕೆಂದರೆ ಹೇಗಿದ್ದರೂ ಅವಳು ಅದನ್ನು ಕಂಡುಹಿಡಿದೇಬಿಡುತ್ತಾಳೆ (ಇನ್‌ಕಾನ್ವರ್ಸೇಷನ್ )

12 ಎಲ್ಲ ಗಂಡಸರೂ ಮದುವೆಯಾದ ತಮ್ಮ ಹೆಂಡತಿಯರ ಆಸ್ತಿ. ಏಕೆಂದರೆ ಮದುವೆಯಾದ ಹೆಣ್ಣಿನ ಆಸ್ತಿ ಏನೆಂದು ವಿವರಿಸಲು ಇದೊಂದೇ ವಿವರಣೆ ಕೊಡಲು ಸಾಧ್ಯವಾಗುವುದು (ಎ ಉಮನ್ ಆಪ್ ನೋ ಇಂಪಾರ್ಟೆನ್ಸ್)

13 ನಾವು ನಮ್ಮ ಗಂಡಂದಿರ ಗುಟ್ಟುಗಳನ್ನು ಆಗಾಗ ಹುಡುಕುತ್ತಾ ಇರದಿದ್ದರೆ ಅವರಿಗೆ ನಾವು ಇರುವುದೇ ಮರೆತು ಹೋಗುತ್ತದೆ. ಇದು ನಮ್ಮಲ್ಲಿ ಪರಿಪೂರ್ಣವಾದ ಪತ್ತೇದಾರಿ ಕಲೆ ಇದೆ ಎನ್ನುವುದನ್ನು ನೆನಪಿಸುವುದಕ್ಕೆ. (ಲೇಡಿ ವಿಂಡರ್ಮಿರ್ಸ್ ಫ್ಯಾನ್ )

14 ನನಗೂ ನನ್ನ ಗಂಡನಿಗೂ ನಿಶ್ಚಿತಾರ್ಥ ಆದಾಗ ಅವನು ನನ್ನ ಮುಂದೆ ಮಂಡಿಯೂರಿ ಸಕಾರಾತ್ಮಕವಾಗಿ ನಾನು ಈ ಹಿಂದೆ ಯಾವ ಹುಡುಗಿಯನ್ನೂ ಪ್ರೀತಿಸಿಲ್ಲ, ಯಾವ ಹುಡುಗಿಯೊಂದಿಗೂ ಯಾವ ತರಹದ ಸಂಬಂಧವನ್ನೂ ಇಟ್ಟುಕೊಂಡಿಲ್ಲ. ನಿನ್ನನ್ನು ಇಷ್ಟಪಡುವ ಮೊದಲು ನಾನು ಯಾವ ಹುಡುಗಿಯನ್ನೂ ಇಷ್ಟಪಟ್ಟಿರಲಿಲ್ಲ ಎಂದಿದ್ದ. ನಾನು ಆಗಿನ್ನೂ ಚಿಕ್ಕವಳು. ಅವನನ್ನು ನಂಬಲಿಲ್ಲ. ಆದರೆ ಈ ಕುರಿತು ಯಾರಲ್ಲಿಯೂ ವಿಚಾರಿಸಲೂ ಇಲ್ಲ. ಆದರೆ ಮದುವೆಯಾಗಿ ಐದಾರು ತಿಂಗಳಾದ ಮೇಲೆ ನನ್ನ ಗಂಡ ಹೇಳಿದುದು ಎಲ್ಲವೂ ಅಕ್ಷರಶ: ನಿಜ ಎನಿಸಿದ ಮೇಲೆ ಯಾಕೋ ಇಂಥಾ ಗಂಡಸರ ಬಗೆಗೆ ಅನಾಸಕ್ತಿ ಮೂಡುತ್ತದೆ ಎನಿಸುತ್ತಿದೆ. (ಎ ಉಮನ್ ಆಫ್ ನೋ ಇಂಪಾರ್ಟೆನ್ಸ್)

■

# ನಾನೊಬ್ಬನೇ ಹಾಗೇ–ಹೀಗೆ ಅಲ್ಲಾ....!

**I ಎ.ವಿಜಯೇಂದ್ರ ರಾವ್**

ಶಿಸ್ತಿಗೆ ಹೆಸರಾಗಿದ್ದ ಪಾಂಡುರಂಗ ರಾಯರು ಉನ್ನತ ಸರ್ಕಾರಿ ಹುದ್ದೆಯಿಂದ ಈಗಷ್ಟೇ ನಿವೃತ್ತಿ ಹೊಂದಿದ್ದರು.ಸ್ವಲ್ಪ ದಿನಕ್ಕೆ ಮನೆಯಲ್ಲಿ ಇರುವುದು ಅವರಿಗೆ ಬೇಜಾರಾಗುತ್ತಿತ್ತು.ಮನೆಯಲ್ಲಿ ಮೂರು ಹೊತ್ತು ಹೆಂಡತಿಯ ಕಿರಿ ಕಿರಿ ಬೇರೆ. ಒಂದು ದಿನ ಮನೇಲಿ ಹೆಂಡತಿ ಜೊತೆಗೆ ಯಾವುದೋ ವಿಷಯಕ್ಕೆ ಮನಸ್ತಾಪ ಮಾಡಿಕೊಂಡು ಆಚೆಗೆ ಹೊರಟರು. ಆಗ ಅವರಿಗೆ ಹೆಂಡತಿ ಯಾವತ್ತೋ ಒಂದು ಸ್ವಲ್ಪ ಹೆಸರು ಬೇಳೆ ಬೇಕಾಗಿತ್ತು ಅಂತ ಹೇಳಿದ್ದು ಜ್ಞಾಪಕಕ್ಕೆ ಬಂತು. ಅದಕ್ಕೆ....

ಅಲ್ಲೇ ಹತ್ತಿರದಲ್ಲಿದ್ದ ಕಿರಾಣಿ ಅಂಗಡಿಗೆ ಹೋದರು.ಅಲ್ಲಿ ಒಬ್ಬ ಚಿಕ್ಕ ಹುಡುಗ ಇದ್ದ.ಅವನಿಗೆ ಸ್ವಲ್ಪ ರೇಗಿಸಿ, ಕಿರಿ ಕಿರಿ ಮಾಡೋಣವೆಂದು ಆಲೋಚಿಸಿ – ನೋಡಪ್ಪಾ, ನನಗೆ ಸರಿಯಾಗಿ 742 ಹೆಸರು ಬೇಳೆಕಾಳು ಬೇಕು ಎಂದರು.ಅವನಿಂದ ಏನಾದರೂ ವಿರೋಧವನ್ನು ಅಪೇಕ್ಷಿಸಿದ್ದ ರಾಯರಿಗೆ, ಅವನು ಏನೂ ಹೇಳದೆ ಕೂಲಾಗಿ 200 ಗ್ರಾಂ ಹೆಸರು ಬೇಳೆಯನ್ನು ತೂಗಿ ಕೊಟ್ಟನು.ಅದನ್ನು ನೋಡಿದ ರಾಯರು – ಏನಪ್ಪಾ, ನಾನು ನಿನಗೆ 742 ನಂಬರ್ ಹೆಸರು ಬೇಳೆ ಕಾಳುಗಳನ್ನು ಕೇಳಿದೆ.ಆದರೆ, ನೀನು ಏನೂ ಎಣಿಸದೆ,ಆರಾಮವಾಗಿ 200 ಗ್ರಾಂ ತೂಕ ಮಾಡಿ ಕೊಟ್ಟುಬಿಟ್ಟೆ ಎಂದು ಕೇಳಿದಾಗ, ಅವನು – ಸಾರ್, ನೀವು ಮನೆಗೆ ಹೋಗಿ ಎಣಿಸಿ ನೋಡಿ,

ಅದರಲ್ಲಿ ನೀವು ಕೇಳಿದ 742 ಹೆಸರು ಕಾಳುಗಳೇ ಇರುವುದು.ಒಂದು ಜಾಸ್ತಿ ಅಥವಾ ಕಮ್ಮಿ ಇರುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದನು.ಇದನ್ನು ಕೇಳಿದ ರಾಯರಿಗೆ ಆಶ್ಚರ್ಯವಾಗಿ – ನೀನು ಹೇಗೆ ಕರಾರುವಾಕ್ಕಾಗಿ ಅಷ್ಟೇ ಇದ್ದೇ ಇರುತ್ತೆ ಅಂತ ಹೇಳುತ್ತಿಯಾ? ಎಂದು ಕೇಳಿದಾಗ, ಅವನು – ನನಗೆ ನನ್ನ ತಾತ ಹೇಳಿದ್ದಾರೆ, ಒಂದು ಕೆಜಿ ಹೆಸರು ಬೇಳೆಯಲ್ಲಿ ಸರಿಯಾಗಿ 3710 ಹೆಸರು ಬೇಳೆ ಕಾಳು ಇರುತ್ತೆ ಅಂತ.ಅದಕ್ಕೆ ನೀವು 742 ಹೆಸರು ಬೇಳೆ ಕಾಳುಗಳು ಕೇಳಿದಾಗ, ನಾನು ಆರಾಮವಾಗಿ ಅದರಲ್ಲಿ ಐದನೇ ಒಂದು ಅಂಶವಾಗಿ 200 ಗ್ರಾಂ ತೂಕ ಮಾಡಿ ನಿಮಗೆ ಕೊಟ್ಟೆ ಎಂದಾಗ, ರಾಯರು – ಎಲಾ ಇವನಾ ಅಂದ್ಕೊಂಡು, ಅದ್ಸರಿ, ನಿಮ್ಮ ತಾತ ಏನು ಮಾಡುತ್ತಾರೆ ? ಎಂದು ಕೇಳಿದಾಗ, ಅವನು – ಅವರು ನಿಮ್ಮಂತಯೇ , ರಿಟೈರ್ಡ್ ಸರ್ಕಾರಿ ಆಫೀಸರ್, ಅವರು ಮನೆಯಲ್ಲಿ ಬೇಜಾರಾಗುತ್ತೆ ಅಂತ ಈ ಥರದ ಕೆಲಸ ಮಾಡುತ್ತಿರುತ್ತಾರೆ.ಹಾಗೆ ಅವರು ಹೇಳಿದ್ದಾರೆ....

ಒಂದು ಕೆಜಿ ತೊಗರಿ ಬೇಳೆಯಲ್ಲಿ 3340 ಕಾಳು ಇರುತ್ತೆ ಅಂತ

ಒಂದು ಕೆಜಿ ಉದ್ದಿನ ಬೇಳೆಯಲ್ಲಿ 3480 ಕಾಳು ಇರುತ್ತೆ ಅಂತ

ಒಂದು ಕೆಜಿ ಸಾಸುವೆಯಲ್ಲಿ 11460 ಸಾಸುವೆ ಇರುತ್ತೆ ಅಂತ

ಅಷ್ಟರಲ್ಲಿ.. ಲಾಕ್ ಡೌನ್ ಸಡಿಲಿಕೆ ಆಯ್ತು, ಇಲ್ಲದಿದ್ದರೆ ಅವರು ಒಂದು ಕೆಜಿ ಉಪ್ಪಿಟ್ಟು ರವೆಯಲ್ಲಿ ಎಷ್ಟು ರವೆ ಇರುತ್ತೆ ಅಂತಾನೂ ಎಣಿಸಿ ಇರುತ್ತಿದ್ದರು....ಎಂದು ಅವನು ಹೇಳಿದಾಗ, ರಾಯರು ನಾನೇ ಸ್ವಲ್ಪ ಹಾಗೆ ಹೀಗೆ ಅಂದ್ಕೊಂಡಿದ್ದೆ, ಇವನ ತಾತ ನೋಡಿದ್ರೆ ನನ್ನನ್ನೇ ಮೀರಿಸೋ ಹಾಗಿದ್ದಾರಲ್ಲ ಎಂದು ಆಶ್ಚರ್ಯ ಪಡುತ್ತಾ ತಮ್ಮ ಮನೆ ಕಡೆ ಹೊರಟರು. ■